ಜನಮನದ ದನಿ

# ಪ್ರಜೋದಯ

ಸಂಪಾದಕ : ಜೆ.ಆರ್. ಕೆಂಚೇಗೌಡ

02 ಜೂನ್, 2026 ಮಂಗಳವಾರ ಬೆಲೆ ₹ 2.00 ಸಂಪುಟ : 20 ಸಂಚಿಕೆ : 83 | ಪುಟ-4 | ಹಾಸನ | E-mail : prajodayahsn@gmail.com | RNI NO: KARKAN/2007/22629




ಇಂಡಿಯನ್ ಪ್ರೀಮಿಯರ್ ಲೀಗ್ 2026ರಲ್ಲಿ ಮೊದಲ ಟ್ರೋಫಿ ಗೆಲ್ಲಲು ಬರೋಬ್ಬರಿ 18 ವರ್ಷ ತೆಗೆದುಕೊಂಡಿದ್ದ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡವು, ಇದೀಗ ಸತತ 2ನೇ ಟ್ರೋಫಿ ಗೆದ್ದು ಬೀಗಿದೆ.



ಪಿಚ್ ಮೇಲೆ ಮಲಗುತ್ತಿದ್ದ ಐಪಿಎಲ್ ಸ್ಟಾರ್ » 2


ಸ್ಥಳೀಯವಾಗಿಯೇ ಗುಣಮಟ್ಟದ ವೈದ್ಯಕೀಯ ಸೇವೆ ಅಗತ್ಯ » 3


ಕೃಷಿ ವೆಚ್ಚಕ್ಕೆ ಕಡಿವಾಣ ಹಾಕಲು ಜಾಗೃತಿ ಮೂಡಿಸಿ » 4


# ರಾಜ್ಯಸಭೆ, ಪರಿಷತ್ ಚುನಾವಣೆಗೆ ಅಧಿಸೂಚನೆ

- ಎರಡ್ಮೂರು ದಿನಗಳಲ್ಲಿ ಅಭ್ಯರ್ಥಿಗಳ ಅಂತಿಮ ಸಾಧ್ಯತೆ
- ಜೂ.18ರಂದು ಮತದಾನ
- ರಾಜ್ಯಸಭೆಯ 4 ಸ್ಥಾನಗಳಲ್ಲಿ ಕಾಂಗ್ರೆಸ್ 3, ಬಿಜೆಪಿ 1 ಗೆಲ್ಲಲು ಅವಕಾಶ
- ವಿಧಾನ ಪರಿಷತ್‌ನ 7 ಸ್ಥಾನಗಳ ಪೈಕಿ ಕಾಂಗ್ರೆಸ್ 4, ಬಿಜೆಪಿ 2 ಸ್ಥಾನ ಗೆಲುವು ಸುಲಭ

• ಪ್ರಜೋದಯ ವರದಿ

**ಬೆಂಗಳೂರು:** ರಾಜ್ಯದಲ್ಲಿ ಹೊಸ ಸರ್ಕಾರ ರಚನೆಯ ಬೆಳವಣಿಗೆ ಬಿರುಸು ಪಡೆದುಕೊಂಡಿರುವ ಮಧ್ಯೆಯೇ ರಾಜ್ಯಸಭೆಯ 4, ಪರಿಷತ್‌ನ 7 ಸ್ಥಾನಗಳ ಚುನಾವಣೆಗೆ ಅಧಿಸೂಚನೆ ಪ್ರಕಟವಾಗಿದೆ.

ಸೋಮವಾರದಿಂದಲೇ ನಾಮ ಪತ್ರ ಸಲ್ಲಿಕೆ ಪ್ರಕ್ರಿಯೆ ಪ್ರಾರಂಭ ಗೊಂಡಿದ್ದು, ಜೂ.8ರಂದು ನಾಮ ಪತ್ರಗಳ ಸಲ್ಲಿಕೆಗೆ ಕೊನೆಯ ದಿನವಾ ಗಿದೆ. ಜೂ.11ರಂದು ನಾಮಪತ್ರಗಳ ವಾಪಾಸ್ಸಾತಿಗೆ ಕೊನೆಯ ದಿನವಾಗಿದೆ. ಜೂ.18ರಂದು ಮತದಾನ ನಡೆದು ಅಂದೇ ಫಲಿತಾಂಶ ಪ್ರಕಟ ವಾಗಲಿದೆ. ಇನ್ನೂ ಅಭ್ಯರ್ಥಿಗಳ ಆಯ್ಕೆಯನ್ನು ಕಾಂಗ್ರೆಸ್ ಮತ್ತು ಬಿಜೆಪಿ ಅಂತಿಮ ಗೊಳಿಸಿಲ್ಲ. ಇನ್ನು ಎರಡ್ಮೂರು ದಿನ ಗಳಲ್ಲಿ ಎರಡೂ ಪಕ್ಷಗಳಿಂದ ಅಭ್ಯರ್ಥಿಗಳ ಹೆಸರು ಅಂತಿಮಗೊಳ್ಳುವ ಸಾಧ್ಯತೆ ಇದೆ.

ರಾಜ್ಯಸಭೆಯ 4 ಸ್ಥಾನಗಳ ಪೈಕಿ ಕಾಂಗ್ರೆಸ್ 3, ಬಿಜೆಪಿ 1 ಗೆಲ್ಲಲು ಅವ ಕಾಶ ಇದೆ. ಪರಿಷತ್ ಸ್ಥಾನಗಳ ಪೈಕಿ ಕಾಂಗ್ರೆಸ್ 4, ಬಿಜೆಪಿ 2 ಸ್ಥಾನ ಗೆಲುವು ಸುಲಭವಾಗಲಿದೆ. ಮತ್ತೊಂದು ಸ್ಥಾನ ಕ್ಕೂ ಕಾಂಗ್ರೆಸ್‌ನಿಂದಲೇ ಅಭ್ಯರ್ಥಿ ಕಣಕ್ಕೆ ಇಳಿಸಲು ಮುಂದಾಗಿದ್ದಾರೆ.

ಜೆಡಿಎಸ್ ವರಿಷ್ಠರಾದ ಹೆಚ್.ಡಿ. ದೇವೇಗೌಡ, ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಬೆಳಗಾವಿ ಬಿಜೆಪಿ ಮುಖಂಡ ಈರಣ್ಣ ಕಡಾಡಿ, ದಕ್ಷಿಣ ಕನ್ನಡ ಬಿಜೆಪಿ ಮುಖಂಡ ಕೆ.ನಾರಾಯಣ ಅವರ ಅವಧಿ ಜೂ.25ಕ್ಕೆ ಕೊನೆಗೊಳ್ಳಲಿದೆ. ವಿಧಾನ ಸಭೆಯಿಂದ ವಿಧಾನ ಪರಿಷತ್ತಿಗೆ ಚುನಾಯಿತರಾಗಿರುವ ಜೆಡಿಎಸ್‌ನ ಗೋವಿಂದ ರಾಜು, ಕಾಂಗ್ರೆಸ್‌ನ ನಸೀರ್ ಅಹಮದ್, ತಿಪ್ಪಣ್ಣಪ್ಪ ಕಮಕನೂರ ಹಾಗು ಬಿ.ಕೆ.ಹರಿಪ್ರಸಾದ್, ಬಿಜೆಪಿಯ ಎಂ.ಟಿ.ಬಿ ನಾಗರಾಜು, ಪ್ರತಾಪ್ ಸಿಂಹ ನಾಯಕ್, ಸುನಿಲ್ ವಲ್ಯಾಪುರೆ ಅವರ ಅವಧಿಯು ಜೂನ್ 30ರಂದು ಕೊನೆಗೊಳ್ಳಲಿದೆ.

**ವಿಧಾನ ಪರಿಷತ್ ಸ್ಥಾನಕ್ಕೆ ಹಲವರ ಲಾಬಿ**

ವಿಧಾನ ಪರಿಷತ್‌ನಲ್ಲಿ ಖಾಲಿ ಯಾಗುತ್ತಿರುವ 7 ಸ್ಥಾನಗಳ ಪೈಕಿ ಕಾಂಗ್ರೆಸ್ 4ರಲ್ಲಿ ಸುಲಭವಾಗಿ ಗೆಲ್ಲುವ ಅವಕಾಶಗಳಿವೆ. ಆದರೆ, ಆಕಾಂಕ್ಷಿಗಳ ಸಂಖ್ಯೆ ಸುಮಾರು 30ಕ್ಕಿಂತಲೂ ಹೆಚ್ಚಿದೆ. ಬಿ.ಕೆ.ಹರಿಪ್ರಸಾದ್ ಪ್ರಬಲ ಆಕಾಂಕ್ಷಿ ಯಾಗಿದ್ದರೆ, ಮಾಜಿ ಸಚಿವ ಬಿ.ಎಲ್. ಶಂಕರ್, ಕೆಪಿಸಿಸಿ ಕಚೇರಿ ಕಾರ್ಯದರ್ಶಿ ಎಲ್.ನಾರಾಯಣ್, ಹಾಲಿ ಸದಸ್ಯ ರಮೇಶ್ ಬಾಬು, ಬಿ.ಆರ್.ಸುದರ್ಶನ್, ನಿವೇದಿತ ಆಳ್ವ, ಮನ್ಸೂರ್ ಅಲಿಖಾನ್, ಐಶ್ವರ್ಯ ಮಹದೇವ್, ಎಂ.ಸಿ. ವೇಣುಗೋಪಾಲ್ ಸೇರಿ ಹಲವಾರು ಮಂದಿ ಲಾಬಿ ನಡೆಸುತ್ತಿದ್ದಾರೆ.


ಬಿಜೆಪಿಯಲ್ಲಿ ಇಬ್ಬರು ಅಭ್ಯರ್ಥಿಗಳು ಆಯ್ಕೆಯಾಗುವುದು ಖಚಿತ. ಆದರೆ, ರಾಜ್ಯ ನಾಯಕರು ಎಂಟು ಜನರ ಹೆಸರನ್ನು ಪರಿಗಣಿಸುವಂತೆ ವರಿಷ್ಠರಿಗೆ ಪಟ್ಟಿ ಸಲ್ಲಿಸಿದ್ದಾರೆ. ಇಬ್ಬರು ಮಹಿಳೆಯರು ಮತ್ತು ಲಿಂಗಾಯತ, ಒಕ್ಕಲಿಗ ಸಮುದಾಯದ ನಾಯಕರೂ ಸೇರಿ ಜಾತಿ ಸಮೀಕರಣದ ಆಧಾರದಲ್ಲಿ ಆರು ಅಭ್ಯರ್ಥಿಗಳ ಪಟ್ಟಿಯನ್ನು ನೀಡಿದ್ದಾರೆ. ಅವುಗಳಲ್ಲಿ ಎರಡು ಹೆಸರನ್ನು ವರಿಷ್ಠರು ಅಂತಿಮಗೊಳಿಸಲಿದ್ದಾರೆಂದು ಮೂಲಗಳು ತಿಳಿಸಿವೆ.

### ಮುಂಚೂಣಿಯಲ್ಲಿ ದೇವೇಗೌಡರ ಹೆಸರು



ಪ್ರಧಾನಿ ನರೇಂದ್ರ ಮೋದಿ, ಗೃಹ ಸಚಿವ ಅಮಿತ್ ಶಾ, ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ನಿತಿನ್ ನವೀನ್ ಅವರ ಸಮ್ಮುಖದಲ್ಲಿ ರಾಜ್ಯಸಭಾ ಚುನಾ ವಣೆಗೆ ಅಭ್ಯರ್ಥಿಗಳ ಆಯ್ಕೆಗಾಗಿ ಬಿಜೆಪಿ ಕೇಂದ್ರೀಯ ಸಂಸದೀಯ ಮಂಡಳಿ ಸಭೆ ನಡೆ ದಿದ್ದು, ರಾಜ್ಯ ಘಟಕದ ಬಿಜೆಪಿ ನಾಯಕರು ಸಂಭಾವ್ಯ ಅಭ್ಯರ್ಥಿ ಗಳ ಪಟ್ಟಿ ಯನ್ನು ಇರಿಸಿದ್ದಾರೆ. ಹೆಚ್.ಡಿ.ದೇವೇಗೌಡ ಮತ್ತು ಡಿ.ವಿ.ಸದಾನಂದಗೌಡ ಅವರ ಹೆಸರನ್ನು ಪ್ರಸ್ತಾಪಿಸಿದ್ದಾರೆ ಎನ್ನ ಲಾಗಿದೆ. ಮೈತ್ರಿಯ ಕಾರಣಕ್ಕಾಗಿ ಜೆಡಿಎಸ್‌ನ ಹೆಚ್.ಡಿ.ದೇವೇಗೌಡ ಅವರನ್ನು ಎನ್‌ಡಿಎ ಅಭ್ಯರ್ಥಿಯಾಗಿ ಕಣಕ್ಕೆ ಇಳಿಸುವ ಬಗ್ಗೆ ಬಿಜೆಪಿ ವರಿಷ್ಠರು ಒಲವು ತೋರಿದ್ದಾರೆ.

### ಮಲ್ಲಿಕಾರ್ಜುನ ಖರ್ಗೆ ಆಯ್ಕೆ ಖಚಿತ



ಕಾಂಗ್ರೆಸ್ ತನ್ನ ಸಂಖ್ಯಾ ಬಲದ ಆಧಾರದ ಮೇಲೆ ರಾಜ್ಯಸಭೆಯ 3 ಸ್ಥಾನ ಗೆಲ್ಲಲು ಅವಕಾಶ ಇದೆ. ಅದರಲ್ಲಿ ಒಂದಕ್ಕೆ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರ ಆಯ್ಕೆ ಬಹುತೇಕ ಖಚಿತವಾಗಿದೆ. ಉಳಿದ ಎರಡು ಸ್ಥಾನಗಳಲ್ಲಿ ಒಂದಕ್ಕೆ ಆಂಧ್ರಪ್ರದೇಶ ಕಾಂಗ್ರೆಸ್ ಅಧ್ಯಕ್ಷೆ ವೈ.ಎಸ್.ಶರ್ಮಿಳಾ ರೆಡ್ಡಿ ಅವರ ಹೆಸರು ಕೇಳಿ ಬಂದಿದೆ. ಸಿದ್ದರಾಮಯ್ಯ ಅವರನ್ನು ರಾಷ್ಟ್ರ ರಾಜಕಾರಣಕ್ಕೆ ಆಗಮಿಸುವಂತೆ ಕಾಂಗ್ರೆಸ್ ಹೈಕಮಾಂಡ್ ನಾಯಕರು ಆಹ್ವಾನಿಸಿದರು. ರಾಜ್ಯಸಭೆಗೆ ಸ್ಪರ್ಧೆ ಮಾಡುವಂತೆ ಮನವಿ ಮಾಡಿದ್ದರು. ಆದರೆ, ಸಿದ್ದರಾಮಯ್ಯ, ತಾವು ರಾಜ್ಯ ರಾಜಕಾರಣದಲ್ಲೇ ಇರುವುದಾಗಿ ಹೇಳಿದ್ದು ರಾಜ್ಯಸಭೆ ಸ್ಥಾನ ನಯವಾಗಿ ತಿರಸ್ಕರಿಸಿದ್ದಾರೆ.

## ಸಂಪುಟ ರಚನೆ : ಡಿ.ಕೆ.ಶಿ, ಸಿದ್ದರಾಮಯ್ಯ ದೆಹಲಿಗೆ

• ಪ್ರಜೋದಯ ವರದಿ

**ಬೆಂಗಳೂರು :** ಸಚಿವ ಸಂಪುಟ ರಚನೆ, ಕೆಪಿಸಿಸಿ ಅಧ್ಯಕ್ಷ ಹುದ್ದೆ, ಡಿಸಿಎಂ ಸ್ಥಾನ ಕುರಿತಂತೆ ವರಿಷ್ಠರ ಜೊತೆ ಚರ್ಚಿಸಿ ಎಲ್ಲವನ್ನು ಅಂತಿಮಗೊಳಿಸಲು ನಿಯೋಜಿತ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹಾಗೂ ಉಸ್ತುವಾರಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸೋಮವಾರ ದೆಹಲಿಗೆ ತೆರಳಿದ್ದಾರೆ.

ಜೂ. 3 ರಂದು ನಡೆಯುವ ನೂತನ ಮುಖ್ಯಮಂತ್ರಿಗಳ ಪದಗ್ರಹಣ ಕಾರ್ಯಕ್ರಮದಲ್ಲಿ 8-10 ಸಚಿವರನ್ನು ಸೇರ್ಪಡೆ ಮಾಡಿಕೊಳ್ಳಲು ಹೈಕಮಾಂಡ್ ನಿರ್ಧರಿಸಿದ್ದು, ಮೊದಲ ಹಂತದಲ್ಲಿ ಯಾರನ್ನೆಲ್ಲಾ ಸಚಿವರನ್ನಾಗಿಸಬೇಕೆಂಬ ಬಗ್ಗೆ ಡಿ.ಕೆ. ಶಿವಕುಮಾರ್ ಹಾಗೂ ಸಿದ್ದರಾಮಯ್ಯ ಅವರ ಜತೆ ಚರ್ಚಿಸಿ ಪಟ್ಟಿಯನ್ನು ಅಂತಿಮಗೊಳಿಸಲಿದೆ.

ಡಿ.ಕೆ. ಶಿವಕುಮಾರ್ ಹಾಗೂ ಸಿದ್ದರಾಮಯ್ಯ ಇಬ್ಬರೂ ತಮ್ಮ ಕಡೆಯಿಂದ ಯಾರನ್ನು ಸಚಿವರನ್ನಾಗಿಸಬೇಕೆಂಬ ಹೆಸರುಗಳ ಪಟ್ಟಿಯನ್ನು ಹೈಕಮಾಂಡ್‌ಗೆ ನೀಡಲಿದ್ದಾರೆ. ಹೈಕಮಾಂಡ್ ಎಲ್ಲವನ್ನು ಅಳೆದು ತೂಗಿ ಸಚಿವ ಪಟ್ಟಿಯನ್ನು ಅಂತಿಮಗೊಳಿಸಲಿದೆ.

ಡಿ.ಕೆ. ಶಿವಕುಮಾರ್ ನೇತೃತ್ವದ ಸರ್ಕಾರದಲ್ಲಿ ಉಪಮುಖ್ಯಮಂತ್ರಿ ಹುದ್ದೆ ಸೃಷ್ಟಿ ಪ್ರಸ್ತಾವನ್ನು ಬಹುತೇಕ ಕೈಬಿಡುವ ನಿರ್ಧಾರಕ್ಕೆ ಬಂದಿದ್ದರೂ ಸಿದ್ದರಾಮಯ್ಯ ಅವರು ಉಪಮುಖ್ಯಮಂತ್ರಿ ಹುದ್ದೆ ಸೃಷ್ಟಿಗೆ ಪಟ್ಟು ಹಿಡಿಯುವ ಸಾಧ್ಯತೆಗಳಿವೆ.

## ಸಿಸಿಟಿವಿಯಲ್ಲಿ ಬಯಲಾಯ್ತು ವ್ಯಕ್ತಿ ಕೊಲೆಯ ಸತ್ಯಾಂಶ

- ಪತ್ನಿ, ಅಪ್ರಾಪ್ತ ಪುತ್ರನ ವಿರುದ್ಧ ಮೃತನ ತಾಯಿ ದೂರು
- ಶವ ಹೊರತೆಗೆದು ಮರಣೋತ್ತರ ಪರೀಕ್ಷೆ



• ಪ್ರಜೋದಯ ವರದಿ

**ಹಾಸನ:** ಮಗನ ಸಾವಿನ ಬಗ್ಗೆ ತಾಯಿ ಅನುಮಾನಗೊಂಡು ಪೊಲೀಸರಿಗೆ ದೂರು ನೀಡಿದ ಹಿನ್ನಲೆಯಲ್ಲಿ ಅಂತ್ಯ ಸಂಸ್ಕಾರ ನೆರವೇರಿಸಿದ್ದ ಮೃತದೇಹವನ್ನು ಹೊರತೆಗೆದು ಮರಣೋತ್ತರ ವೈದ್ಯಕೀಯ ಪರೀಕ್ಷೆ ನಡೆಸಿದ ಘಟನೆ ಸೋಮವಾರ ಬಿಟ್ಟಗೋಡನಹಳ್ಳಿ ಸ್ಮಶಾನದಲ್ಲಿ ನಡೆದಿದೆ.

ಮೇ 18 ರಂದು ತಣ್ಣೀರುಹಳ್ಳದ ನಿವಾಸಿ ಗುರುಮೂರ್ತಿ ಎಂಬುವವರು ಮನೆಯಲ್ಲಿ ಮಂಚದ ಮೇಲೆ ಮಲಗಿದ್ದಲ್ಲಿಯೇ ಸಾವನ್ನಪ್ಪಿದ್ದರು. ಆ ನಂತರ ತರಾತುರಿಯಲ್ಲಿ ಅಂತ್ಯ ಕ್ರಿಯೆ ನಡೆಸಲಾಗಿತ್ತು. ಬಳಿಕ ಸಿಸಿಟಿವಿ ಪರಿಶೀಲಿಸಿದಾಗ ಪತ್ನಿ ವೀಣಾ ಹಾಗು ಅಪ್ರಾಪ್ತ ಪುತ್ರ, ಗುರುಮೂರ್ತಿ ಮೇಲೆ ಹಲ್ಲೆ ನಡೆಸುವ ದೃಶ್ಯ ಸೆರೆಯಾಗಿದೆ. ಹಲ್ಲೆಯಿಂದಲೇ ಪುತ್ರ ಸಾವನ್ನಪ್ಪಿರುವುದಾಗಿ ಗುರುಮೂರ್ತಿ ತಾಯಿ ರೇಣುಕಮ್ಮ ಆರೋಪಿಸಿ ದೂರು ನೀಡಿದ್ದರು. ಪ್ರಕರಣ ದಾಖಲಿಸಿಕೊಂಡಿರುವ ನಗರ ಠಾಣೆ ಪೊಲೀಸರು ತನಿಖೆ ಮುಂದುವರೆಸಿದ್ದಾರೆ.

17 ವರ್ಷದ ಹಿಂದೆ ಮೈಸೂರು ಮೂಲದ ಗುರುಮೂರ್ತಿ ಹಾಸನ ಮೂಲದ ವೀಣಾ ಅವರನ್ನು ವಿವಾಹವಾಗಿದ್ದು, ದಂಪತಿಗೆ ಇಬ್ಬರು ಗಂಡು ಮಕ್ಕಳಿದ್ದಾರೆ. ಗುರುಮೂರ್ತಿ ನಗರದ ತಣ್ಣೀರುಹಳ್ಳದಲ್ಲಿ ಕೇರಳಾಪುರ ಮಿಲ್ಟ್ರಿ ಹೋಟೆಲ್ ನಡೆಸುತ್ತಿದ್ದು, ಹೊಸ ಮನೆ ನಿರ್ಮಿಸುತ್ತಿದ್ದರು. ಅದಕ್ಕಾಗಿ ಗುರುಮೂರ್ತಿ ಸಾಕಷ್ಟು ಸಾಲ ಮಾಡಿಕೊಂಡಿದ್ದರಿಂದ ಜಮೀನು ಮಾರಾಟ ಮಾಡಿ ಹಣ ತರುವಂತೆ ಪತ್ನಿ ವೀಣಾ ಗುರುಮೂರ್ತಿ ಜೊತೆ ಪದೇ ಪದೇ ಜಗಳವಾಡುತ್ತಿದ್ದರು ಎನ್ನಲಾಗಿದೆ. ಈ ವಿಷಯ ಗುರುಮೂರ್ತಿ ತಾಯಿ ರೇಣುಕಮ್ಮ ಬಳಿ ಹೇಳಿದಾಗ ಸ್ವಲ್ಪ ಜಮೀನು ಮಾರಾಟ ಮಾಡಿ 25 ಲ.ರೂ ನೀಡಿದ್ದರು. ಆದರೂ ವೀಣಾ

» ನಾಲ್ಕನೇ ಪುಟದಲ್ಲಿ

### ಪ್ರಕರಣ ಹಿಂಪಡೆಯಲು 25 ಲ.ರೂ.ಆಮಿಷ

ಮೇ 25 ರಂದು ಪೊಲೀಸರಿಗೆ ದೂರು ನೀಡಿದ ಬಳಿಕ ಅತ್ತೆ ಮನೆಗೆ ಬಂದಿದ್ದ ವೀಣಾ ಹಾಗು ಆಕೆಯ ಸಹೋದರರು ಪ್ರಕರಣ ವಾಪಾಸ್ ತೆಗೆದುಕೊಳ್ಳಿ 25 ಲ.ರೂ. ಹಣ ನೀಡುವುದಾಗಿ ಬೇಡಿಕೆ ಇಟ್ಟಿದ್ದರೆಂದು ಗಂಭೀರ ಆರೋಪ ಮಾಡಿದ್ದು, ಗುರುಮೂರ್ತಿ ಸಾವಿಗೆ ನ್ಯಾಯ ಒದಗಿಸುವಂತೆ ಒತ್ತಾಯಿಸಿದ್ದಾರೆ.

## ನಿತ್ಯ ಅನ್ನದಾಸೋಹ ಕಾರ್ಯಕ್ಕೆ ಶಂಭುನಾಥ ಶ್ರೀ ಮೆಚ್ಚುಗೆ

### ಪತ್ರಕರ್ತರ ಸಂಘದ ಕಾರ್ಯವೈಖರಿ ರಾಜ್ಯಕ್ಕೆ ಮಾದರಿ



• ಪ್ರಜೋದಯ ವರದಿ

**ಹಾಸನ:** ಮಠಗಳ ರೀತಿಯಲ್ಲಿ ಪತ್ರಕರ್ತರು ನಿತ್ಯ ಅನ್ನದಾಸೋಹ ಕಾರ್ಯ ನಡೆಸುತ್ತಿರುವುದು ಸಂತೋಷದ ವಿಷಯ. ಪತ್ರಕರ್ತರ ಸಂಘ ಸಮಸ್ಯೆಗಳಿಗೆ ಸ್ಪಂದಿಸುವುದರ ಜೊತೆಗೆ ಸಮಾಜಮುಖಿ ಕಾರ್ಯ ಮಾಡುತ್ತಿರುವುದು ಶ್ಲಾಘನೀಯವೆಂದು ಆದಿಚುಂಚನಗಿರಿ ಶಾಖಾ ಮಠದ ಶ್ರೀ ಶಂಭುನಾಥ ಸ್ವಾಮೀಜಿ ಅವರು ಹೇಳಿದರು.

ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಡಿವಿಜಿ ಸಭಾಂಗಣದಲ್ಲಿ ಸೋಮವಾರ ಆಯೋಜಿಸಿದ್ದ ಅನ್ನದಾಸೋಹ ಶತದಿನೋತ್ಸವ, ಪ್ರತಿಭಾ ಪುರಸ್ಕಾರ ಹಾಗು ಕೆನರಾ ಬ್ಯಾಂಕ್ ಗಿಗ್ ಸ್ಟಾರ್ ಯೋಜನೆಗೆ ಚಾಲನೆ ನೀಡಿ ಮಾತನಾಡಿದ ಅವರು, ಹಸಿವು ಎಂಬುದು ಅತ್ಯಂತ ಕಷ್ಟ ಮತ್ತು ನೋವಿನ ಪರಿಸ್ಥಿತಿಗೆ ದೂಡುತ್ತದೆ. ಎಷ್ಟೋ ಮಂದಿಗೆ ಹಸಿದವರಿಗೆ ಅಂಜಿಕೆ ಇರಲಿದೆ, ಇಂತಹ ಸಂದರ್ಭದಲ್ಲಿ ಹಸಿದವರಿಗೆ ಆಹಾರ ಒದಗಿಸುವುದು ಅತ್ಯಂತ ಶ್ರೇಷ್ಠ ಹಾಗು ಪುಣ್ಯದ ಕಾರ್ಯವಾಗಿದೆ ಎಂದರು.

ಮಠ ಮಾನ್ಯಗಳ ರೀತಿಯಲ್ಲಿ ಜಿಲ್ಲಾ ಪತ್ರಕರ್ತರ ಸಂಘದಲ್ಲೂ ನಿತ್ಯ ಅನ್ನದಾಸೋಹ ಕಾರ್ಯ ನಡೆಯುತ್ತಿರುವುದು ಅತ್ಯಂತ ಪವಿತ್ರ ಹಾಗು ಇಡೀ ರಾಜ್ಯಕ್ಕೆ ಮಾದರಿಯಾಗಿದೆ. ಸಂಘದ ಪತ್ರಕರ್ತ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ಏರ್ಪಡಿಸಿರುವುದು ಉತ್ತಮವಾಗಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಅನ್ನದಾಸೋಹದ ಬಗ್ಗೆ ಮಾತನಾಡುವಾಗ ಸಿದ್ಧಗಂಗಾಶ್ರೀ, ಡಾ. ಬಾಲಗಂಗಾಧರನಾಥ ಸ್ವಾಮೀಜಿ ಸೇರಿ ಅನೇಕ ಮಹನೀಯರ ಸೇವೆ ಸ್ಮರಣೀಯ. ಹಿಂದಿನಿಂದಲೂ ಜಿಲ್ಲೆಯ ಪತ್ರಕರ್ತರು ಹಾಗು ಶ್ರೀಮಠದೊಂದಿಗಿನ ಸಂಬಂಧ ಅವಿನಾಭಾವದಿಂದ ಹಾಲು-ಸಿಹಿಯಂತೆ ಕೂಡಿದೆ. ಮುಂದೆಯೂ ಶ್ರೀಮಠ ನಿಮ್ಮ ಜೊತೆಗಿರಲಿದೆ ಎಂದರು.

ಪತ್ರಕರ್ತರ ಸಂಘದ ಅನ್ನದಾಸೋಹ ಕೇವಲ ನೂರು ದಿನಗಳಿಗೆ ಸೀಮಿತವಾಗದೆ ತಲಾ ತಲಾಂತರದವರೆಗೂ ಮುಂದುವರಿಯಲಿ, ಯುವಕರು ಮುಂದುವರಿಸಿಕೊಂಡು ಹೋಗಬೇಕು. ಹೊಸ ಕೆಲಸ ಆರಂಭಿಸಿದಾಗ ಟೀಕೆ-ಟಿಪ್ಪಣಿಗಳು ಸಾಮಾನ್ಯ. ಅದಕ್ಕೆ ಕಿವಿಗೊಡದೆ ಸಮಾಜದ ಹಿತದತ್ತ ಸಾಗಬೇಕು. ಒಳ್ಳೆಯ ಕೆಲಸ ಮಾಡಲಾಗದಿದ್ದರೂ ಪರವಾಗಿಲ್ಲ. ಆದರೆ, ಇತರರಿಗೆ ತೊಂದರೆ ಕೊಡಬಾರದೆಂಬ ಸಂದೇಶವನ್ನು ಪ್ರತಿಯೊಬ್ಬರೂ ಅಳವಡಿಸಿಕೊಳ್ಳಬೇಕೆಂದು ಕಿವಿಮಾತು ಹೇಳಿದರು.

ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಜೆ.ಆರ್.ಕೆಂಚೇಗೌಡ ಅವರು ಮಾತನಾಡಿ, ಸಂಘವು ಅನ್ನದಾಸೋಹ ಸೇರಿ ಹಲವು ಜನಪರ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ನಡೆಸುತ್ತಿದೆ. ಮುಂದಿನ ದಿನಗಳಲ್ಲಿ ಇನ್ನಷ್ಟು ವಿಸ್ತರಿಸುವ ಉದ್ದೇಶ ಹೊಂದಲಾಗಿದೆ. ಆದಿಚುಂಚನಗಿರಿ ಮಠ ಶಿಕ್ಷಣ, ಆರೋಗ್ಯ, ಕ್ರೀಡೆ ಹಾಗು ದಾಸೋಹ ಕ್ಷೇತ್ರಗಳಲ್ಲಿ ರಾಜ್ಯಕ್ಕೆ ಮಾದರಿಯಾಗಿ ಕಾರ್ಯನಿರ್ವಹಿಸುತ್ತಿದೆ ಎಂದು ಹೇಳಿದರು.

ಸಂಘದ ಪ್ರಧಾನ ಕಾರ್ಯದರ್ಶಿ ಕೆ.ಜಿ. ಸುರೇಶ್ ಪ್ರಾಸ್ತಾವಿಕವಾಗಿ

» ನಾಲ್ಕನೇ ಪುಟದಲ್ಲಿ

## ಅಪಘಾತ: ಬಾಲಕ ಸಾವು, ಇಬ್ಬರಿಗೆ ಗಾಯ

• ಪ್ರಜೋದಯ ವರದಿ

**ಅರಸೀಕೆರೆ :** ಎಲೆಕ್ಟ್ರಿಕ್ ಸ್ಕೂಟರ್ ಸವಾರನ ನಿಯಂತ್ರಣ ತಪ್ಪಿ ಬಿದ್ದ ಪರಿಣಾಮ 16 ವರ್ಷದ ಬಾಲಕ ಮೃತಪಟ್ಟಿದ್ದು, ಇಬ್ಬರು ಗಾಯಗೊಂಡಿರುವ ಘಟನೆ ಜಾವಗಲ್ ಹೋಬಳಿ ಕೋಳಗುಂದ ಗ್ರಾಮದ ಸಮೀಪ ನಡೆದಿದೆ. ಪ್ರಮೋದ್ (16) ಮೃತ ಬಾಲಕ.

ಕೋಳಗುಂದ ಗ್ರಾಮದ ಪ್ರಸನ್ನಕುಮಾರ್ ಅವರು ತಮ್ಮ ಪುತ್ರ ಪ್ರಮೋದ್ (16) ಹಾಗು ಪುತ್ರಿ ರಮ್ಯ ಅವರನ್ನು ಕರೆದುಕೊಂಡು ಎಲೆ ಕ್ಟ್ರಿಕ್ ಸ್ಕೂಟರ್‌ನಲ್ಲಿ ಶ್ರೀ ಜೇನುಕಲ್ ಸಿದ್ದೇಶ್ವರ ಸ್ವಾಮಿ ಬೆಟ್ಟಕ್ಕೆ ತೆರಳುತ್ತಿದ್ದರು. ಮಾವುತನಹಳ್ಳಿ ರಸ್ತೆಯಲ್ಲಿ ಸಾಗುತ್ತಿದ್ದ ವೇಳೆ ಮುಂಭಾಗದಲ್ಲಿ ಹೋಗುತ್ತಿದ್ದ ಟ್ರ್ಯಾಕ್ಟರ್‌ನ್ನು ಹಿಂದಿಕ್ಕಲು ಯತ್ನಿಸಿದಾಗ ಸ್ಕೂಟರ್ ನಿಯಂ ತ್ರಣ ತಪ್ಪಿ ಸ್ಕಿಡ್ ಆಗಿ ರಸ್ತೆ ಮೇಲೆ ಬಿದ್ದಿದೆ.

ಸ್ಕೂಟರ್‌ನಲ್ಲಿದ್ದ ಮೂವ ರಿಗೂ ಗಾಯಗಳಾಗಿದ್ದು, ಪ್ರಮೋದ್ ಅವರ ತಲೆಗೆ ತೀವ್ರ ಪೆಟ್ಟಾಗಿದೆ. ರಮ್ಯ ಅವರ ಎಡಗಣ್ಣಿಗೆ ಹಾಗು ಪ್ರಸನ್ನಕುಮಾರ್ ಅವರ ಎಡಗಾಲಿಗೆ ಗಾಯಗಳಾಗಿವೆ. ಗಾಯಾಳು ಗಳನ್ನು ತಕ್ಷಣ ಆಸ್ಪತ್ರೆಗೆ ದಾಖಲಿಸಲಾಯಿತಾ ದರೂ, ಗಂಭೀರವಾಗಿ ಗಾಯಗೊಂಡಿದ್ದ ಪ್ರಮೋದ್ ಮೃತಪಟ್ಟಿದ್ದಾನೆ. ಈ ಸಂಬಂಧ ಜಾವಗಲ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ಡಿ.ಟಿ.ಶ್ರೀನಿವಾಸ್‌ಗೆ ಸಚಿವ ಸ್ಥಾನಕ್ಕೆ ಒತ್ತಾಯ

• ಪ್ರಜೋದಯ ವರದಿ



**ಹಾಸನ:** ಕರ್ನಾಟಕ ರಾಜ್ಯ ಯಾದವ (ಗೊಲ್ಲ) ಸಮುದಾಯದ ಪ್ರಮುಖ ನಾಯಕ, ವಿಧಾನ ಪರಿಷತ್ ಸದಸ್ಯ ಡಿ.ಟಿ. ಶ್ರೀನಿವಾಸ್ ಅವರನ್ನು ರಾಜ್ಯ ಸಚಿವ ಸಂಪುಟಕ್ಕೆ ಸೇರಿಸಿಕೊಳ್ಳುವಂತೆ ಸಂಘದ ಉಪಾಧ್ಯಕ್ಷ ಕೃಷ್ಣಮೂರ್ತಿ ಅವರು ಆಗ್ರಹಿಸಿದರು.

ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯದಲ್ಲಿ ಯಾದವರು ಸುಮಾರು 19 ಲಕ್ಷಕ್ಕೂ ಅಧಿಕ ಇದ್ದು, ಸಚಿವ ಸಂಪುಟದಲ್ಲಿ ಪ್ರಾತಿನಿಧ್ಯ ದೊರೆಯುತ್ತಿಲ್ಲ. ಹೀಗಾಗಿ ಸಮುದಾಯದ ಪರವಾಗಿ ಹೋರಾಟ ನಡೆಸುತ್ತಿರುವ ಡಿ.ಟಿ.ಶ್ರೀನಿವಾಸ್ ಅವರಿಗೆ ಸಚಿವ ಸ್ಥಾನ ನೀಡಿ ಸಾಮಾಜಿಕ ನ್ಯಾಯ ಒದಗಿಸಬೇಕೆಂದು ಕಾಂಗ್ರೆಸ್ ಹೈಕಮಾಂಡ್‌ಗೆ ಮನವಿ ಮಾಡಿರುವುದಾಗಿ ತಿಳಿಸಿದರು.

ಸಂಘದ ರಾಜ್ಯಾಧ್ಯಕ್ಷರಾಗಿ ಕಾರ್ಯ ನಿರ್ವಹಿಸುತ್ತಿರುವ ಡಿ.ಟಿ.ಶ್ರೀನಿವಾಸ್ ಅವರು, ರಾಜ್ಯಾದ್ಯಂತ ಸಮಾಜ ಸಂಘಟಿಸುವ ಕಾರ್ಯದಲ್ಲಿ ತೊಡಗಿಸಿ ಕೊಂಡಿದ್ದಾರೆ. ದಿ.ಎ.ಕೃಷ್ಣಪ್ಪ ಅವರ ನಂತರ ಸಂಘದ ಅಧ್ಯಕ್ಷ ಸ್ಥಾನಕ್ಕೆ ಚುನಾವಣೆ ಮೂಲಕ ಆಯ್ಕೆಯಾದ ಮೊದಲ ಅಧ್ಯಕ್ಷರಾಗಿರುವ ಅವರು, ತಮ್ಮ ನೇತೃತ್ವದಲ್ಲಿ ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಪ್ರವಾಸ ಕೈಗೊಂಡು ಸಮಾಜದ ಸಂಘಟನೆಗೆ ವಿಶೇಷ ಒತ್ತು ನೀಡಿದ್ದಾರೆ. ತುಮಕೂರು, ಚಿತ್ರದುರ್ಗ ಹಾಗೂ ಚಿಕ್ಕೋಡಿ ಸೇರಿ ಹಲವು ಕಡೆ ಬೃಹತ್ ಯಾದವ ಸಮಾವೇಶ ಯಶಸ್ವಿಯಾಗಿ ಆಯೋಜಿಸಿ ಸಮುದಾಯದ ಶಕ್ತಿ ಒಗ್ಗೂಡಿಸಿದ್ದಾರೆ ಎಂದರು.

» ನಾಲ್ಕನೇ ಪುಟದಲ್ಲಿ

## ಪೂರ್ವಭಾವಿ ಸಭೆ

• ಪ್ರಜೋದಯ ವರದಿ

**ಹಾಸನ:** ಸಾಮಾಜಿಕ ಹೋರಾಟಗಾರ ವೈ.ಎಸ್.ವೀರಭದ್ರಪ್ಪ ಅವರ ಬದುಕಿನ ಸಾಧನೆ ದಾಖಲಿಸುವ ಅಭಿನಂದನಾ ಗ್ರಂಥ ಬಿಡುಗಡೆ ಸಂಬಂಧ ಮಂಗಳವಾರ ಬೆಳಿಗ್ಗೆ 11 ಗಂಟೆಗೆ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಭವನದಲ್ಲಿ ಪೂರ್ವಭಾವಿ ಸಭೆ ನಡೆಯಲಿದೆ.

ಸಭೆಯಲ್ಲಿ ಕಾರ್ಯಕ್ರಮದ ದಿನಾಂಕ, ಸ್ಥಳ, ಆಹ್ವಾನಿತ ಗಣ್ಯರು, ಅಭಿನಂದನಾ ಗ್ರಂಥದ ಸಂಪಾದನೆ, ಪ್ರಕಟಣೆ ಸೇರಿ ವಿವಿಧ ವಿಷಯಗಳ ಕುರಿತು ಸಮಗ್ರ ಚರ್ಚೆ ನಡೆಯಲಿದೆ.

## ಕೆ.ಹೆಚ್.ಮುನಿಯಪ್ಪಗೆ ಡಿಸಿಎಂ ಸ್ಥಾನ ನೀಡಲು ಆಗ್ರಹ

• ಪ್ರಜೋದಯ ವರದಿ



**ಹಾಸನ:** ಕಾಂಗ್ರೆಸ್ ಪಕ್ಷದ ಹಿರಿಯ ನಾಯಕ ಕೆ.ಹೆಚ್.ಮುನಿಯಪ್ಪ ಅವರಿಗೆ ಉಪಮುಖ್ಯಮಂತ್ರಿ ಸ್ಥಾನ ನೀಡುವ ಮೂಲಕ, ಪ್ರಬಲ ಖಾತೆ ನೀಡಬೇಕೆಂದು ಆಗ್ರಹಿಸಿ ಜಿಲ್ಲಾಧಿಕಾರಿ ಕಚೇರಿ ಆವರಣದಲ್ಲಿರುವ ಅಂಬೇಡ್ಕರ್ ಪ್ರತಿಮೆ ಮುಂದೆ ಮಾದಾರ ಮಹಾಸಭಾದ ಸದಸ್ಯರು ಸೋಮವಾರ ಪ್ರತಿಭಟನೆ ನಡೆಸಿದರು.

ಈ ವೇಳೆ ಮಾತನಾಡಿದ ಮಹಾಸಭಾ ಜಿಲ್ಲಾಧ್ಯಕ್ಷ ಟಿ.ಆರ್.ವಿಜಯ್ ಕುಮಾರ್ ಅವರು, ಡಿ.ಕೆ.ಶಿವಕುಮಾರ್ ಅವರು ಮುಖ್ಯಮಂತ್ರಿ ಆಗುತ್ತಿರುವುದಕ್ಕೆ ಕರ್ನಾಟಕ ಮಾದಾರ ಮಹಾಸಭಾ ಸ್ವಾಗತಿಸುತ್ತದೆ. ಅದೇ ರೀತಿ ಪರಿಶಿಷ್ಟ ಜಾತಿಯ ಎಡಗೈ ಸಮುದಾಯದಲ್ಲಿ ಅಪಾರ ಪ್ರಭಾವ ಹೊಂದಿರುವ ಮುನಿಯಪ್ಪ ಅವರಿಗೆ ಉಪಮುಖ್ಯಮಂತ್ರಿ ಸ್ಥಾನ

» ನಾಲ್ಕನೇ ಪುಟದಲ್ಲಿ

## ಮಕ್ಕಳನ್ನು ಶಾಲೆಗೆ ಬರಮಾಡಿಕೊಂಡ ಶಾಸಕ, ಡಿಸಿ, ಸಿಇಓ

• ಪ್ರಜೋದಯ ವರದಿ



### ವಿದ್ಯಾರ್ಥಿಗಳಿಗೆ ಗುಲಾಬಿ ಹೂ ನೀಡಿ ಪ್ರೀತಿಯ ಸ್ವಾಗತ

**ಹಾಸನ:** ನಗರದ ದಾಸರಕೊಪ್ಪಲು ಸರ್ಕಾರಿ ಪ್ರೌಢ ಶಾಲೆಯಲ್ಲಿ ಸೋಮವಾರ ಜಿಲ್ಲಾ ಮಟ್ಟದ 2026-27ನೇ ಸಾಲಿನ ಶಾಲಾ ಪ್ರಾರಂಭೋತ್ಸವ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳಿಗೆ ಗುಲಾಬಿ ಹೂ ನೀಡುವ ಮೂಲಕ ಪ್ರೀತಿಯಿಂದ ಸ್ವಾಗತ ಕೋರಲಾಯಿತು.

ಶಾಸಕ ಹೆಚ್.ಪಿ.ಸ್ವರೂಪ್, ಜಿಲ್ಲಾಧಿಕಾರಿ ಕೆ.ಎಸ್.ಲತಾಕುಮಾರಿ, ಜಿಲ್ಲಾ ಪಂಚಾಯಿತಿ ಮುಖ್ಯಕಾರ್ಯನಿರ್ವಹಣಾಧಿಕಾರಿ ಶುಭಂ ಶುಕ್ಲಾ ಅವರು ಮಕ್ಕಳನ್ನು ಆತ್ಮೀಯವಾಗಿ ಬರಮಾಡಿಕೊಂಡರು. ಮಕ್ಕಳು ಕೂಡ ಬೇಸಿಗೆ ರಜೆ ಕಳೆದು ಮತ್ತೆ ತರಗತಿಗಳಿಗೆ ಉತ್ಸಾಹದಿಂದಲೇ ಹಾಜರಾದರು.

ಈ ವೇಳೆ ಶಾಸಕ ಶಾಸಕ ಹೆಚ್.ಪಿ. ಸ್ವರೂಪ್ ಅವರು ಮಾತನಾಡಿ, ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಸರ್ಕಾರ ಹಲವು ಕಾರ್ಯಕ್ರಮಗಳನ್ನು ಜಾರಿಗೆ ತಂದಿದೆ. ಅವುಗಳ ಸದುಪಯೋಗ ಪಡಿಸಿ ಕೊಂಡು, ಮಕ್ಕಳು ಉತ್ತಮ ವಿದ್ಯಾಭ್ಯಾಸ ಮಾಡಿ ಮುಂದಿನ ದಿನಗಳಲ್ಲಿ ಉಜ್ವಲ ಭವಿಷ್ಯ ರೂಪಿಸಿಕೊಳ್ಳಬೇಕು. ಮಕ್ಕಳ ಶೈಕ್ಷಣಿಕ ಗುಣಮಟ್ಟ ಹೆಚ್ಚಿಸಲು ತಾನು ಎಲ್ಲಾ ರೀತಿಯ ಸಹಕಾರ ನೀಡಲು ಸಿದ್ದನಿದ್ದೇನೆಂದು ಭರವಸೆ ನೀಡಿದರು.

ಗ್ರಾಮೀಣ ಭಾಗದಲ್ಲಿರುವ ಸರ್ಕಾರಿ ಶಾಲೆಗಳಿಗೆ ಮಕ್ಕಳ ದಾಖಲಾತಿಗೆ ಹೆಚ್ಚಿನ ಒತ್ತು ನೀಡುವುದರ ಜೊತೆಗೆ ಉತ್ತಮ ಶಿಕ್ಷಣ ಒದಗಿಸಲು ಅಧಿಕಾರಿಗಳು ಮುಂದಾಗಬೇಕು. ದಾಸರು ಕೊಪ್ಪಲು ಮತ್ತು ಹರಳಹಳ್ಳಿ ಶಾಲೆಯ ಶಿಕ್ಷಕರು ಬದ್ಧತೆಯಿಂದ ಕೆಲಸ ನಿರ್ವಹಿಸುತ್ತಿದ್ದು, ಪಠ್ಯದ ಜೊತೆಗೆ ಪಠ್ಯೇತರ ಚಟುವಟಿಕೆ ಗು ಒತ್ತು ನೀಡಿ ಉತ್ತಮವಾಗಿ ಕಾರ್ಯ ನಿರ್ವಹಿಸುತ್ತಿರುವುದು ಶ್ಲಾಘನೀಯ. ಈ ಶಾಲೆಯನ್ನು ಕೆ.ಪಿ.ಎಸ್.ಶಾಲೆಗೆ ಆಯ್ಕೆ ಮಾಡಿದ್ದು, ಮಕ್ಕಳಿಗೆ ಮುಂದಿನ ದಿನಗಳಲ್ಲಿ ಪಿ.ಯು.ಸಿ. ವರೆಗೆ ಶಿಕ್ಷಣ ದೊರೆಯಲಿದೆ ಎಂದು ತಿಳಿಸಿದರು.

ಜಿಲ್ಲಾಧಿಕಾರಿ ಕೆ.ಎಸ್.ಲತಾ ಕುಮಾರಿ ಅವರು ಮಾತನಾಡಿ, ಸಡಗರದಿಂದ ಶಾಲೆಗಳು ಪ್ರಾರಂಭವಾಗುತ್ತಿವೆ. ಮಕ್ಕಳ ಸಂಪೂರ್ಣ ಬೆಳವಣಿಗೆಗೆ ಗುಣಮಟ್ಟದ ಶಿಕ್ಷಣ ನೀಡುವುದು ಸರ್ಕಾರಿ ಶಾಲೆಗಳ ಗುರಿ. ಮಕ್ಕಳು ಪ್ರತಿದಿನ ಏಕಾಗ್ರತೆಯಿಂದ ಕಲಿಯಬೇಕು. ಸರ್ಕಾರಿ ಶಾಲೆಗಳ ಮಕ್ಕಳ ಭವಿಷ್ಯ ಉಜ್ವಲ

» ನಾಲ್ಕನೇ ಪುಟದಲ್ಲಿ

> **"ಉತ್ತಮ ಕಲಿಕೆ, ಉತ್ತಮ ಭವಿಷ್ಯವೆಂಬ ಘೋಷ ವಾಕ್ಯದೊಂದಿಗೆ ಈ ಬಾರಿಯ ಶೈಕ್ಷಣಿಕ ವರ್ಷ ವನ್ನು ಪ್ರಾರಂಭಿಸಲಾಗುತ್ತಿದೆ. ಮಕ್ಕಳಿಗೆ ಇಂದಿನಿಂದಲೇ ಸಮವಸ್ತ್ರ, ಪಠ್ಯ-ಪುಸ್ತಕ ಗಳನ್ನು ಕೂಡ ವಿತರಿಸಲಾಗುತ್ತಿದೆ.**
> **- ಬಲರಾಮ್, ಶಾಲಾ ಶಿಕ್ಷಣ ಇಲಾಖೆಯ ಉಪನಿರ್ದೇಶಕ**






ಐಪಿಎಲ್ ಆರಂಭವಾದ ದಿನಗಳಲ್ಲಿ ನಾನು ಇಷ್ಟಪಡುತ್ತಿದ್ದ ಆಟಗಾರರಲ್ಲಿ ಒಬ್ಬರಾಗಿದ್ದವರು ಸುರೇಶ್ ರೈನಾ. ರೈನಾ ತಮ್ಮ ಆಟದ ಜತೆಗೆ ಸ್ಟೈಲ್‌ನಿಂದಲೂ ಇಷ್ಟವಾಗುತ್ತಿದ್ದರು. ಒಮ್ಮೆ ಅವರ ಪೂರ್ವಾಪರ, ಬಾಲ್ಯದಲ್ಲಿ ಅವರು ಪಟ್ಟ ಪಾಡು, ಇವನ್ನೆಲ್ಲ ತಿಳಿದ ನಂತರವಂತೂ ನಾನು ಅವರ ಪಕ್ಕಾ ಅಭಿಮಾನಿಯಾದೆ. ರೈನಾ ಕುರಿತು ಎಲ್ಲಿಯೇ, ಏನೇ ಕಂಡರೂ ಒಂದು ಘಳಿಗೆ ನಿಂತು ಅದನ್ನು ನೋಡಿಯೇ ಮುಂದೆ ಹೋಗುತ್ತೇನೆ.

# ಪಿಚ್ ಮೇಲೆ ಮಲಗುತ್ತಿದ್ದ ಐಪಿಎಲ್ ಸ್ಟಾರ್

ವಿದೇಶವಾಸಿ ಈ ಬಾರಿಯ ಐಪಿಎಲ್ ಪಂದ್ಯಾಟಗಳು ಉಳಿದ ಎಲ್ಲಾ ಸರಣಿಗಳಿಗಿಂತ ಹೆಚ್ಚು ಮನರಂಜನೆ ನೀಡಿವೆ. ಬಹುತೇಕ ಪಂದ್ಯಗಳಲ್ಲಿ ತಂಡಗಳು ಇನ್ನೂರಕ್ಕೂ ಹೆಚ್ಚು ರನ್ ಗಳಿಸಿ ಸವಾಲು ಒಡ್ಡಿದರೆ, ಅದನ್ನೂ ಬೆನ್ನಟ್ಟಿ ಪಂದ್ಯವನ್ನು ಗೆದ್ದ ದಾಖಲೆಗಳೂ ಸಾಕಷ್ಟಿವೆ. ಒಟ್ಟೂ ಎಪ್ಪತ್ತನಾಲ್ಕು ಪಂದ್ಯಗಳಲ್ಲಿ ಸಾವಿರದ ನಾಲ್ಕು ನೂರಕ್ಕೂ ಹೆಚ್ಚು ಸಿಕ್ಸರ್, ಎರಡು ಸಾವಿರದ ಮುನ್ನೂರಕ್ಕೂ ಹೆಚ್ಚು ಫೋರ್, ಸುಮಾರು ನಾಲ್ಕು ಸಾವಿರ ಬೌಂಡರಿ ರನ್‌ಗಳು ಈ ಒಂದು ಸರಣಿಯಲ್ಲಿ ಕಾಣ ಸಿಕ್ಕಿವೆ.

ಹಾಗೆಯೇ ಹಲವಾರು ಪ್ರತಿಭೆಗಳು ಕೂಡ ತಮ್ಮ ಆಕರ್ಷಕ ಆಟದಿಂದ ಕ್ರಿಕೆಟ್ ಪ್ರೇಮಿಗಳ ಮನ ತಣಿಸಿದ್ದಾರೆ, ಪಂದ್ಯ ನೋಡುವಾಗ ಕುರ್ಚಿಯ ತುದಿಗೆ ಬಂದು ಕುಳಿತುಕೊಳ್ಳುವಂತೆ ಮಾಡಿದ್ದಾರೆ.

ಒಂದು ಕಾಲವಿತ್ತು, ಭಾರತದ ಕ್ರಿಕೆಟ್ ತಂಡ ಎಂದರೆ, ದೆಹಲಿ ಮತ್ತು ಮುಂಬೈನವರೇ ಹೆಚ್ಚು ತುಂಬಿಕೊಂಡಿರುತ್ತಿದ್ದರು. ನಾಲ್ಕರಿಂದ ಐದು ಆಟಗಾರರು ದೆಹಲಿಯವರಾದರೆ, ನಾಲ್ಕರಿಂದ ಐದು ಆಟಗಾರರು ಮುಂಬೈನವರು. ಉಳಿದ ಒಂದೆರಡು ಆಟಗಾರರು ಕರ್ನಾಟಕ, ತಮಿಳುನಾಡು, ಪಂಜಾಬ, ಪಶ್ಚಿಮ ಬಂಗಾಳ ಹೀಗೆ ಉಳಿದ ರಾಜ್ಯಗಳಿಂದ ಇರುತ್ತಿದ್ದರು.

ಬಿಹಾರ, ಒರಿಸ್ಸಾ, ಕೇರಳ, ರಾಜಸ್ಥಾನ, ಹರಿಯಾಣ, ಪೂರ್ವದ ಸಣ್ಣ ಪುಟ್ಟ ರಾಜ್ಯಗಳ ಆಟಗಾರರು ಔಷಧಕ್ಕೆ ಬೇಕೆಂದರೂ ಸಿಗುತ್ತಿರಲಿಲ್ಲ. ಎಲ್ಲಾ ದೃಷ್ಟಿಬೊಟ್ಟಿನಂತೆ ದಂದು, ಇಂದು ಆಟಗಾರರು, ಅದೂ ಮುಂಬೈ, ದೆಹಲಿಯಂಥ ಮಹಾನಗರದಲ್ಲಿ ಬಂದು ನೆಲೆಸಿದವರು ಕಾಣ ಸಿಗುತ್ತಿದ್ದರು.

ಐದು ಆರು ದಶಕಗಳ ಹಿಂದೆ ಪ್ರತಿಷ್ಠಿತ ಕ್ಲಬ್‌ಗಳಿಗೆ, ಜಿಮ್ಖಾನಾಗಳಿಗೆ ಹೋಗಿ ಆಟವಾಡುತ್ತಿದ್ದ ಅಥವಾ ಅಲ್ಲಿ ತರಬೇತಿ ಪಡೆಯುತ್ತಿದ್ದ, ಅವರಿಂದಲೇ ಶಿಫಾರಸು ಪಡೆಯುತ್ತಿದ್ದ ಆಟಗಾರರು ರಾಷ್ಟ್ರೀಯ ತಂಡದಲ್ಲಿರುತ್ತಿದ್ದರು. ಹಾಗಂತ ಅವರೆಲ್ಲ ಕೆಟ್ಟ ಆಟಗಾರರಾಗಿರುತ್ತಿದ್ದರು ಎಂದಲ್ಲ. ಆದರೆ ಇಂದಿನ ಭಾರತ ತಂಡದಲ್ಲಿ ಇರುವಷ್ಟು ಪ್ರತಿಭಾವಂತರು ಆ ಕಾಲದಲ್ಲಿ ಇರುತ್ತಿರಲಿಲ್ಲ. ಅದಕ್ಕೆ ಬೇರೆ ಬೇರೆ ಕಾರಣಗಳು ಇದ್ದಿರಬಹುದಾದರೂ ಅದು ವಾಸ್ತವ.

ಎಂಬತ್ತು-ತೊಂಭತ್ತರ ದಶಕದಲ್ಲಿ, ಮಹಾನಗರಗಳ ಜತೆಗೆ ಉಳಿದ ನಗರಗಳಲ್ಲಿರುವ ಪ್ರತಿಭೆಗಳನ್ನು ಗುರುತಿಸುವ ಕಾರ್ಯ ಆರಂಭವಾಯಿತು. ಕೆಲವು ವರ್ಷಗಳ ನಂತರ ಈ ಕಾರ್ಯ ಇನ್ನಷ್ಟು ಚುರುಕುಗೊಂಡು, ಗ್ರಾಮೀಣ ಪ್ರತಿಭೆಗಳು ರಾಷ್ಟ್ರಮಟ್ಟದಲ್ಲಿ ಗುರುತಿಸಿಕೊಳ್ಳುವ ಹಂತ ತಲುಪಿತು.

ಮಹಾನಗರಗಳ ಪದ್ಧತಿಯೇ ಇದ್ದಿದ್ದರೆ ರೈಲ್ವೆಯಲ್ಲಿ ಟಿಕೆಟ್ ಕಲೆಕ್ಟರ್ ಕೆಲಸ ಮಾಡುತ್ತಿದ್ದ ಮಹೇಂದ್ರ ಸಿಂಗ್ ಧೋನಿ, ಗುಜರಾತಿನ ಹಳ್ಳಿಯ ಮೂಲೆಯಲ್ಲಿದ್ದ ರೈತರ ಮಗ, ಸ್ವತಃ ಕಲ್ಲು ಕೆಲಸ ಮಾಡಿಕೊಂಡಿದ್ದ ಮುನಾಫ್ ಪಟೇಲ್, ವಾಚ್ಮನ್ ಕೆಲಸ ಮಾಡುತ್ತಿದ್ದವರ ಮಗ ರವೀಂದ್ರ ಜಡೇಜಾ, ಕಲ್ಲಿದ್ದಲಿನ ಗಣಿಯಲ್ಲಿ ಕೆಲಸ ಮಾಡುತ್ತಿದ್ದವರ ಮಗ ಉಮೇಶ ಯಾದವ್, ಗ್ಯಾಸ್ ಸಿಲಿಂಡರ್ ವಿತರಣೆ ಮಾಡುತ್ತಿದ್ದವರ ಮಗ ರಿಂಕು ಸಿಂಗ್, ಮಸೀದಿಯಲ್ಲಿ ಪ್ರಾರ್ಥನೆಗೆ ಅಜಾನ್ ಕೊಡುವ ಮೌಲ್ವಿಯ ಮಕ್ಕಳಾದ ಯೂಸುಫ್ ಮತ್ತು ಇರ್ಫಾನ್ ಪಠಾಣ, ದಾವಣಗೆರೆಯಲ್ಲಿ ಆಟೋರಿಕ್ಷಾ ಓಡಿಸುತ್ತಿದ್ದವರ ಮಗ ವಿನಯ್ ಕುಮಾರ್, ಹೈದರಾಬಾದ್‌ನಲ್ಲಿ ಆಟೋರಿಕ್ಷಾ ಓಡಿಸುತ್ತಿದ್ದವರ ಮಗ ಮಹಮ್ಮದ್ ಸಿರಾಜ್, ಬೀದಿ ಬದಿಯಲ್ಲಿ ಪಾನಿಪುರಿ ಮಾರುತ್ತಿದ್ದ ಯಶಸ್ವಿ ಜೈಸ್ವಾಲ್ ಮೊದಲಾದವರು ಭಾರತದ ತಂಡ ತಲುಪುವುದಿರಲಿ, ರಾಜ್ಯಮಟ್ಟದ ರಣಜಿ ಪಂದ್ಯ ಆಡುವುದಾಗಲಿ, ಕೊನೆ ಪಕ್ಷ ಐಪಿಎಲ್ ಮುಖಾಂತರ ಕ್ರಿಕೆಟ್ ಪ್ರೇಮಿಗಳನ್ನು ರಂಜಿಸುವುದಾಗಲಿ ಸಾಧ್ಯವಾಗುತ್ತಿರಲಿಲ್ಲ.

ಐಪಿಎಲ್‌ನಲ್ಲಿ ಕೆಲವು ಹೊಸ ಪ್ರತಿಭೆಗಳು ಬಂದು ತಮ್ಮನ್ನು ಸ್ಥಾಪಿಸಿಕೊಂಡದ್ದು ಹೌದಾದರೂ, ಅವರ ಯಶಸ್ಸಿನ ಕಥೆ ನಮ್ಮ ಕಣ್ಣು-ಕಿವಿಗಳಿಗೆ ಖುಷಿ ಕೊಡುವುದು ಹೌದಾದರೂ, ಅವರ ಸಾಧನೆ, ಪಟ್ಟ ಶ್ರಮ, ಅವರ ಬದ್ಧತೆ, ಇತ್ಯಾದಿಗಳು ಸ್ಪೂರ್ತಿದಾಯಕವೂ, ಯುವ ಪೀಳಿಗೆಗೆ ಪ್ರೇರಣಾದಾಯಕವೂ ಆಗಿವೆ. ಈ ನಿಟ್ಟಿನಲ್ಲಿ ಐಪಿಎಲ್ ಒಳ್ಳೆಯ ಪ್ರತಿಭೆಗಳನ್ನು ಆರಿಸುವುದಕ್ಕೆ ಒಂದು ಉತ್ತಮ ಮಾಧ್ಯಮವಾಯಿತು ಎಂದರೆ ಅತಿಶಯೋಕ್ತಿಯಲ್ಲ.

ಐಪಿಎಲ್ ಆರಂಭವಾದ ದಿನಗಳಲ್ಲಿ ನಾನು ಇಷ್ಟಪಡುತ್ತಿದ್ದ ಆಟಗಾರರಲ್ಲಿ ಒಬ್ಬರಾಗಿದ್ದವರು ಸುರೇಶ್ ರೈನಾ. ರೈನಾ ತಮ್ಮ ಆಟದ ಜತೆಗೆ ಸ್ಟೈಲ್‌ನಿಂದಲೂ ಇಷ್ಟವಾಗುತ್ತಿದ್ದರು. ಒಮ್ಮೆ ಅವರ ಪೂರ್ವಾಪರ, ಬಾಲ್ಯದಲ್ಲಿ ಅವರು ಪಟ್ಟ ಪಾಡು, ಇವನ್ನೆಲ್ಲ ತಿಳಿದ ನಂತರವಂತೂ ನಾನು ಅವರ ಪಕ್ಕಾ ಅಭಿಮಾನಿಯಾದೆ. ರೈನಾ ಕುರಿತು ಎಲ್ಲಿಯೇ, ಏನೇ ಕಂಡರೂ ಒಂದು ಘಳಿಗೆ ನಿಂತು ಅದನ್ನು ನೋಡಿಯೇ ಮುಂದೆ ಹೋಗುತ್ತೇನೆ. ರೈನಾ ನನ್ನ ಮೇಲೆ ಅಷ್ಟು ಪ್ರಭಾವವನ್ನಂತೂ ಬೀರಿದ್ದಾರೆ.

ಅವರು ಟೆಸ್ಟ್, ಏಕದಿನ, ಟಿ-ಟ್ವೆಂಟಿ, ಐಪಿಎಲ್ ಪದ್ಯಗಳಲ್ಲಿ ಗಳಿಸಿದ ರನ್, ಪಡೆದ ವಿಕೆಟ್, ಇತ್ಯಾದಿಗಳ ಕುರಿತು ಇಲ್ಲಿ ಹೇಳುವುದಿಲ್ಲ. ಭಾರತ ತಂಡಕ್ಕೆ ರೈನಾ ನೀಡಿದ ಕೊಡುಗೆಯನ್ನಾಗಲಿ, ಅವರ ದಾಖಲೆಗಳನ್ನಾಗಲಿ ನೆನಪಿಸುವುದಿಲ್ಲ. ಅದೆಲ್ಲ ಎಲ್ಲರಿಗೂ ತಿಳಿದಿರುವಂಥದ್ದೇ.

ಅವರು ಈ ಹಂತ ತಲುಪಲು ಸವೆಸಿದ ದಾರಿಯನ್ನು ಮಾತ್ರ ಆಗಾಗ ನೆನಪಿಸಿಕೊಳ್ಳುತ್ತಿರಬೇಕು. ಸುರೇಶ್ ರೈನಾ ಎಂದಾಕ್ಷಣ ಅವರ ಬ್ಯಾಟಿಂಗ್ ಜತೆಜತೆಗೇ ನೆನಪಾಗುವುದು ಅವರ ಫೀಲ್ಡಿಂಗ್. ಒಂದು ಕಾಲದಲ್ಲಿ ಭಾರತದ ಕ್ರಿಕೆಟ್ ಆಟಗಾರರು ಟೆಸ್ಟ್ ಪಂದ್ಯದ ಮೊದಲ ದಿನ ತೊಟ್ಟ ಬಿಳಿ ಬಣ್ಣದ ಒಂದೇ ಸಮವಸ್ತ್ರವನ್ನು ಕೊನೆಯ ದಿನದವರೆಗೂ ತೊಡುತ್ತಿದ್ದರು. ಬೀಳುವುದಿಲ್ಲ, ಜಾರುವುದಿಲ್ಲ, ಚೆಂಡನ್ನು ಹಿಡಿಯಲು ಓಡುವುದೂ ಇಲ್ಲ. ಹಾಗಿರುವಾಗ ಸಮವಸ್ತ್ರವಾದರೂ ಹೇಗೆ ಮಣ್ಣಾದೀತು? ಕ್ರಮೇಣ ಕ್ಷೇತ್ರರಕ್ಷಣೆಯೂ ಆಟದ ಪ್ರಮುಖ ಭಾಗವಾಯಿತು.

ಉಳಿಸಿದ ಒಂದು ರೂಪಾಯಿ, ಗಳಿಸಿದ ಒಂದು ರೂಪಾಯಿ ಅನ್ನುತ್ತಾರಲ್ಲ, ಹಾಗೆಯೇ ಒಂದು ರನ್ ಉಳಿಸಿದರೆ ಅದು ಗಳಿಸಿದ ರನ್ ಆಗಿದೆ ಎನ್ನುವಂತಾಯಿತು. ಯುವರಾಜ್ ಸಿಂಗ್, ಮೊಹಮ್ಮದ್ ಕೈಫ್, ಸುರೇಶ್ ರೈನಾ ತಂಡದಲ್ಲಿರುವಾಗ (ವಿರಾಟ್ ಕೊಹ್ಲಿ, ರವೀಂದ್ರ ಜಡೇಜಾರನ್ನೂ ಪಟ್ಟಿಗೆ ಸೇರಿಸಿಕೊಳ್ಳಬಹುದು) ಭಾರತದ ಕ್ಷೇತ್ರರಕ್ಷಣೆ ಉತ್ತುಂಗದಲ್ಲಿತ್ತು ಎಂದರೆ ಸುಳ್ಳಲ್ಲ.

ಒಂದು ಸಮಯ ಹೇಗಿತ್ತು ಎಂದರೆ ಯುವರಾಜ, ರೈನಾ, ಕೈಫ್ ಮೂವರೂ ಆಫ್ ಸೈಡ್‌ನಲ್ಲಿ ಗೋಡೆಯಂತೆ ನಿಂತಿರುತ್ತಿದ್ದರು. ಅವರ ಬಳಿ ಚೆಂಡು ಹೋದರೆ ಬ್ಯಾಟ್ಮನ್ ಒಂದು ರನ್ ತೆಗೆದುಕೊಳ್ಳಲು ನಾಲ್ಕು ಬಾರಿ ವಿಚಾರ ಮಾಡಬೇಕಿತ್ತು.

ರೈನಾ ಕಥೆ ಕೇಳಿದಾಗ, ಅವರು ಬಾಲ್ಯದಲ್ಲಿ ಪಟ್ಟ ಕಷ್ಟವೇ ಅವರ ಕ್ಷೇತ್ರ ರಕ್ಷಣೆಗೆ ಉಡುಗೊರೆಯಾಗಿ ಒದಗಿಬಂತು ಅನ್ನಿಸುತ್ತದೆ. ಸುರೇಶ್ ರೈನಾ ಮೂಲತಃ ಕಾಶ್ಮೀರದವರು. ಕಾಶ್ಮೀರದಲ್ಲಿ ತೀವ್ರಗಾಮಿಗಳ ಕೂಗು ಹೆಚ್ಚಾಗುತ್ತಿದ್ದ ಸಂದರ್ಭದಲ್ಲಿ ಅವರ ತಂದೆ ಕಾಶ್ಮೀರ ಬಿಟ್ಟು, ಉತ್ತರಪ್ರದೇಶದ ಮುರಾದಾಬಾದ್‌ಗೆ ಬಂದು ನೆಲೆಸಿದರು. ಅವರ ತಂದೆ ಭಾರತೀಯ ಸೇನೆಯಲ್ಲಿ ಟ್ಯಾಂಕರ್‌ಗಳಿಗೆ ಕೋಡಿಂಗ್ ಕೆಲಸ ಮಾಡಿ ತಿಂಗಳಿಗೆ ಹತ್ತು ಸಾವಿರ ರೂ. ಸಂಬಳ ಪಡೆಯುತ್ತಿದ್ದ ಖಡಕ್ ಮನುಷ್ಯರಾಗಿದ್ದರು. ಆ ಹಣದಲ್ಲಿಯೇ ಹೆಂಡತಿ ಮತ್ತು ಆರು ಜನ ಮಕ್ಕಳನ್ನು ಅವರು ಸಾಕಬೇಕಾಗಿತ್ತು.

ತಾಯಿ ಮುಂಗೋಪಿ ಮತ್ತು ಸಿಟ್ಟಿನ ಸಾಕಾರ ಮೂರ್ತಿ. ಅವರ ಕೈಯಲ್ಲಿ ಸೌಟಿಗಿಂತ ಲಟ್ಟಣಿಗೆ ಇದ್ದದ್ದೇ ಹೆಚ್ಚು. ಅದು ಮಕ್ಕಳು ದಾರಿ ತಪ್ಪಬಾರದು ಎಂಬ ಕಾರಣಕ್ಕಾಗಿ. ಆದ್ದರಿಂದ ಸಣ್ಣವರಿರುವಾಗ ರೈನಾಗೆ ಲಟ್ಟಣಿಗೆ ಯಾವ ಕೆಲಸಕ್ಕೆ ಬರುತ್ತದೆ ಎಂದು ಕೇಳಿದರೆ ರೊಟ್ಟಿ ಲಟ್ಟಿಸುವುದಕ್ಕೆ ಎನ್ನುವುದಕ್ಕಿಂತ ಬೆನ್ನಿಗೆ ಬಾರಿಸಲು ಹೆಚ್ಚು ಪ್ರಯೋಜನಕ್ಕೆ ಬರುತ್ತದೆ ಎನ್ನುವಂತಿತ್ತು.



ರೈನಾ ಅಣ್ಣಂದಿರಿಂದಲೂ ಸಾಕಷ್ಟು ಪೆಟ್ಟು ತಿನ್ನುತ್ತಿದ್ದರು. ಅಣ್ಣಂದಿರು ಅವರನ್ನು ಬಗ್ಗಿ ನಿಲ್ಲಿಸುತ್ತಿದ್ದರು, ಉಟಾಬಸ್ ಹೊಡೆಸುತ್ತಿದ್ದರು. ಇವೆಲ್ಲ ಹೆಚ್ಚಾಗಿ ಆಟದ ವಿಷಯದಲ್ಲಿಯೇ ಆಗುತ್ತಿತ್ತು. ರೈನಾ ಹನ್ನೆರಡು ವರ್ಷದವರಾಗಿದ್ದಾಗ ಊರಿನ ಗಲ್ಲಿಗಳಲ್ಲಿ, ಸಹೋದರ ಮತ್ತು ಸ್ನೇಹಿತರೊಂದಿಗೆ ಕ್ರಿಕೆಟ್ ಆಡುತ್ತಿದ್ದರು.

ಹಾಗೆಯೇ ಊರು ಊರಿನ ನಡುವೆ ನಡೆಯುವ ಸಣ್ಣ ಪುಟ್ಟ ಮಕ್ಕಳ ಪಂದ್ಯಗಳಲ್ಲಿ ಆಡುತಿದ್ದರು. ಎಷ್ಟು ಚೆನ್ನಾಗಿ ಆಡುತ್ತಿದ್ದರು ಎಂದರೆ ನೋಡಲು ಬಂದ ಕೆಲವು ಊರಿನ ಜನ ರೈನಾ ಆಟ ನೋಡಿ, ಖುಷಿಯಾಗಿ, ಐವತ್ತು ನೂರು ರೂಪಾಯಿಯ ಬಹುಮಾನ ಕೊಟ್ಟು ಹೋಗುತ್ತಿದ್ದರು. ಅದರಿಂದ ಪ್ರೇರಣೆಗೊಂಡ ರೈನಾ ಲಖನೌ ನಗರದಲ್ಲಿರುವ ಸ್ಪೋರ್ಟ್ಸ್ ಕಾಲೇಜ್ ಸೇರಿಕೊಂಡರು. ಅಲ್ಲಿ ಸೇರಲು ಪ್ರತಿ ವರ್ಷ ಹತ್ತು ಸಾವಿರಕ್ಕೂ ಹೆಚ್ಚು ವಿದ್ಯಾರ್ಥಿಗಳು ಅರ್ಜಿ ಹಾಕುತ್ತಿದ್ದರು. ಬಂದ ವಿದ್ಯಾರ್ಥಿಗಳಿಗೆ ಹತ್ತರಿಂದ ಹದಿನೈದು ಚೆಂಡು ಎಸೆಯಲಾಗುತ್ತಿತ್ತು.



ಅದರಲ್ಲಿಯೇ ಅವರು ತಮ್ಮ ಪ್ರತಿಭೆ ತೋರಿಸಬೇಕಾಗುತ್ತಿತ್ತು. ಇವೆಲ್ಲದರ ನಡುವೆ ರೈನಾ ಆಯ್ಕೆಯಾಗಿದ್ದರು. ರೈನಾ ಅಲ್ಲಿ ಸೇರಿಕೊಂಡಾಗ ವರ್ಷಕ್ಕೆ ಹತ್ತು ಸಾವಿರ ರೂ. ಫೀಸ್ ಕಟ್ಟಬೇಕಾಗಿತ್ತು. ತಂದೆಗೆ ಬರುತ್ತಿದ್ದ ಸಂಬಳದಲ್ಲಿ ರೈನಾ ಅವರಿಗೆ ಕೊಡಲು ಇಷ್ಟು ಮಾತ್ರ ಸಾಧ್ಯವಾಗುತ್ತಿತ್ತು. ಉಳಿದದ್ದನ್ನು ರೈನಾ ಹೇಗೋ ಹೊಂದಿಸಿಕೊಳ್ಳಬೇಕಾಗಿತ್ತು.

ರೈನಾ ಲಖನೌನಲ್ಲಿ ಹಾಸ್ಟೆಲ್‌ನಲ್ಲಿ ಉಳಿದುಕೊಂಡಾಗ ಒಂದೆರಡು ಜೊತೆ ಬಟ್ಟೆ, ಒಂದು ಹಾಸು, ಒಂದು ಹೊದಿಕೆ ಬಿಟ್ಟರೆ ಇನ್ನೇನೂ ಇರಲಿಲ್ಲ. ಹಾಸ್ಟೆಲ್‌ನಲ್ಲಿ ಒಂದು ಕೋಣೆಯಲ್ಲಿ ಮೂರು ಜನ ಉಳಿದುಕೊಳ್ಳಬೇಕಾಗಿತ್ತು. ಆದರೆ ಎರಡೇ ಮಂಚ ಇರುತ್ತಿತ್ತು. ರೈನಾಗಿಂತ ದೊಡ್ಡ ಮಕ್ಕಳು ಮಂಚದ ಮೇಲೆ ಮಲಗುತ್ತಿದ್ದುದರಿಂದ ರೈನಾ ನೆಲದ ಮೇಲೆ ಮಲಗುತ್ತಿದ್ದರು.

ಹಾಸ್ಟೆಲ್‌ನ ಕೋಣೆಯ ಕಿಟಕಿಗಳಿಗೆ ಗಾಜುಗಳು ಇರುತ್ತಿರಲಿಲ್ಲವಾದ್ದರಿಂದ ಮಳೆ ಮತ್ತು ಚಳಿಗಾಳಿಯಿಂದ ರಕ್ಷಿಸಿಕೊಳ್ಳಲು ಪೇಪರ್ ಅಂಟಿಸುತ್ತಿದ್ದರು. ಚಳಿಗಾಲದಲ್ಲಂತೂ ಚಳಿ ತಡೆಯಲಾಗದೆ ರೈನಾ ಎಷ್ಟೋ ಬಾರಿ ಕ್ರಿಕೆಟ್ ಪ್ಯಾಡ್ ಕಟ್ಟಿಕೊಂಡು, ಹ್ಯಾಂಡ್ ಗ್ಲೌಸ್ ಹಾಕಿಕೊಂಡು ಮಲಗುತ್ತಿದ್ದರು.

ದೊಡ್ಡ ಮಕ್ಕಳು ಕೆಲವೊಮ್ಮೆ ರೈನಾ ಮೈಮೇಲೆ ತಣ್ಣಗಿನ ನೀರು ತಂದು ಸುರಿಯುತ್ತಿದ್ದರು. ಎಲೆ ಅಡಿಕೆ ಅಗೆದು ಉಗಿಯುತ್ತಿದ್ದರು. ಬಿಡುವಿದ್ದಾಗ ತಮ್ಮ ಬಟ್ಟೆ ತೊಳೆದುಕೊಳ್ಳುವುದರ ಜತೆಗೆ ದೊಡ್ಡವರ ಬಟ್ಟೆಯನ್ನೂ ತೊಳೆದು ಕೊಡಬೇಕಾಗಿತ್ತು. ಕೆಲವು ಮಕ್ಕಳು ಬಟ್ಟೆ ತೊಳೆದಿದ್ದು ಸರಿಯಾಗಲಿಲ್ಲ, ಕೊಳೆ ಹೋಗಲಿಲ್ಲ ಎಂದು ರೈನಾ ಅವರನ್ನು ಹೊಡೆಯುತ್ತಿದ್ದರು.

ಇದೇ ಹಾಸ್ಟೆಲ್ ಕೋಣೆಯ ಒಳಗಾದರೆ, ರೈನಾ ಅವರ ವಯಸ್ಸಿನ ಇತರ ಮಕ್ಕಳೊಂದಿಗೆ ಸೇರಿ ಮೈದಾನದಲ್ಲಿಯೂ ಕೆಲಸ ಮಾಡಬೇಕಾಗುತ್ತಿತ್ತು. ಕ್ರಿಕೆಟ್ ಪಿಚ್ ಮೇಲೆ ರೋಲರ್ ಓಡಾಡಿಸಬೇಕಾಗುತ್ತಿತ್ತು, ಅದೂ ಕೈಯಲ್ಲಿ ಎಳೆದುಕೊಂಡು ಹೋಗುವಂತಹ ರೋಲರ್. ಕೆಲವೊಮ್ಮೆ ಮಳೆ ಬಂದಾಗ ರೈನಾ ಇತರ ಮಕ್ಕಳ ಜೊತೆ ಪಿಚ್‌ಗೆ ನೀರು ತಾಗದಂತೆ ಬಚಾವ್ ಮಾಡಲು, ಪಿಚ್ಮೇಲೆ ಮಲಗಿಕೊಳ್ಳುತ್ತಿದ್ದರು. ಏಕೆಂದರೆ ಅಲ್ಲಿ ಪಿಚ್ ಮುಚ್ಚಲು ತಾಡಪತ್ರಿಯಾಗಲಿ, ಪ್ಲಾಸ್ಟಿಕ್ ಆಗಲಿ ಇರುತ್ತಿರಲಿಲ್ಲ.

ಇಷ್ಟು ಮಾಡಿಯೂ ಅವರಿಗೆ ಬ್ಯಾಟಿಂಗ್ ಸಿಗುತ್ತಿರಲಿಲ್ಲ. ಅವರು ದೊಡ್ಡ ವಿದ್ಯಾರ್ಥಿಗಳಿಗೆ ದಿನವಿಡೀ ಬೌಲಿಂಗ್ ಮಾಡಬೇಕಾಗಿತ್ತು. ಎದರೂ ಅಪರೂಪಕ್ಕೊಮ್ಮೆ ಇವರಿಗೆ ಬ್ಯಾಟಿಂಗ್ ಸಿಕ್ಕಾಗ ಈ ಎಲ್ಲಾ ಸಿಟ್ಟನ್ನು ಅವರು ಚೆಂಡನ್ನು ಬೌಂಡರಿಗೆ ಅಟ್ಟುವ ಮೂಲಕ ತೀರಿಸಿ ಕೊಳ್ಳುತ್ತಿದ್ದರು. ಕೆಲವೊಮ್ಮೆ ಅದಕ್ಕೂ ಪೆಟ್ಟು ತಿನ್ನಬೇಕಾಗಿತ್ತು.

ರೈನಾ ಉತ್ತರ ಪ್ರದೇಶದ ಹದಿನಾಲ್ಕು ವರ್ಷಕ್ಕೂ ಸಣ್ಣವರ ತಂಡಕ್ಕೆ ಆಯ್ಕೆಯಾಗಿದ್ದರು. ಒಮ್ಮೆ ಪಂದ್ಯಾಟದಲ್ಲಿ ಭಾಗವಹಿಸಲು ತಂಡದವರೊಂದಿಗೆ ರೈಲಿನಲ್ಲಿ ಪ್ರಯಾಣಿಸುತ್ತಿದ್ದರು. ದೊಡ್ಡ ಮಕ್ಕಳು ಬರ್ತ್‌ನಲ್ಲಿ ಮಲಗಿದ್ದರೆ, ರೈನಾ ಬೋಗಿಯ ನೆಲದ ಮೇಲೆ ಪೇಪರ್ ಹಾಸಿಕೊಂಡು ಮಲಗಿದ್ದರು.

ಇದ್ದಕ್ಕಿದ್ದಂತೆ ಅವರಿಗೆ ಎದೆಯ ಮೇಲೆ ಭಾರವಾದ ವಸ್ತು ಇಟ್ಟಂತೆ ಭಾಸವಾಯಿತು. ಕಣ್ಣು ತೆರೆದು ನೋಡಿದಾಗ ಎದೆಯ ಮೇಲೆ ಒಬ್ಬ ಹುಡುಗ ಕುಳಿತು ರೈನಾ ಮೇಲೆ ಮೂತ್ರ ವಿಸರ್ಜಿಸುತ್ತಿದ್ದ. ತಪ್ಪಿಸಿಕೊಳ್ಳಬೇಕೆಂದರೆ ಇನ್ನಿಬ್ಬರು ರೈನಾ ಕೈಯನ್ನು ಗಟ್ಟಿಯಾಗಿ ಹಿಡಿದುಕೊಂಡಿದ್ದರು. ಹೇಗೋ ಕಷ್ಟ ಪಟ್ಟು ರೈನಾ ಕೈ ಬಿಡಿಸಿಕೊಂಡು ಅವರನ್ನು ನೂಕಿದಾಗ ಒಬ್ಬ ಹುಡುಗ ರೈಲಿನಿಂದ ಹೊರಗೆ ಹೋಗಿ ಬಿದ್ದ. ರೈಲು ತೀರಾ ನಿಧಾನವಾಗಿ ಚಲಿಸುತ್ತಿದ್ದುದರಿಂದ ಆತನಿಗೆ ಹೆಚ್ಚು ಪೆಟ್ಟಾಗಲಿಲ್ಲ. ಇಲ್ಲವಾದರೆ ರೈನಾ ಸಂಕಷ್ಟಕ್ಕೆ ಸಿಲುಕಿಕೊಳ್ಳುತ್ತಿದ್ದರು.

ಒಮ್ಮೆ ಹಾಸ್ಟೆಲ್‌ನಿಂದ ಮನೆಗೆ ಬರಬೇಕು ಅಂದುಕೊಂಡಾಗ, ಬಸ್, ಟ್ರೈನ್ ಸಿಗದೇ ಹೆದ್ದಾರಿಯಲ್ಲಿ ನಿಂತು ಲಾರಿಗೆ ಕೈ ತೋರಿಸಿದರು. ಲಾರಿ ನಿಂತಿತು, ರೈನಾ ಅದರೊಳಗೆ ಹತ್ತಿಕೊಂಡರು. ಆದರೆ ಅದರಲ್ಲಿ ಇನ್ನೂ ನಾಲ್ಕೈದು ಜನ ಇದ್ದರು. ಎಲ್ಲರೂ ಪಾನಮತ್ತರಾಗಿದ್ದು, ಅಸಭ್ಯವಾಗಿ ವರ್ತಿಸಲು ಆರಂಭಿಸಿದರು. ರೈನಾ ತಮ್ಮ ಮೊಣಕೈನಿಂದ ಕಿಟಕಿಯ ಗಾಜನ್ನು ಗುದ್ದಿ ಒಡೆದು, ಚಲಿಸುತ್ತಿರುವ ಲಾರಿಯಿಂದಲೇ ಹೊರಗೆ ಜಿಗಿದು ಓಡಿ ಬಂದಿದ್ದರು. ಅದೃಷ್ಟವಶಾತ್ ಅವರಿಗೆ ಯಾವುದೇ ದೊಡ್ಡ ಪೆಟ್ಟಾಗಿರಲಿಲ್ಲ.

ರೈನಾ ಕಾಲೇಜಿನಲ್ಲಿರುವಾಗ ಪ್ರತಿನಿತ್ಯ ರ್‍ಯಾಗಿಂಗ್ ನಡೆಯುತ್ತಿತ್ತು. ಕೆಲವೊಮ್ಮೆ ರ್‍ಯಾಗಿಂಗ್ ಅತಿಯಾದಾಗ, ಯಾರ ಬಳಿಯೂ ಹೇಳಿಕೊಳ್ಳಲಾಗದ ರೈನಾ ಒಬ್ಬರೇ ಕುಳಿತು ಅಳುತ್ತಿದ್ದರು. ಒಮ್ಮೆ ರಾತ್ರೋರಾತ್ರಿ ಯಾರಿಗೂ ಹೇಳದೇ ಹಾಸ್ಟೆಲ್‌ನಿಂದ ಮನೆಗೆ ಓಡಿ ಬಂದಿದ್ದರು. ಆಗ ರೈನಾ ಅಣ್ಣ ಅವರಿಗೆ ಸಮಾಧಾನ ಮಾಡಿ, ಯಾವ ಕಾಲಕ್ಕೂ, ಯಾರಿಗೂ ಹೆದರಬೇಡ ಎಂದು ಧೈರ್ಯ ತುಂಬಿದರು.

ರೈನಾ ಜತೆ ಬಂದು, ಶಿಕ್ಷಕರಲ್ಲಿ ಮಾತನಾಡಿ, ದೊಡ್ಡವರು ಸಣ್ಣವರಿಗೆ ಮಾಡುತ್ತಿರುವ ರ್‍ಯಾಗಿಂಗ್ ಬಗ್ಗೆ ತಿಳಿಸಿದರು. ಭರವಸೆ ಸಿಕ್ಕ ನಂತರ ರೈನಾ ಅವರನ್ನು ಪುನಃ ಬಿಟ್ಟು ಬಂದರು. ಅಲ್ಲಿಗೆ ರೈನಾ ಮನಸ್ಸು ಮತ್ತು ದೇಹ ಎರಡೂ ಕಲ್ಲಾಗಿತ್ತು. ಕ್ರಿಕೆಟ್ ಆಡಬೇಕು, ಭಾರತ ತಂಡವನ್ನು ಸೇರಿಕೊಳ್ಳಬೇಕು ಎನ್ನುವುದು ಅವರ ಮನಸ್ಸಿನಲ್ಲಿ ಕಲ್ಲಿನಷ್ಟೇ ಗಟ್ಟಿಯಾಗಿ ಕುಳಿತು ಕೊಂಡು ಬಿಟ್ಟಿತು. ಅಲ್ಲಿಂದ ಮುಂದೆ ರೈನಾ ಬದುಕು ಅವರದ್ದಾಗಿರಲಿಲ್ಲ, ಭಾರತೀಯ ಕ್ರಿಕೆಟ್ ಪ್ರೇಮಿಗಳದ್ದಾಗಿತ್ತು.

ರೈನಾ ಈಗ ಉದ್ಯಮಿಯಾಗಿದ್ದಾರೆ, ಸಂಸಾರದೊಂದಿಗೆ ಸುಖವಾಗಿದ್ದಾರೆ, ಚಾರಿಟಿ, ತರಬೇತಿಗಳಲ್ಲಿ ತಮ್ಮನ್ನು ತೊಡಗಿಸಿಕೊಳ್ಳುತ್ತಿದ್ದಾರೆ. ಅದೂ ಹೇಳಲು ಯೋಗ್ಯವಾದ ವಿಷಯವೇ. ಆದರೆ ಏಕದಿನ, ಟಿ-ಟ್ವೆಂಟಿ, ಅದರಲ್ಲೂ, ಐಪಿಎಲ್ ದಿಗ್ಗಜರ ಪಟ್ಟಿಯಲ್ಲಿ ಗೇಲ್, ಡಿವಿಲಿಯರ್ಸ್, ವಾರ್ನರ್, ಹೇಯ್ಡನ್, ಯುವರಾಜ, ವಿರಾಟ, ರೋಹಿತ್, ಧೋನಿ, ಯಾರ ಹೆಸರನ್ನು ಬೇಕಾದರೂ ಸೇರಿಸಿ, ಆದರೆ ರೈನಾ ಹೆಸರು ಇಲ್ಲದಿದ್ದರೆ ಆ ಪಟ್ಟಿ ಅಪೂರ್ಣ. ರೈನಾ ಈಗ ಐಪಿಎಲ್ ಆಡುತ್ತಿಲ್ಲವಾದರೂ, ಐಪಿಎಲ್ ವಿಷಯದ ಕುರಿತು ಚರ್ಚೆ, ಸಂಭಾಷಣೆ ನಡೆದರೆ ರೈನಾ ನೆನಪಾಗದೇ ಇರುವುದಿಲ್ಲ.

**- ಕಿರಣ್ ಉಪಾಧ್ಯಾಯ,** ಬಹ್ರೈನ್

# ಗೋ ಸಂರಕ್ಷಣೆಯ ಪ್ರಶ್ನೆ..!

## ಜನಭಾವನೆ, ಸಾಮಾಜಿಕ ಸಾಮರಸ್ಯ ಮತ್ತು ಸರ್ಕಾರದ ಹೊಣೆಗಾರಿಕೆ



ದೇಶದಲ್ಲಿ ಗೋ ಸಂರಕ್ಷಣೆ ಮತ್ತು ಗೋಹತ್ಯೆ ನಿಷೇಧದ ವಿಚಾರವು ಹಲವು ವರ್ಷಗಳಿಂದ ಸಾರ್ವಜನಿಕ ಚರ್ಚೆಯ ಪ್ರಮುಖ ವಿಷಯವಾಗಿದೆ. ಭಾರತದ ಸಾಂಸ್ಕೃತಿಕ, ಧಾರ್ಮಿಕ ಮತ್ತು ಗ್ರಾಮೀಣ ಬದುಕಿನಲ್ಲಿ ಗೋವಿಗೆ ವಿಶೇಷ ಸ್ಥಾನಮಾನವಿರುವುದರಿಂದ ಈ ವಿಚಾರವು ಕೇವಲ ಆಡಳಿತಾತ್ಮಕ ನಿರ್ಧಾರದ ವ್ಯಾಪ್ತಿಯಲ್ಲದೇ ಜನಭಾವನೆಗಳೊಂದಿಗೆ ನೇರವಾಗಿ ಸಂಬಂಧ ಹೊಂದಿದೆ. ಇತ್ತೀಚೆಗೆ ಹಸುವಿಗೆ ರಾಷ್ಟ್ರೀಯ ಪ್ರಾಣಿಯ ಸ್ಥಾನಮಾನ ನೀಡುವ ಅಥವಾ ದೇಶಾದ್ಯಂತ ಗೋಹತ್ಯೆಯನ್ನು ಸಂಪೂರ್ಣವಾಗಿ ನಿಷೇಧಿಸುವ ಯಾವುದೇ ಪ್ರಸ್ತಾವ ಕೇಂದ್ರ ಸರ್ಕಾರದ ಪರಿಶೀಲನೆಯಲ್ಲಿಲ್ಲ ಎಂದು ಕೇಂದ್ರ ಕಾನೂನು ಸಚಿವ ಅರ್ಜುನ್ ರಾಮ್ ಮೇಘವಾಲ್ ಸಂಸತ್ತಿನಲ್ಲಿ ನೀಡಿದ ಉತ್ತರವು ಈ ಚರ್ಚೆಗೆ ಮತ್ತೊಮ್ಮೆ ವೇಗ ನೀಡಿದೆ.

ಭಾರತದಲ್ಲಿ ಗೋವಿನ ಕುರಿತು ಇರುವ ಗೌರವವು ಕೇವಲ ಧಾರ್ಮಿಕ ನಂಬಿಕೆಗಳ ಕಾರಣಕ್ಕೆ ಮಾತ್ರ ಸೀಮಿತವಾಗಿಲ್ಲ. ಕೃಷಿ, ಹೈನುಗಾರಿಕೆ, ಪರಿಸರ ಸಂರಕ್ಷಣೆ ಮತ್ತು ಗ್ರಾಮೀಣ ಆರ್ಥಿಕತೆಯೊಂದಿಗೆ ಗೋವು ಅವಿನಾಭಾವ ಸಂಬಂಧ ಹೊಂದಿದೆ. ಅನೇಕ ರೈತ ಕುಟುಂಬಗಳ ಬದುಕಿನ ಭಾಗವಾಗಿರುವ ಗೋವು ಭಾರತೀಯ ಸಂಸ್ಕೃತಿಯ ಪ್ರತೀಕವಾಗಿಯೂ ಪರಿಗಣಿಸಲ್ಪಟ್ಟಿದೆ. ಈ ಕಾರಣದಿಂದಲೇ ದೇಶದ ಅನೇಕ ಭಾಗಗಳಲ್ಲಿ ಗೋ ಸಂರಕ್ಷಣೆಯ ಕುರಿತು ನಿರಂತರವಾಗಿ ಧ್ವನಿಗಳು ಕೇಳಿಬರುತ್ತಿವೆ.

ಗಮನಾರ್ಹ ಸಂಗತಿಯೆಂದರೆ, ಗೋ ಸಂರಕ್ಷಣೆಯ ಪರವಾಗಿ ಕೇಳಿಬರುತ್ತಿರುವ ಧ್ವನಿಗಳು ಯಾವುದೇ ಒಂದು ಸಮುದಾಯಕ್ಕೆ ಸೀಮಿತವಾಗಿಲ್ಲ. ಕರ್ನಾಟಕ ರಾಜ್ಯದಲ್ಲಿಯೇ ಮೊದಲ ಬಾರಿಗೆ ಹಾಸನ ಜಿಲ್ಲೆಯಲ್ಲಿ ಮುಸ್ಲಿಂ ಒಕ್ಕೂಟದ ಮುಖಂಡರು ಪತ್ರಿಕಾಗೋಷ್ಠಿ ನಡೆಸಿ, ಗೋವನ್ನು ರಾಷ್ಟ್ರ ಪ್ರಾಣಿಯಾಗಿ ಘೋಷಿಸಬೇಕು ಎಂದು ಆಗ್ರಹಿಸಿದ್ದರು ಎಂಬುದು ವಿಶೇಷವಾಗಿ ಸ್ಮರಣೀಯ. ಜೊತೆಗೆ ಗೋವುಗಳ ಖರೀದಿ-ಮಾರಾಟ ನಡೆಯುವ ಸಂತೆಯಲ್ಲಿ ಗೋವುಗಳನ್ನು ಮಾರಾಟಕ್ಕೆ ತರಬಾರದು ಹಾಗೂ ಮುಸ್ಲಿಮರಿಗೆ ಗೋವುಗಳನ್ನು ಮಾರಾಟ ಮಾಡಬಾರದು ಎಂಬ ಬೇಡಿಕೆಯನ್ನೂ ಅವರು ಮುಂದಿಟ್ಟಿದ್ದರು. ಈ ನಿಲುವು ಒಪ್ಪಿಗೆ ಅಥವಾ ಭಿನ್ನಾಭಿಪ್ರಾಯಕ್ಕೆ ಒಳಪಡಬಹುದಾದ ವಿಷಯವಾಗಿದ್ದರೂ, ಸಮಾಜದಲ್ಲಿ ಪರಸ್ಪರರ ಧಾರ್ಮಿಕ ಭಾವನೆಗಳಿಗೆ ಗೌರವ ನೀಡುವ ಮನೋಭಾವವನ್ನು ಅದು ಪ್ರತಿಬಿಂಬಿಸುತ್ತದೆ ಎಂಬುದನ್ನು ನಿರ್ಲಕ್ಷಿಸಲು ಸಾಧ್ಯವಿಲ್ಲ.


ಇತಿಹಾಸದ ಪುಟಗಳನ್ನು ತಿರುಗಿ ನೋಡಿದಾಗಲೂ ವಿವಿಧ ಆಡಳಿತಗಾರರು ಜನರ ಭಾವನೆಗಳಿಗೆ ಗೌರವ ನೀಡುವ ಮೂಲಕ ಸಾಮಾಜಿಕ ಸಾಮರಸ್ಯವನ್ನು ಕಾಪಾಡಲು ಪ್ರಯತ್ನಿಸಿರುವ ಉದಾಹರಣೆಗಳು ದೊರೆಯುತ್ತವೆ. ಕೆಲವು ಮೊಘಲ್ ಅರಸರು ಹಿಂದೂ ಸಮುದಾಯದ ಭಾವನೆಗಳನ್ನು ಪರಿಗಣಿಸಿ ಗೋವಧೆಗೆ ನಿರ್ಬಂಧ ಅಥವಾ ನಿಯಂತ್ರಣ ವಿಧಿಸಿದ್ದರೆಂಬ ಉಲ್ಲೇಖಗಳು ಇತಿಹಾಸದಲ್ಲಿ ಕಂಡುಬರುತ್ತವೆ. 1857ರ ಪ್ರಥಮ ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿ ಹಿಂದೂ-ಮುಸ್ಲಿಂ ಐಕ್ಯತೆಯನ್ನು ಬಲಪಡಿಸುವ ಉದ್ದೇಶದಿಂದ ಗೋಹತ್ಯೆಯ ವಿರುದ್ಧ ಕ್ರಮಗಳನ್ನು ಕೈಗೊಂಡಿದ್ದ ಸಂಗತಿಯೂ ದಾಖಲಾಗಿದೆ. ಇವು ಸಮಾಜದಲ್ಲಿ ಪರಸ್ಪರ ಗೌರವ ಮತ್ತು ಸಹಬಾಳ್ವೆಯ ಮೌಲ್ಯಗಳಿಗೆ ನೀಡಲಾಗಿದ್ದ ಮಹತ್ವವನ್ನು ತೋರಿಸುತ್ತವೆ.

ಆದಾಗ್ಯೂ, ಗೋ ಸಂರಕ್ಷಣೆಯ ಪ್ರಶ್ನೆಯನ್ನು ಕೇವಲ ಭಾವನಾತ್ಮಕ ಅಥವಾ ರಾಜಕೀಯ ವಿಚಾರವಾಗಿ ನೋಡುವುದು ಸಾಕಾಗುವುದಿಲ್ಲ. ದೇಶದಲ್ಲಿ ಸಾವಿರಾರು ನಿರ್ಗತಿಕ ಗೋವುಗಳು ಆಶ್ರಯವಿಲ್ಲದೆ ಅಲೆದಾಡುತ್ತಿರುವುದು, ರೈತರು ವಯಸ್ಸಾದ ಜಾನುವಾರುಗಳ ಪಾಲನೆಗೆ ಎದುರಿಸುತ್ತಿರುವ ಆರ್ಥಿಕ ಸಂಕಷ್ಟ, ಗೋಶಾಲೆಗಳ ನಿರ್ವಹಣೆಯ ಸಮಸ್ಯೆಗಳು ಹಾಗೂ ಪಶು ಆರೋಗ್ಯ ಸೇವೆಗಳ ಕೊರತೆ ಮುಂತಾದ ಸವಾಲುಗಳಿಗೂ ಪರಿಹಾರ ಕಂಡುಹಿಡಿಯಬೇಕಾಗಿದೆ. ಗೋ ಸಂರಕ್ಷಣೆ ಎಂಬುದು ಕೇವಲ ನಿಷೇಧದ ಪ್ರಶ್ನೆಯಾಗದೇ, ಸಮಗ್ರ ಪಶುಸಂಪತ್ತಿನ ಅಭಿವೃದ್ಧಿಯ ಪ್ರಶ್ನೆಯಾಗಬೇಕು. ಕೇಂದ್ರ ಸರ್ಕಾರದ ಪ್ರಸ್ತುತ ನಿಲುವು ಏನೇ ಇರಲಿ, ದೇಶದ ವಿವಿಧ ಭಾಗಗಳಲ್ಲಿ ಮತ್ತು ವಿವಿಧ ಸಮುದಾಯಗಳಲ್ಲಿಯೂ ಗೋ ಸಂರಕ್ಷಣೆಯ ಕುರಿತು ಕಾಳಜಿ ವ್ಯಕ್ತವಾಗುತ್ತಿರುವುದು ಸ್ಪಷ್ಟವಾಗಿದೆ. ಹೀಗಿರುವಾಗ ಸರ್ಕಾರಗಳು ಈ ವಿಚಾರವನ್ನು ಕೇವಲ ಕಾನೂನಿನ ಚೌಕಟ್ಟಿನಲ್ಲಷ್ಟೇ ಅಲ್ಲದೆ, ಜನರ ಭಾವನೆಗಳು, ಸಾಮಾಜಿಕ ಸಾಮರಸ್ಯ, ಕೃಷಿ ಆರ್ಥಿಕತೆ ಮತ್ತು ರಾಷ್ಟ್ರೀಯ ಹಿತಾಸಕ್ತಿಗಳ ಬೆಳಕಿನಲ್ಲಿಯೂ ಪರಿಗಣಿಸಬೇಕಾಗಿದೆ.

ಗೋವನ್ನು ರಾಷ್ಟ್ರ ಪ್ರಾಣಿಯಾಗಿ ಘೋಷಿಸಬೇಕೇ ಅಥವಾ ದೇಶಾದ್ಯಂತ ಏಕರೂಪದ ಕಾನೂನು ಜಾರಿಗೊಳಿಸಬೇಕೇ ಎಂಬುದು ಅಂತಿಮವಾಗಿ ಸರ್ಕಾರಗಳ ನಿರ್ಧಾರದ ವಿಷಯ. ಆದರೆ ಈ ಕುರಿತು ನಡೆಯುತ್ತಿರುವ ಚರ್ಚೆಗಳು ಭಾರತೀಯ ಸಮಾಜದಲ್ಲಿ ಪರಸ್ಪರ ಗೌರವ, ಸಾಂಸ್ಕೃತಿಕ ಮೌಲ್ಯಗಳ ಸಂರಕ್ಷಣೆ ಮತ್ತು ಸಾಮಾಜಿಕ ಸಾಮರಸ್ಯಕ್ಕೆ ಜನರು ನೀಡುತ್ತಿರುವ ಮಹತ್ವವನ್ನು ಸ್ಪಷ್ಟಪಡಿಸುತ್ತವೆ. ಆ ಜನಾಭಿಪ್ರಾಯವನ್ನು ಆಲಿಸಿ, ಸಮತೋಲನಯುತ ಮತ್ತು ದೂರದೃಷ್ಟಿಯ ನಿರ್ಧಾರಗಳನ್ನು ಕೈಗೊಳ್ಳುವುದು ಆಡಳಿತದ ಹೊಣೆಗಾರಿಕೆಯಾಗಿದೆ.

**- ಅಲೀಲ್** ಅಕ್ಬರ್



# ಸಂಕಲ್ಪಗಳ ಪುನರ್ ಅವಲೋಕನ

2026ರಲ್ಲಿ ಈಗಾಗಲೇ 5 ತಿಂಗಳು ಕಳೆದಿದೆ. ಹೊಸ ವರ್ಷದ ಪ್ರಾರಂಭದಲ್ಲಿ ನಾವುಗಳು ಅನೇಕ ರೀತಿಯ ಸಂಕಲ್ಪಗಳನ್ನು ಮಾಡಿಕೊಂಡಿರುತ್ತೇವೆ. ಕೆಲವರು ಧೂಮಪಾನ, ಮದ್ಯಪಾನ ಬಿಡುವುದು, ಕೆಲವರು ತಮ್ಮಲ್ಲಿರುವ ಕೋಪ ಕಡಿಮೆ ಮಾಡಿಕೊಳ್ಳುವುದು, ಮತ್ತೆ ಕೆಲವರು ಯೋಗ, ಧ್ಯಾನ, ವಾಕಿಂಗ್, ವ್ಯಾಯಾಮ ಮಾಡುವುದು, ಇನ್ನೂ ಕೆಲವರು ಬೇಗ ಮಲಗಿ ಬೇಗ ಏಳುವುದು, ಹಲವರು ಆಹಾರದಲ್ಲಿ ಡಯಟ್ ಪಾಲಿಸುವುದು, ಇನ್ನೊಂದಿಷ್ಟು ಜನ ತಮ್ಮ ಪೋಷಕರನ್ನು ತುಂಬಾ ಜವಾಬ್ದಾರಿಯಿಂದ ನೋಡಿಕೊಳ್ಳುವುದು, ಒಂದಷ್ಟು ಜನ ಓದುವುದು ಬರೆಯುವುದು, ಕೆಲವರು ಪ್ರವಾಸ ಹೋಗುವುದು. ಹೀಗೆ ಹಲವಾರು ವಿಭಿನ್ನ ವಿಶಿಷ್ಟ ಸಂಕಲ್ಪಗಳನ್ನು ಕೈಗೊಂಡಿರುತ್ತಾರೆ.

ಇದೀಗ ಅದರ ಪುನರ್ ಚಿಂತನೆ ಅಥವಾ ಮೌಲ್ಯಮಾಪನ ಅಥವಾ ಅದರ ಪ್ರಾಯೋಗಿಕ ಯಶಸ್ಸಿನ ಬಗ್ಗೆ ಆತ್ಮಾವಲೋಕನ ಮಾಡಿಕೊಳ್ಳುವ ಸಮಯ. ಸಂಕಲ್ಪಗಳನ್ನು ಯಶಸ್ವಿಯಾಗಿ ಅನುಸರಿಸುತ್ತಿದ್ದರೆ ತುಂಬಾ ಸಂತೋಷ. ಮುಂದುವರಿಸಿ.

ಆದರೆ, ಅದರಂತೆ ನಡೆದುಕೊಳ್ಳಲು ಆಗದಿದ್ದವರು ಮತ್ತೆ ಅದನ್ನು ಇಂದಿನಿಂದಲೇ ಪ್ರಾರಂಭಿಸಲು ಆರಂಭಿಸಿ.

ನಿಮ್ಮ ಮನಸ್ಸಿನ ಬ್ಯಾಟರಿಯನ್ನು ನೀವೇ ನಿಮ್ಮ ವಿಲ್ ಪವರ್ ಉಪಯೋಗಿಸಿ ಚಾರ್ಜ್ ಮಾಡಿಕೊಳ್ಳಿ. ಅದಕ್ಕಾಗಿ ಬೇರೆಯವರ ಸಹಾಯ ನಿರೀಕ್ಷಿಸಬೇಡಿ. ನೆಪಗಳನ್ನು ಹುಡುಕಬೇಡಿ. ವಿಧಿಯನ್ನು - ಪರಿಸ್ಥಿತಿಯನ್ನು ಶಪಿಸುತ್ತಾ ಕಾಲ ದೂಡಬೇಡಿ.

ನಮ್ಮ ಸಂಕಲ್ಪಗಳು ಮತ್ತೆ ಮತ್ತೆ ವಿಫಲವಾಗುವುದನ್ನು ಬದುಕಿನ ಪಾಠಶಾಲೆಯ ಅನುಭವಗಳು ಎಂದೇ ಪರಿಗಣಿಸಿ. ಅದನ್ನು ನೆನೆದು ಒಮ್ಮೆ ನಿಮ್ಮೊಳಗೆ ನಕ್ಕು ಬಿಡಿ. ಮರು ಕ್ಷಣವೇ ಸವಾಲಾಗಿ ಸ್ವೀಕರಿಸಿ ಪುನಃ ಮೊದಲಿನಿಂದ ಪ್ರಾರಂಭಿಸಿ. ಎಷ್ಟೇ ಬಾರಿ ವಿಫಲವಾದರೂ ಮತ್ತೆ ಮತ್ತೆ ಪ್ರಯತ್ನಿಸಿ. ಸೋಲೆಂಬುದು ಒಂದು ಪರಿಣಾಮ ಅಷ್ಟೆ. ಅದೇ ಅಂತಿಮವಲ್ಲ. ಆದರೆ ಪ್ರಯತ್ನ ನಿಲ್ಲಿಸಿದರೆ ಅದು ಸೋಲಲ್ಲ ಸಾವು.

ಆಧುನಿಕ ಕಾಲದಲ್ಲಿ ಬದುಕು ವೇಗವಾಗಿ - ಸ್ಪರ್ಧಾತ್ಮಕವಾಗಿ - ತಾಂತ್ರಿಕವಾಗಿ - ಸಂಕೀರ್ಣವಾಗಿ ಸಾಗುತ್ತಿರುತ್ತದೆ. ಅದರಿಂದಾಗಿ ನಮಗೆ ಅಲ್ಲಲ್ಲಿ ನಿಲ್ದಾಣಗಳ ಅವಶ್ಯಕತೆ ಇರುತ್ತದೆ. ಅದನ್ನು ಸಂಕಲ್ಪಗಳೆಂಬ ಸ್ವಂತ ನಿಲ್ದಾಣಗಳನ್ನು ನಾವೇ ಸೃಷ್ಟಿಸಿಕೊಂಡು ಒಂದಷ್ಟು ವಿಶ್ರಾಂತಿ ಪಡೆದು ಹೊಸ ಉತ್ಸಾಹದಿಂದ ಬದುಕಿನ ಪ್ರಯಾಣ ಮುಂದುವರಿಸಬೇಕು. ನಡೆ ಮುಂದೆ ನಡೆ ಮುಂದೆ ನುಗ್ಗಿ ನಡೆ ಮುಂದೆ, ಜಗ್ಗದೆ ಕುಗ್ಗದೆ ಹಿಗ್ಗಿ ನಡೆ ಮುಂದೆ ಎಂಬ ಕವಿವಾಣಿಯಂತೆ ನಾವು ಈ ವರ್ಷದ ಐದು ತಿಂಗಳ ನಂತರ ನಮ್ಮನ್ನು ಮತ್ತೆ ಬಡಿದೆಬ್ಬಿಸಿಕೊಂಡು ಸಾಧನೆಯ ಹಾದಿಯಲ್ಲಿ ಮುನ್ನಡೆಯೋಣ. ಆದ್ದರಿಂದ ಸಂಕಲ್ಪಗಳು ಸದಾ ಜಾರಿಯಲ್ಲಿರುವಂತೆ ಬದುಕಿನ ದಾರಿಯಲ್ಲಿ ನಮಗೆ ನಾವೇ ಮಾರ್ಗದರ್ಶಕರಾಗಿ ಸಾಗೋಣ ಎಂದು ಆಶಿಸುತ್ತಾ...

ಮನಸ್ಸೆಂಬುದು ಪುನರ್ಭರ್ತಿ ಮಾಡಬಹುದಾದ ಬ್ಯಾಟರಿ ಇದ್ದಂತೆ. ಫುಲ್ ಚಾರ್ಜ್ ಆದಾಗ ಲವಲವಿಕೆಯಿಂದ ಇರುತ್ತದೆ. ಬ್ಯಾಟರಿ ಕಡಿಮೆ ಆಗುತ್ತಿದ್ದಂತೆ ಉತ್ಸಾಹ ಕಡಿಮೆಯಾಗುತ್ತಾ ಸಾಗುತ್ತದೆ. ಸಂಪೂರ್ಣ ಕಡಿಮೆಯಾಗಿ ಸತ್ತ ಮಟ್ಟಿಗೆ ಬಂದಾಗ ಜೀವನವೇ ಬೇಸರವಾಗುತ್ತದೆ. ಅದನ್ನು ಮತ್ತೆ ಮತ್ತೆ ಚಾರ್ಜ್ ಮಾಡಿಕೊಳ್ಳಬೇಕಾದ ಜವಾಬ್ದಾರಿ ನಮ್ಮದೇ. ಎಷ್ಟೋ ಜನರಿಗೆ ಬದುಕಿನ ಅನಿವಾರ್ಯತೆಯಿಂದಾಗಿ ಅಥವಾ ಆಕಸ್ಮಿಕಗಳಿಂದಾಗಿ ಅಥವಾ ದುರಾದೃಷ್ಟದಿಂದಾಗಿ ಜೀವನ ಪ್ರಪಾತಕ್ಕೆ ಕುಸಿಯುತ್ತದೆ. ಕೆಲವೊಮ್ಮೆ ನಿಧಾನವಾಗಿ ಮತ್ತೆ ಕೆಲವೊಮ್ಮೆ ಅನಿರೀಕ್ಷಿತವಾಗಿ ಇದು ಸಂಭವಿಸುತ್ತದೆ.

ಒಮ್ಮೊಮ್ಮೆ ಅದರ ತೀವ್ರತೆ ಎಷ್ಟಿರುತ್ತದೆ ಎಂದರೆ ನಾಳೆ ನನಗೆ ಬದುಕಿನ ಕೊನೆ ದಿನವಾಗಿರುತ್ತದೆ ಎಂದೇ ಭಾಸವಾಗುತ್ತದೆ. ದೇವರೋ - ರಕ್ತ ಸಂಬಂಧಿಗಳೋ - ಆತ್ಮೀಯರೋ ಅಥವಾ ಇನ್ಯಾರೋ ಬಂದು ನಮ್ಮನ್ನು ಕಾಪಾಡಬಹುದು ಎಂಬ ನಿರೀಕ್ಷೆ ಹುಸಿಯಾದಾಗ ನಮ್ಮ ಮನಸ್ಸಿನ ಬ್ಯಾಟರಿ ಸರಿ ಸಮನಾದ ಮಟ್ಟಿಗೆ ಬಂದಿರುತ್ತದೆ. ಇಂತಹ ಕಠಿಣ ಸಂದರ್ಭದಲ್ಲಿಯೇ ನಾವು ಯಾರಿಗೂ ಕಾಯದೆ ಆ ಸಂಕಷ್ಟದಿಂದ ಹೊರಬರುವವರೆಗೂ ಪ್ರತಿ ರಾತ್ರಿ ಮಲಗುವಾಗ ಮತ್ತು ಪ್ರತಿದಿನ ಬೆಳಗ್ಗೆ ಏಳುವಾಗ ನಮ್ಮ ಒಳಗಿನ ಆತ್ಮಶಕ್ತಿಯಿಂದಲೇ ಮನಸ್ಸೆಂಬ ಬ್ಯಾಟರಿಯನ್ನು ಸ್ವತಃ ಚಾರ್ಜ್ ಮಾಡಿಕೊಳ್ಳಬೇಕು. ಇಲ್ಲದಿದ್ದರೆ ನಮ್ಮ ಅವಸಾನ ಬಹುತೇಕ ನಿಶ್ಚಿತವಾಗುತ್ತದೆ.

ಅದರಲ್ಲೂ ಭಾರತೀಯ ಮಧ್ಯಮ ವರ್ಗದವರ ಜೀವನದಲ್ಲಿ ಇದು ಒಂದಲ್ಲ ಒಂದು ಸಮಯದಲ್ಲಿ ಎದುರಾಗತ್ತಲೇ ಇರುತ್ತದೆ. ಅವರ ಮನಸ್ಸಿನ ಬ್ಯಾಟರಿಯ ಏರಿಳಿತ ತುಂಬಾ ಇರುತ್ತದೆ.

ಮನಸ್ಸು ಕೂಡ ಸದಾ ದ್ವಂದ್ವ ಮತ್ತು ಚಂಚಲತೆಯಿಂದಲೇ ಕೂಡಿರುತ್ತದೆ. ವಿದ್ಯಾಭ್ಯಾಸದ ಸಮಯದಲ್ಲಿ ಒಂದು ಮನಸ್ಸು ಓದುವ, ಇನ್ನೊಂದು ಮನಸ್ಸು ಆಟವಾಡಲು ಪ್ರೇರೇಪಿಸುತ್ತದೆ. ಯೌವನದಲ್ಲಿ ಒಂದು ಪ್ರೀತಿಸುವ ಇನ್ನೊಂದು ದ್ವೇಷಿಸುವ ಒತ್ತಡ ಹೇರುತ್ತದೆ.

ಕೆಲವೊಮ್ಮೆ ನಮಗೆ ಅನ್ಯಾಯ ಅಥವಾ ವಂಚನೆ ಅಥವಾ ನೋವಾದಾಗ ಉದ್ವೇಗಕ್ಕೆ ಒಳಗಾಗುವ ನಾವು ಅದಕ್ಕೆ ಕಾರಣವಾದವರನ್ನು ಕೊಲ್ಲಲು ಒಂದು ಮನಸ್ಸು ಸೂಚಿಸುತ್ತದೆ.

ಅದೇ ಸಂದರ್ಭದಲ್ಲಿ ನಮ್ಮೊಳಗೇ ಅಡಗಿರುವ ಇನ್ನೊಂದು ಮನಸ್ಸು, ಛೆ, ಬೇಡ ಕೊಲೆ ಮಾಡಿದರೆ ಜೈಲಿಗೆ ಹೋಗಬೇಕಾಗುತ್ತದೆ. ಅದಕ್ಕೆ ಬದಲಾಗಿ ಇರಬಹುದಾದ ಇತರ ಪರ್ಯಾಯಗಳನ್ನು ಸೂಚಿಸುತ್ತದೆ. ಇಂತಹ ಪರಿಸ್ಥಿತಿಯಲ್ಲಿ ನಾವು ಕೈಗೊಳ್ಳುವ ನಿರ್ಧಾರ ಅಥವಾ ಯಾವ ಮನಸ್ಸಿನ ಮಾತನ್ನು ನಾವು ಒಪ್ಪಿಕೊಳ್ಳುತ್ತೇವೆ ಎಂಬುದು ಬಹುತೇಕ ನಮ್ಮ ಭವಿಷ್ಯವನ್ನು ಮತ್ತು ಜೀವನದ ವಿಧಾನವನ್ನು ನಿರ್ಧರಿಸುತ್ತದೆ.

ನಮ್ಮ ಮನಸ್ಸೇ ನಮಗೆ ಗುರು,
ನಮ್ಮ ಮನಸ್ಸೇ ನಮಗೆ ಮಿತ್ರ,
ನಮ್ಮ ಮನಸ್ಸೇ ನಮಗೆ ಶತ್ರು,
ನಮ್ಮ ಮನಸ್ಸೇ ನಮಗೆ ಮಾರ್ಗದರ್ಶಕ, ಅದರ ಆಯ್ಕೆಯ ಅವಕಾಶವೂ ನಮಗಿರುತ್ತದೆ. ಯಾವುದನ್ನು ನಾವು ಒಪ್ಪಿಕೊಳ್ಳುತ್ತೇವೆ ಮತ್ತು ಅಪ್ಪಿಕೊಳ್ಳುತ್ತೇವೆ ಎಂಬುದರ ಮೇಲೆ ನಮ್ಮ ಜೀವನಶೈಲಿ ನಿರ್ಧಾರವಾಗುತ್ತದೆ.

ಅರಿವೆಂಬ ಜ್ಞಾನದ ಮತ್ತು ಅಂತರಾತ್ಮದ ವಿದ್ಯುತ್ತಿನಿಂದ ನಮ್ಮ ಮನಸ್ಸೆಂಬ ಪುನರ್ಭರ್ತಿ ಮಾಡಬಹುದಾದ ಬ್ಯಾಟರಿಯನ್ನು ಸದಾ ಚಾರ್ಜ್ ಮಾಡಿಕೊಳ್ಳುತ್ತಾ ನೂರು ವರ್ಷಗಳ ವಾರಂಟಿ ಮತ್ತು ಗ್ಯಾರಂಟಿ ಮುಗಿಯುವವರೆಗೂ ಉತ್ತಮ ರೀತಿಯಲ್ಲಿ ಕಾಪಾಡೋಣ.

**- ವಿವೇಕಾನಂದ. ಎಚ್. ಕೆ.,** ಬೆಂಗಳೂರು

# ಸ್ಥಳೀಯವಾಗಿಯೇ ಗುಣಮಟ್ಟದ ವೈದ್ಯಕೀಯ ಸೇವೆ ಅಗತ್ಯ

## ಎ.ಚೋಳೇನಹಳ್ಳಿಯಲ್ಲಿ ಆಯುಷ್ಮಾನ್ ಆರೋಗ್ಯ ಮಂದಿರ ನಿರ್ಮಾಣ ಕಾಮಗಾರಿಗೆ ಸಿ.ಎನ್.ಬಾಲಕೃಷ್ಣ ಚಾಲನೆ

• ಪ್ರಜೋದಯ ವರದಿ

**ಚನ್ನರಾಯಪಟ್ಟಣ:** ಗ್ರಾಮೀಣ ಪ್ರದೇಶಗಳಲ್ಲಿ ಉತ್ತಮ ಆರೋಗ್ಯ ಸೇವೆ ಲಭ್ಯವಾದರೆ ಜನರು ನಗರ ಪ್ರದೇಶಗಳಿಗೆ ಅಲೆಯುವುದು ತಪ್ಪಲಿದೆ ಎಂದು ಸಿ.ಎನ್.ಬಾಲಕೃಷ್ಣ ಅವರು ಅಭಿಪ್ರಾಯಪಟ್ಟರು.

ತಾಲ್ಲೂಕಿನ ಎ.ಚೋಳೇನಹಳ್ಳಿ ಗ್ರಾಮದಲ್ಲಿ 65 ಲಕ್ಷ ರೂ. ವೆಚ್ಚದಲ್ಲಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಿಂದ ಮಂಜೂರಾಗಿರುವ ಆಯುಷ್ಮಾನ್ ಆರೋಗ್ಯ ಮಂದಿರ ನಿರ್ಮಾಣ ಕಾಮಗಾರಿಗೆ ಸೋಮವಾರ ಭೂಮಿಪೂಜೆ ನೆರವೇರಿಸಿ ಮಾತನಾಡಿ, ಆದ್ದರಿಂದ ಆಯುಷ್ ಆರೋಗ್ಯ ಮಂದಿರ ಸ್ಥಾಪನೆಗೆ ಒತ್ತು ನೀಡಲಾಗುತ್ತಿದೆ ಎಂದರು.




ಗ್ರಾಮಸ್ಥರಿಗೆ ಸ್ಥಳೀಯವಾಗಿಯೇ ಉತ್ತಮ ಗುಣಮಟ್ಟದ ವೈದ್ಯಕೀಯ ಸೇವೆ ಸಿಗಬೇಕು ಎಂಬ ಉದ್ದೇಶದಿಂದ ಆರೋಗ್ಯ ಮಂದಿರ ನಿರ್ಮಿಸಲಾಗುತ್ತಿದೆ. ದಡದಹಳ್ಳಿ, ಅಡಗೂರು, ಸಾಸಲಪುರ, ಮಳ್ಳೆನಹಳ್ಳಿಯ ಜನರು ಸಣ್ಣಪುಟ್ಟ ಅನಾರೋಗ್ಯ ಸಮಸ್ಯೆಗಳಿಗೂ ಪಟ್ಟಣಗಳಿಗೆ ಹೋಗುವುದನ್ನು ತಪ್ಪಿಸಲು ಇಲ್ಲಿ ಆರೋಗ್ಯ ಕೇಂದ್ರ ನಿರ್ಮಾಣಕ್ಕೆ ಆಯ್ಕೆ ಮಾಡಿದ್ದು, ಸುಸಜ್ಜಿತ ಕಟ್ಟಡ ಶೀಘ್ರ ನಿರ್ಮಾಣವಾಗಿ ಶೀಘ್ರ ಕಾಮಗಾರಿ ಪೂರ್ಣಗೊಳ್ಳಲಿದೆ ಎಂದು ತಿಳಿಸಿದರು.

ಗ್ರಾಮದ ಮಧ್ಯಭಾಗದಲ್ಲಿ ನಾಲ್ಕು ಪಥದ ರಸ್ತೆ ಹಾದು ಹೋಗುತ್ತಿರುವುದರಿಂದ ಆರೋಗ್ಯ ಮಂದಿರವನ್ನು ಗ್ರಾಮದ ಒಳಭಾಗದಲ್ಲಿ ನಿರ್ಮಿಸಲಾಗುತ್ತಿದ್ದು, ಕಾಮಗಾರಿ ನಡೆಯುವ ವೇಳೆ ಸಲಹೆ ಸಹಕಾರಗಳನ್ನು ನೀಡಿ ನಿರ್ಮಾಣಕ್ಕೆ ಸಹಕಾರ ನೀಡಬೇಕು ಎಂದು ಅವರು ಮನವಿ ಮಾಡಿದರು.

ಶ್ರವಣಬೆಳಗೊಳ ವಿಧಾನಸಭಾ ಕ್ಷೇತ್ರಕ್ಕೆ 37 ಆಯುಷ ಕೇಂದ್ರಗಳು ಮಂಜೂರಾಗಿದ್ದು ಆರೋಗ್ಯ ಕ್ಷೇತ್ರದ ಸೌಲಭ್ಯಗಳ ಉನ್ನತೀಕರಣಕ್ಕೆ ಒತ್ತು ನೀಡಿದ್ದು, ಗ್ರಾಮಸ್ಥರಿಗೆ ಉತ್ತಮ ಚಿಕಿತ್ಸೆ ದೊರೆಯಬೇಕು ಎನ್ನುವುದು ನಮ್ಮ ಕಾಳಜಿ ಎಂದರು.

ಗ್ರಾಮದಲ್ಲಿ ನಿರ್ಮಾಣವಾಗುತ್ತಿರುವ ಸಮುದಾಯ ಭವನದ 2ನೇ ಹಂತದ ಕಾಮಗಾರಿ ಪ್ರಗತಿಯಲ್ಲಿದ್ದು, 10 ಲಕ್ಷ ರೂ. ಅನುದಾನ ಒದಗಿಸಿ ಪೂರ್ಣಗೊಳಿಸಲಾಗುವುದು ಸಮುದಾಯ ಭವನ ಪೂರ್ಣಗೊಂಡರೆ ಗ್ರಾಮಸ್ಥರ ಕಾರ್ಯ ಚಟುವಟಿಕೆಗಳಿಗೆ ಅನುಕೂಲವಾಗುತ್ತದೆ. ಶೀಘ್ರದಲ್ಲಿಯೇ ಕಾರ್ಯರೂಪ ಗೊಳಿಸಲಾಗುವುದು ಎಂದು ಅವರು ಭರವಸೆ ನೀಡಿದರು.

ತಾಲ್ಲೂಕು ಆರೋಗ್ಯಾಧಿಕಾರಿ ಪಿ. ತೇಜಸ್ವಿನಿ, ಆರೋಗ್ಯ ಇಲಾಖೆಯ ಅಭಿಯಂತರ ಪುಟ್ಟಸ್ವಾಮಿ, ಸಿಬ್ಬಂದಿ ವರ್ಗ ಇತರರು ಭಾಗವಹಿಸಿದ್ದರು.

# ಪಾರಸನಹಳ್ಳಿಯಲ್ಲಿ ಚಿರತೆ: ಸ್ಥಳೀಯರಲ್ಲಿ ಆತಂಕ

• ಪ್ರಜೋದಯ ವರದಿ

**ಅರಕಲಗೂಡು:** ತಾಲ್ಲೂಕಿನ ದೊಡ್ಡಮಗ್ಗೆ ಹೋಬಳಿ ಪಾರಸನಹಳ್ಳಿ ಗ್ರಾಮದಲ್ಲಿ ಚಿರತೆ ಕಾಣಿಸಿಕೊಂಡಿದ್ದು ಸ್ಥಳೀಯರಲ್ಲಿ ಆತಂಕ ಹುಟ್ಟಿಸಿದೆ.

ಗ್ರಾಮದ ರಾಮಣ್ಣ ಅವರ ಕೊಟ್ಟಿಗೆ ಬಳಿ ಬಂದಿರುವ ಚಿರತೆ ಕೊಟ್ಟಿಗೆ ಬಾಗಿಲು ಹಾಕಿದ್ದರಿಂದ ವಾಪಾಸು ಹೋಗಿದೆ. ಕೊಟ್ಟಿಗೆ ಬಳಿ ಚಿರತೆ ಸುಳಿದಾಡಿರುವ ಹೆಜ್ಜೆ ಗುರುತುಗಳು ಕಂಡು ಬಂದಿವೆ ಎನ್ನಲಾಗಿದೆ.

ಕಳೆದ ಹಲವಾರು ದಿನಗಳಿಂದ ಪಾರಸನಹಳ್ಳಿ ಸುತ್ತಮುತ್ತ ಆಹಾರಕ್ಕಾಗಿ ಅಲೆದಾಡುತ್ತಿರುವ ಚಿರತೆ ಜನರಲ್ಲಿ ಜೀವಭಯ ಮೂಡಿಸಿದೆ. ಅಕ್ಕ ಪಕ್ಕದಲ್ಲಿ ಹಲವಾರು ಹಳ್ಳಿಗಳಿದ್ದು ರೈತಾಪಿ ವರ್ಗದ ಜನರು ಜಮೀನು ಕೆಲಸಗಳಿಗೆ ತೆರಳು ಭಯಪಡುವಂತಾಗಿದೆ. ಯಾವ ಹೊತ್ತಿನಲ್ಲಿ ಮೇಲೆರಗುವುದೋ ಎನ್ನುವ ಭಯ ಜನರಲ್ಲಿ ಮನೆ ಮಾಡಿದೆ.

ಅರಕಲಗೂಡು ಪಟ್ಟಣಕ್ಕೆ ಕೇವಲ ಐದು ಕಿ.ಮೀ. ದೂರದಲ್ಲಿರುವ ಪಾರಸನಹಳ್ಳಿ ಗ್ರಾಮದಿಂದ ಚಿರತೆ




ಸಂತೆಮರೂರು, ಜೋಡಿಗುಬ್ಬಿ ಅರಣ್ಣ ಪ್ರದೇಶದತ್ತ ಅಲೆದಾಡುತ್ತಿರಬಹುದು. ಇಲ್ಲವೇ ಪೊದೆಯಲ್ಲಿ ಅವಿತಿರಬಹುದು. ಭಾನುವಾರ ಬೆಳಿಗ್ಗೆ ಶಿಕ್ಷಕ ಚನ್ನಯ್ಯ ಅವರ ಅರಕಲಗೂಡಿಗೆ ಬೈಕ್‌ನಲ್ಲಿ ಬರುವಾಗ ಚಿರತೆ ಅಡ್ಡ ಸಿಕ್ಕಿ ಪರಾರಿಯಾಗಿದೆ.

ಚಿರತೆ ಹಲವಾರು ದಿನಗಳಿಂದ ಅಡ್ಡಾಡುತ್ತಿದ್ದರೂ ಅರಣ್ಯ ಇಲಾಖೆ ಸೆರೆ ಹಿಡಿಯದೆ ನಿರ್ಲಕ್ಷಿಸಿದೆ ಎನ್ನುತ್ತಾರೆ ಸ್ಥಳೀಯ ಗ್ರಾಮಸ್ಥರು.

ಪಾರಸನಹಳ್ಳಿ ಬಳಿ ಕೆಲ ದಿನಗಳ ಹಿಂದೆಯೇ ಚಿರತೆ ಸೆರೆಗೆ ಬೋನು ಇರಿಸಲಾಗಿದೆ. ಚಿರತೆ ಮಾತ್ರ ಪತ್ತೆಯಾಗಿಲ್ಲ, ಚಿರತೆ ಸೆರೆಗೆ ಸತತ ಪ್ರಯತ್ನ ನಡೆಸಲಾಗಿದೆ ಎಂದು ಅರಣ್ಯ ಇಲಾಖೆ ಅಧಿಕಾರಿ ಪ್ರವೀಣ್ ಅವರು ತಿಳಿಸಿದರು.

# ಛಾಯಾಗ್ರಾಹಕರ ಸಂಘದ ಆಸರೆ ಯೋಜನೆಗೆ ಚಾಲನೆ




• ಪ್ರಜೋದಯ ವರದಿ

**ಹಾಸನ:** ರಾಜ್ಯ ಮತ್ತು ಜಿಲ್ಲಾ ಛಾಯಗ್ರಾಹಕರ ಸಂಘದ ಸಹಯೋಗದಲ್ಲಿ ಆರಂಭಿಸಿರುವ ಆಸರೆ ಯೋಜನೆಗೆ ಸೋಮವಾರ ನಗರದ ಕನ್ನಡ ಸಾಹಿತ್ಯ ಪರಿಷತ್ ಭವನದಲ್ಲಿ ಚಾಲನೆ ನೀಡಲಾಯಿತು.

ಈ ವೇಳೆ ಜಿಲ್ಲಾ ಛಾಯಾಗ್ರಾಹಕರ ಸಂಘದ ಅಧ್ಯಕ್ಷ ಸ್ವಾಮಿ ಅವರು ಮಾತನಾಡಿ, ಯಾರೇ ಛಾಯಗ್ರಾಹಕರು ಮೃತಪಟ್ಟರೆ, ಅವರ ಕುಟುಂಬಕ್ಕೆ 1 ಲಕ್ಷ ರೂಪಾಯಿ ಸಹಾಯಧನ ನೀಡುವ ಯೋಜನೆ ಇದಾಗಿದೆ. ಈ ಯೋಜನೆಯ ಸೌಲಭ್ಯ ಪಡೆಯಲು ಜಿಲ್ಲೆಯ ಛಾಯಗ್ರಾಹಕರು ಯೋಜನೆಗೆ ತಮ್ಮ ಹೆಸರನ್ನು ನೋಂದಣಿ ಮಾಡಿಕೊಳ್ಳುವಂತೆ ಕೋರಿದರು.

ಜಿಲ್ಲಾ ಛಾಯಗ್ರಾಹಕರ ಸಂಘದ ಕಾರ್ಯದರ್ಶಿ ಧರ್ಮಶೆಟ್ಟಿ, ಕೊನೇರಿ ಸೂರಿ, ನಾಗರಾಜು, ನಿಲೇಶ್, ಹಾಸನ ತಾಲ್ಲೂಕು ಕಾರ್ಯಕಾರಿ ಮಂಡಳಿ ಸದಸ್ಯರು ಸೇರಿದಂತೆ ಇನ್ನಿತರರು ಹಾಜರಿದ್ದರು.

## ಹಿಂದೂ ವಿರೋಧಿಗಳ ರಕ್ಷಣೆಗೆ ನಿಂತ ಕಾಂಗ್ರೆಸ್ ಸರ್ಕಾರ

**ಕಲಬುರಗಿ:** ಆಳಂದ ಪಟ್ಟಣದ ರಾಘವ ಚೈತನ್ಯ ಶ್ರೀಶಿವಲಿಂಗ ದೇವಸ್ಥಾನದಲ್ಲಿ ಶಿವಲಿಂಗ ಪೂಜೆಗೆ ಅಡ್ಡಿಪಡಿಸಿದ ಹಿಂದು ವಿರೋಧಿಗಳ ವಿರುದ್ಧದ ಪ್ರಕರಣ ವಾಪಸ ಪಡೆಯುವ ಮೂಲಕ ಹಿಂದು ವಿರೋಧಿಗಳಿಗೆ ರಕ್ಷಣೆ ನೀಡುವ ರಾಜ್ಯ ಕಾಂಗ್ರೆಸ್ ಸರ್ಕಾರದ ದೋರಣೆಯನ್ನು ಬಿ.ಜೆ.ಪಿ. ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಅವರು ಬಲವಾಗಿ ಖಂಡಿಸಿದರು.

ನಗರದ ಮಿನಿ ವಿಧಾನಸೌಧದ ಕಚೇರಿ ಎದುರು ಭಾರತೀಯ ಜನತಾ ಪಾರ್ಟಿ ಕಲಬುರಗಿ ಜಿಲ್ಲಾ ಘಟಕ ನೇತೃತ್ವದಲ್ಲಿ ಹಮ್ಮಿಕೊಂಡಿದ್ದ ಬೃತಹ ಪತ್ರಿಭಟನೆ ಉದ್ದೇಶಿಸಿ ಮಾತನಾಡಿದ ಅವರು, ಹಿಂದು ವಿರೋಧಿ ಪ್ರಕರಣಗಳನ್ನು ಸರ್ಕಾರ ವಾಪಸ ಪಡೆಯದೇ ಅವರ ವಿರುದ್ಧ ತ್ವರಿತ ಕಾನೂನು ಕ್ರಮ ಕೈಗೊಳ್ಳಲು ಮುಂದಾಗಬೇಕು ಎಂದು ವಿಜಯೇಂದ್ರ ಒತ್ತಾಯಿಸಿದರು.

# ರಸ್ತೆ, ಚರಂಡಿ ಅಭಿವೃದ್ಧಿ ಕಾಮಗಾರಿಗೆ ಗುದ್ದಲಿಪೂಜೆ

• ಪ್ರಜೋದಯ ವರದಿ

**ಬೇಲೂರು:** ಸಾರ್ವಜನಿಕರ ಅನುಕೂಲಕ್ಕಾಗಿ ಗ್ರಾಮೀಣ ಪ್ರದೇಶಗಳ ಹಾಗೂ ಮಲೆನಾಡು ಬಾಗದ ಎಲ್ಲ ಸಂಪರ್ಕ ರಸ್ತೆಗಳಿಗೆ ಕಾಯಕಲ್ಪ ನೀಡುವುದಕ್ಕೆ ಮೊದಲ ಆದ್ಯತೆ ನೀಡಿ ಕೆಲಸ ಮಾಡಿಸಲಾಗುವುದು ಎಂದು ಶಾಸಕ ಎಚ್.ಕೆ.ಸುರೇಶ್ ಹೇಳಿದರು.

ತಾಲ್ಲೂಕಿನ ತೊಳಲು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಸಿದ್ದರಹಳ್ಳಿ ಗ್ರಾಮದಲ್ಲಿ ಲೋಕೋಪಯೋಗಿ ಇಲಾಖೆಗೆ ಸೇರಿದ 1.5 ಕೋಟಿ ರೂ. ಅನುದಾನದಲ್ಲಿ ತೊಳಲು- ಅರೇಹಳ್ಳಿ ಮುಖ್ಯರಸ್ತೆ ಹಾಗೂ ಆಯ್ದ ಭಾಗಗಳಲ್ಲಿ ರಸ್ತೆ ಮತ್ತು ಚರಂಡಿ ಅಭಿವೃದ್ಧಿ ಕಾಮಗಾರಿಗೆ ಸೋಮವಾರ ಭೂಮಿ ಪೂಜೆ ನೆರವೇರಿಸಿ ಮಾತನಾಡಿದ ಅವರು, ತೊಳಲು ಗ್ರಾಮದ ಸಮೀಪದಿಂದ ಹೊಸಪೇಟೆ, ಸಿದ್ದರಹಳ್ಳಿ, ಅನುಘಟ್ಟ ಮೂಲಕ ಅರೇಹಳ್ಳಿಗೆ

## ಸಂಪರ್ಕ ರಸ್ತೆಗಳಿಗೆ ಕಾಯಕಲ್ಪ: ಶಾಸಕ ಹೆಚ್.ಕೆ.ಸುರೇಶ್



ಸಂಪರ್ಕ ಕಲ್ಪಿಸುವ ರಸ್ತೆ ಇದಾಗಿದ್ದು, ಬಹಳ ದಿನಗಳಿಂದ ಈ ಬಾಗದ ಸಾರ್ವಜನಿಕರ ಬೇಡಿಕೆಯಂತೆ ಲೋಕೋಪಯೋಗಿ ಇಲಾಖೆ ಅನುಧಾನದಲ್ಲಿ ರಸ್ತೆ-ಚರಂಡಿ ಅಭಿವೃದ್ಧಿ ಕಾಮಗಾರಿ ಮಾಡಿಸಲು ಮುಂದಾಗಿದ್ದೇನೆ ಎಂದು ಅವರು ತಿಳಿಸಿದರು.

ಇದು ಮಲೆನಾಡು ಬಾಗವಾದ್ದರಿಂದ ಮಳೆಗಾಲದಲ್ಲಿ ರಸ್ತೆ ಸರಿ ಇಲ್ಲವೆಂದರೆ ಓಡಾಡಲು ಹೆಚ್ಚು ತೊಂದರೆಯಾಗುತ್ತದೆ. ಜತೆಗೆ ಈ ಬಾಗದಲ್ಲಿ ಕಾಡಾನೆಗಳ ಸಮಸ್ಯೆಯೂ ಇರುವುದರಿಂದ ರಸ್ತೆ ಅಗತ್ಯವಾಗಿ ಬೇಕಿತ್ತು. ಈ ಹಿನ್ನೆಲೆಯಲ್ಲಿ ಕಾಮಗಾರಿಗೆ ಚಾಲನೆ ನೀಡಿದ್ದೇವೆ. ಅಲ್ಲದೆ ಪ್ರಥಮವಾಗಿ ಕ್ಷೇತ್ರದಲ್ಲಿರುವ ಗ್ರಾಮೀಣ ಪ್ರದೇಶದ ಜನರಿಗೆ ಉತ್ತಮ ಮೂಲ ಸೌಕರ್ಯ ಒದಗಿಸುವುದು ಹಾಗೂ ಒಂದು ಗ್ರಾಮದಿಂದ ಮತ್ತೊಂದು ಗ್ರಾಮಕ್ಕೆ ಸಂಪರ್ಕ ಕಲ್ಪಿಸುವ ರಸ್ತೆ ಅಭಿವೃದ್ಧಿ ಪಡಿಸಿದರೆ ಸಾರ್ವಜನಿಕರು ಮತ್ತು ರೈತರ ಸಂಚಾರಕ್ಕೆ ಸುಲಭವಾಗುತ್ತದೆ ಎಂದು ಹೇಳಿದರು.

ರೈತರು ತಾವು ಬೆಳೆದ ಬೆಳೆಗಳನ್ನು ಮಾರುಕಟ್ಟೆಗೆ ತೆಗೆದುಕೊಂಡು ಹೋಗಲು ಸಹಕಾರಿಯಾಗುತ್ತದೆ. ಇದರೊಂದಿಗೆ ಮುಂದಿನ ದಿನಗಳಲ್ಲಿ ತಾಲೂಕಿನ ಪ್ರತಿಯೊಂದು ಗ್ರಾಮಕ್ಕೂ ಶಾಶ್ವತ ಗುಣಮಟ್ಟದ ರಸ್ತೆ, ಶುದ್ಧ ಕುಡಿಯುವ ನೀರು ಮತ್ತು ವಿದ್ಯುತ್ ಸೌಲಭ್ಯ ಒದಗಿಸುವುದಕ್ಕೆ ಕ್ರಮ ಕೈಗೊಳ್ಳಲಾಗುವುದು ಎಂದರು.

ಬಿಜೆಪಿ ಯುವ ಮೋರ್ಚಾ ರಾಜ್ಯ ಪ್ರಧಾನ ಕಾರ್ಯದರ್ಶಿ ವಿಕ್ರಂ ಕೌರಿ, ತಾಲೂಕು ಯುವ ಮೋರ್ಚಾ ಅಧ್ಯಕ್ಷ ಸುಮನ್, ಗ್ರಾಮಸ್ಥರಾದ ವಿಜಯ್, ಉಮೇಶ್, ವಸಂತಕುಮಾರ್, ನವೀನ್, ಮಂಜುನಾಥ್, ಸುರೇಶ್, ಮಧು, ಲೋಕೋಪಯೋಗಿ ಇಲಾಖೆ ಎಇ ಮಂಜುನಾಥ್ ಇನ್ನಿತರರಿದ್ದರು.

# ಸಾರ್ವಜನಿಕರ ಆರೋಗ್ಯ ರಕ್ಷಣೆಗೆ ವೀರೇಂದ್ರ ಹೆಗ್ಗಡೆ ವಿಶೇಷ ಕಾಳಜಿ

• ಪ್ರಜೋದಯ ವರದಿ

## ಗೌಡಗೆರೆಯಲ್ಲಿ ವಿಶ್ವ ತಂಬಾಕು ವಿರೋಧಿ ದಿನ ಕಾರ್ಯಕ್ರಮ

**ಚನ್ನರಾಯಪಟ್ಟಣ:** ಸಾರ್ವಜನಿಕರ ಆರೋಗ್ಯ ರಕ್ಷಣೆಗೆ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಸ್ಥೆ ವಿಶೇಷ ಕಾಳಜಿ ವಹಿಸುತ್ತಿದೆ ಎಂದು ಪತ್ರಕರ್ತ ಎ.ಎಂ.ಜಯರಾಮ್ ಹೇಳಿದರು.

ತಾಲ್ಲೂಕಿನ ಗೌಡಗೆರೆ ಗ್ರಾಮದ ನಳಂದ ವಿದ್ಯಾ ಶಾಲೆಯಲ್ಲಿ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನಾ ಘಟಕ ಆಯೋಜಿಸಿದ್ದ ವಿಶ್ವ ತಂಬಾಕು ವಿರೋಧಿ ದಿನ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಧೂಮಪಾನ ಸೇರಿದಂತೆ ಹಲವು ದುಶ್ಚಟಗಳಿಗೆ ಯುವಕರು ಬಲಿಯಾಗುತ್ತಿದ್ದಾರೆ ಎಂದು ಕಳವಳ ವ್ಯಕ್ತಪಡಿಸಿದರು.

ಆರೋಗ್ಯ, ನೆಮ್ಮದಿ ಹಾಗೂ ಆರ್ಥಿಕ ಸಂಕಷ್ಟಕ್ಕೂ ಒಳಗಾಗಿ ಅನಾರೋಗ್ಯ ಪೀಡಿತರಾಗಿ ಭೀಕರ ಕಾಯಿಲೆಗಳನ್ನು ಎದುರಿಸುವ ಸ್ಥಿತಿ ಕುಟುಂಬಕ್ಕೆ ಬರುತ್ತಿದೆ. ತಾಲ್ಲೂಕಿನಲ್ಲಿ ಪ್ರತಿ ವಾರಕ್ಕೆ 2 ಕೋಟಿಗೂ ಹೆಚ್ಚು ಬೀಡಿ-ಸಿಗರೇಟು ಮಾರಾಟವಾಗುತ್ತಿರುವುದು ಆತಂಕಕಾರಿ, ಇದಕ್ಕೆ ಕಡಿವಾಣ ಹಾಕದಿದ್ದರೆ ಕ್ಯಾನ್ಸರ್, ಶ್ವಾಸಕೋಶ ಕಾಯಿಲೆ ಸೇರಿದಂತೆ ಮನುಷ್ಯ ಕಾಯಿಲೆಗಳ ಗೂಡಾಗುತ್ತಾನೆ ಎಂದು ತಿಳಿಸಿದರು.

ಯುವ ಜನಾಂಗ ದಿಕ್ಕು ತಪ್ಪುತ್ತದೆ, ಕುಟುಂಬದ ನೆಮ್ಮದಿ ಹಾಳಾಗುತ್ತದೆ, ಆರೋಗ್ಯವಂತ ಸಮಾಜ ನಿರ್ಮಾಣ ಮಾಡುವಲ್ಲಿ ಮಹಿಳೆಯರು ಹಾಗೂ ಕುಟುಂಬದ ಮುಖ್ಯಸ್ಥರು ಯುವಕರಿಗೆ ಸೂಕ್ತ ಮಾರ್ಗದರ್ಶನ ನೀಡಬೇಕಾಗಿದೆ ಎಂದರು.

ಯೋಜನಾಧಿಕಾರಿ ಪುರಂದರ



ಪ್ರಾಸ್ತಾವಿಕವಾಗಿ ಮಾತನಾಡಿ, ಆರೋಗ್ಯವಂತ ಸ್ವಾಸ್ಥ ಸಮಾಜ ನಿರ್ಮಾಣದ ಗುರಿ ಧರ್ಮಸ್ಥಳದ ಡಾ. ವೀರೇಂದ್ರ ಹೆಗ್ಗಡೆಯವರದ್ದಾಗಿದೆ. ಜನಜಾಗೃತಿ ವೇದಿಕೆಯ ಮೂಲಕ, ಆರೋಗ್ಯದ ಬಗ್ಗೆ ಅರಿವು, ಮದ್ಯವರ್ಜನ ಶಿಬಿರ, ಆರೋಗ್ಯ ಸಂಕಲ್ಪ ಯೋಜನೆ ಅಡಿ ಹಲವಾರು ಯೋಜನೆಗಳನ್ನು ಗ್ರಾಮೀಣ ಜನರಿಗೆ ತಿಳಿಸುವ ಕಾರ್ಯ ಮಾಡುತ್ತಿದೆ, ದುಶ್ಚಟಕ್ಕೆ ಬಲಿಯಾಗಿ ಆರೋಗ್ಯ ನೆಮ್ಮದಿ ಹಾಳು ಮಾಡಿಕೊಳ್ಳಬಾರದು ಸಹವಾಸ ದೋಷದಿಂದ ದುಷ್ಟಕ್ಕೆ ಬಲಿಯಾಗಬೇಡಿ ಎಂದು ಅವರು ಸಲಹೆ ನೀಡಿದರು.

ಜನಜಾಗೃತಿ ವೇದಿಕೆಯ ಸದಸ್ಯ, ಹಾಗೂ ಪ್ರಗತಿಪರ ಕೃಷಿಕ ಬೆಕ್ಕ ರಾಘವೇಂದ್ರ ಮಾತನಾಡಿ, ಸಾವಯವ ಕೃಷಿ, ಅಗತ್ಯವಿದೆ. ಭೂಮಿಗೆ ರಾಸಾಯನಿಕ ಗೊಬ್ಬರ ಬಳಕೆ ಮಾಡುವುದರಿಂದ ಆರೋಗ್ಯ ಹಾಳಾಗುತ್ತಿದೆ, ಅತಿಯಾದ ರಾಸಾಯನಿಕ ಗೊಬ್ಬರಗಳ ಬಳಕೆ ಆರೋಗ್ಯದ ಮೇಲೆ ಪರಿಣಾಮ ಬೀರುತ್ತಿದೆ ಎಂಬ ಆತಂಕ ವ್ಯಕ್ತಪಡಿಸಿದರು.

ಗೌಡಗೆರೆ ಗ್ರಾಮ ಪಂಚಾಯಿತಿ ಕಾರ್ಯದರ್ಶಿ ಯೋಗೇಶ್, ನಳಂದ ವಿದ್ಯಾ ಶಾಲೆಯ ಮುಖ್ಯಸ್ಥರಾದ ವಸಂತ್, ಮುಖ್ಯೋಪಾಧ್ಯಾಯ ಜಯರಾಮ್, ಜ್ಞಾನ ವಿಕಾಸ ಸಮನ್ವಯಾಧಿಕಾರಿ ಸುರೇಶ್‌ಗೌಡ, ಸರಸ್ವತಿ, ಒಕ್ಕೂಟದ ಅಧ್ಯಕ್ಷರಾದ ರಾಧಮ್ಮ, ಸೇವಾ ಪ್ರತಿನಿಧಿ ಅನುಷಾ, ಲತಾ, ಪ್ರಮುಖರಾದ ಸಂತೋಷ್ ಹಾಗೂ ಇನ್ನಿತರರಿದ್ದರು.

# ಗುಲಾಬಿ ಹೂ ನೀಡಿ ಮಕ್ಕಳಿಗೆ ಸ್ವಾಗತ...



**ಹಾರನಹಳ್ಳಿ:** ಇಲ್ಲಿಗೆ ಸಮೀಪದ ಬೋರನಕೊಪ್ಪಲು ಗ್ರಾಮದಲ್ಲಿ ಸರ್ಕಾರಿ ಶಾಲಾ ಮಕ್ಕಳಿಗೆ ಸಿಹಿ ಹಂಚಿ, ಗುಲಾಬಿ ಹೂ ಕೊಟ್ಟು ಶಾಲೆಯ ಪ್ರಾರಂಭ ದಿನದಂದು ಸ್ವಾಗತ ಕೋರಲಾಯಿತು. ಈ ಸಂದರ್ಭದಲ್ಲಿ ಮುಖ್ಯ ಶಿಕ್ಷಕ ವೈ.ಕೆ.ದೇವರಾಜ್, ತಾಲ್ಲೂಕು ಶಿಕ್ಷಣ ಸುಧಾರಣಾ ಸಮಿತಿ ಸದಸ್ಯರು, ವಿದ್ಯಾರ್ಥಿಗಳು, ಗ್ರಾಮಸ್ಥರುಗಳು ಹಾಜರಿದ್ದರು.

# ಜಗನ್ನಾಥ್‌ಗೆ ವಯೋನಿವೃತ್ತಿ ಬೀಳ್ಕೋಡುಗೆ

• ಪ್ರಜೋದಯ ವರದಿ

**ಹಾರನಹಳ್ಳಿ:** ಇಲ್ಲಿನ ಸರ್ಕಾರಿ ಪದವಿ ಪೂರ್ವ ಕಾಲೇಜಿನಲ್ಲಿ 3 ವರ್ಷ ಪ್ರಾಂಶುಪಾಲರಾಗಿ ಹಾಗೂ 33 ವರ್ಷ ವಿವಿಧ ಜಿಲ್ಲೆಯಲ್ಲಿ ಭೌತಶಾಸ್ತ್ರ ಉಪನ್ಯಾಸಕರಾಗಿ ಸೇವೆ ಸಲ್ಲಿಸಿ ವಯೋನಿವೃತ್ತಿ ಹೊಂದಿದ ಜಗನ್ನಾಥ್ ಅವರಿಗೆ ಬೀಳ್ಕೊಡುಗೆ ನೀಡಲಾಯಿತು.

ಕಾಲೇಜ್ ಅನ್ನು ಉತ್ತಮ ವಾತಾವರಣದಲ್ಲಿ ಇಡುವುದರ ಜೊತೆಗೆ ಗ್ರಾಮೀಣ ಭಾಗದಲ್ಲಿ ಸೇವೆ ಮಾಡಿದ ಜಿ.ಪಿ.ಜಗನ್ನಾಥ್ ಪ್ರಾಂಶುಪಾಲರಾಗಿ ಕಾಲೇಜಿಗೆ ಉತ್ತಮ ಹೆಸರು ಬರಲು ಸಹಕರಿಸಿದ್ದಾರೆ. ಅವರ ಕರ್ತವ್ಯ ಸಮರ್ಪಕವಾಗಿ ನಿರ್ವಹಿಸಿದ್ದಾರೆಂದು ಪರ್ತಕರ್ತ ಹಾರನಹಳ್ಳಿ ನಾಗೇಂದ್ರ ಅಭಿಪ್ರಾಯಪಟ್ಟರಲ್ಲದೆ, ಕಾಲೇಜಿನಲ್ಲಿ ಅನೇಕ ಮೂಲಭೂತ ಸಮಸ್ಯೆ ಇದ್ದರೂ ಮಕ್ಕಳಿಗೆ ತೊಂದರೆ ಯಾಗ



ದಂತೆ ಮಕ್ಕಳ ಉತ್ತಮ್ಮ ಶಿಕ್ಷಣಕ್ಕೆ ಒತ್ತು ನೀಡಿದ್ದಾರೆಂದರು.

ಉಪನ್ಯಾಸಕಿ ದ್ರಾಕ್ಷಾಯಣಿ ಮಾತನಾಡಿ, ನಮ್ಮ ಕಾಲೇಜಿಗೆ ಪ್ರಾಂಶುಪಾಲರಾಗಿ ಜಗನ್ನಾಥ್ ಅವರು ಶಿಸ್ತು, ಸೌಮ್ಯ ಸ್ವಭಾವ, ವಿದ್ಯಾರ್ಥಿಗಳ ಶೈಕ್ಷಣಿಕ ಪ್ರಗತಿಗೆ ಮತ್ತು ಕಾಲೇಜಿನ ಅಭಿವೃದ್ದಿಗೆ ಅವರ ಹಾಕಿ ಕೊಟ್ಟ ಬುನಾದಿ ಎಂದಿಗೂ ಸ್ಮರಣೀಯ ಎಂದರು.

ನಿವೃತ್ತ ಪ್ರಾಂಶುಪಾಲ ಗೋವಿಂದ ರಾಜ್ ಮಾತನಾಡಿ, ಜಗನ್ನಾಥ್ ಈ ಕಾಲೇಜಿನ ಉನ್ನತಿಗೆ ಸಹಕರಿಸಿದ್ದಾರೆಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಜಗನಾಥ್ ತಾಯಿ ನಾಚಲಮ್ಮ, ಕುಟುಂಬದವರು, ಹಾರನಹಳ್ಳಿ ಪದವಿ ಪೂರ್ವ ಕಾಲೇಜಿನ ಪ್ರಭಾವ ಪ್ರಾಂಶುಪಾಲರಾದ ಹೇಮಲತಾ, ನಿವೃತ್ತಿ ಪ್ರಾಚಾರ್ಯ ಸದಾಶಿವು, ರಾಮಾನುಜಮ್, ರಾಜ್ಯ ಸರ್ಕಾರಿ ನೌಕರರ ಸಂಘದ ಅಧ್ಯಕ್ಷರು, ವಿವಿಧ ಕಾಲೇಜಿನ ಪ್ರಾಚಾರ್ಯರು, ಉಪನ್ಯಾಸಕರು ಭಾಗವಹಿಸಿದ್ದರು.

# ಮೆಮೊ ಪ್ರಯಾಣಿಕರ ರೈಲು ನಿಲುಗಡೆಗೆ ಮನವಿ

• ಪ್ರಜೋದಯ ವರದಿ

**ಆಲೂರು:** ಬೆಂಗಳೂರಿನಿಂದ ಪ್ರತಿದಿನ ಹೊರಡುವ ಮೆಮೊ ಪ್ಯಾಸೆಂಜರ್ ರೈಲು ಸಂಖ್ಯೆ 06585ನ್ನು ಸಕಲೇಶಪುರದವರೆಗೆ ವಿಸ್ತರಿಸಿ, ಆಲೂರು ರೈಲು ನಿಲ್ದಾಣದಲ್ಲಿ ನಿಲ್ಲುವಂತೆ ಸಹಕರಿಸಿ ಪ್ರಯಾಣಿಕರಿಗೆ ಅನುಕೂಲ ಕಲ್ಪಿಸಬೇಕು ಎಂದು ಎರಡು ಸಾವಿರ ಸಹಿ ಸಂಗ್ರಹ ಮಾಡಿದ್ದ ಮನವಿ ಪತ್ರವನ್ನು ಆಲೂರು ರಾಧಮ್ಮ ಜನಸ್ಪಂದನ ಸಂಸ್ಥೆ ಅಧ್ಯಕ್ಷ ಹೇಮಂತಕುಮಾರ್ ಅವರು ಕೇಂದ್ರ ರೈಲ್ವೆ ರಾಜ್ಯ ಸಚಿವ ವಿ. ಸೋಮಣ್ಣ ಅವರಿಗೆ ಚನ್ನರಾಯಪಟ್ಟಣದಲ್ಲಿ ಮನವಿ ಸಲ್ಲಿಸಿದರು.

ಕೇಂದ್ರ ರೈಲ್ವೆ ಸಚಿವರು ಭಾನುವಾರ ಚನ್ನರಾಯಪಟ್ಟಣ ರೈಲ್ವೆ ನಿಲ್ದಾಣದಲ್ಲಿ, ಸೋಲಾಪುರ ಎಕ್ಸ್‌ಪ್ರೆಸ್ ರೈಲು ನಿಲುಗಡೆಗೆ ಹಸಿರು




ನಿಶಾನೆ ತೋರಿಸಿದ ನಂತರ ನಡೆದ ಸಭೆಯಲ್ಲಿ ಮನವಿ ಪತ್ರ ಸಲ್ಲಿಸಲಾಯಿತು.

ಪ್ರತಿದಿನ ಬೆಂಗಳೂರಿನಿಂದ ಬೆಳಗ್ಗೆ 10ಕ್ಕೆ ಹೊರಟು, ಮದ್ಯಾಹ್ನ 2 ಗಂಟೆಗೆ ಹಾಸನಕ್ಕೆ ಬಂದು ಸೇರುವ ಮೆಮೊ ರೈಲು ಸದ್ಯ ಹಾಸನದವರೆಗೆ ಬಂದು ನಿಂತು, ಅಲ್ಲಿಂದ ಪುನ: ವಾಪಾಸು ಹೋಗುತ್ತಿದೆ. ಈ ರೈಲನ್ನು ಸಕಲೇಶಪುರದವರೆಗೆ ವಿಸ್ತರಿಸಿದರೆ, ಆಲೂರಿನಲ್ಲಿ ರೈಲುಗಳು ನಿಲುಗಡೆಯಾಗುವುದರಿಂದ ಅನೇಕ ರೋಗಿಗಳು ಬೆಂಗಳೂರು/ಮಂಗಳೂರಿನಲ್ಲಿ ಚಿಕಿತ್ಸೆ ಪಡೆಯಲು ಅನುಕೂಲವಾಗುತ್ತದೆ. ಅಲ್ಲದೆ ರೈತರು, ವಿದ್ಯಾರ್ಥಿಗಳು ಸೇರಿದಂತೆ ಜಿಲ್ಲೆಯಿಂದ ಹೊರ ಹೋಗುವ ಪ್ರಯಾಣಿಕರಿಗೆ ಅನುಕೂಲವಾಗುತ್ತದೆ ಎಂದು ಅವರು ಮನವಿಯಲ್ಲಿ ತಿಳಿಸಿದ್ದಾರೆ.

ಸಂಸದ ಶ್ರೇಯಸ್ ಪಟೇಲ್ ಮತ್ತು ಬೇಲೂರು ಶಾಸಕ ಹುಲ್ಲಳ್ಳಿ ಸುರೇಶ್ ರವರು ಧ್ವನಿಗೂಡಿಸಿ, ಆಲೂರು ತಾಲ್ಲೂಕಿನ ಪ್ರಯಾಣಿಕರು ಹಲವು ವರ್ಷಗಳಿಂದ ರೈಲು ನಿಲುಗಡೆ ಕೋರಿ ಅನೇಕ ಬಾರಿ ಮನವಿ ಮಾಡಿಕೊಂಡಿದ್ದಾರೆ. ವಿಷಯದ ಬಗ್ಗೆ ದಯವಿಟ್ಟು ಗಮನಹರಿಸಿ ಸಹಕರಿಸಬೇಕೆಂದು ಸಚಿವರಿಗೆ ಮನವಿ ಮಾಡಿದರು.

ಬಿಜೆಪಿ ಜಿಲ್ಲಾಧ್ಯಕ್ಷ ಸಿದ್ದೇಶ್ ನಾಗೇಂದ್ರ ಅವರು ಮುಂಬರುವ ಜಿಲ್ಲಾ ಮರು ಪರಿಶೀಲನೆ (ರಿವ್ಯೂ) ಸಭೆಯಲ್ಲಿ ವಿಷಯದ ಬಗ್ಗೆ ಸುಧೀರ್ಘ ಚರ್ಚೆ ನಡೆಸಿ ಮುಂದಿನ ಕ್ರಮಕ್ಕಾಗಿ ಸಚಿವರಿಗೆ ಮನವಿ ಸಲ್ಲಿಸಲಾಗುವುದು ಎಂದರು.

ಸಭೆಯಲ್ಲಿ ವಿದಾನಪರಿಷತ್ ಮಾಜಿ ಸದಸ್ಯ ಗೋಪಾಲಸ್ವಾಮಿ, ಮಾಜಿ ಶಾಸಕ ಸಿ.ಎಸ್.ಪುಟ್ಟೇಗೌಡ, ರೈಲ್ವೆ ಇಲಾಖೆ ಉನ್ನತ ಅಧಿಕಾರಿಗಳು ಉಪಸ್ಥಿತರಿದ್ದರು.

## ಮುಂದಿನ 3 ದಿನ ಭಾರೀ ಮಳೆ ಸಾಧ್ಯತೆ

**ಬೆಂಗಳೂರು:** ಮುಂಗಾರು ಮಳೆ ಮಾರುತಗಳು ಒಂದು ವಾರ ಮುಂಚಿತವಾಗಿಯೇ ಕೇರಳಂ ಅನ್ನು ತಲುಪಿವೆ. ಇನ್ನೂ ಕರ್ನಾಟಕದ ಗಡಿ ದಾಟಿಲ್ಲ. ಆದರೂ, ರಾಜ್ಯದಲ್ಲಿ ದಿನನಿತ್ಯ ಮಳೆ ಆರ್ಭಟ ಹೆಚ್ಚಾಗಿದೆ. ಇನ್ನೂ ಮೂರು ದಿನ ರಾಜ್ಯದ ಹಲವು ಜಿಲ್ಲೆಗಳಲ್ಲಿ ಭಾರೀ ಮಳೆಯಾಗಲಿದೆ. ಜೊತೆಗೆ, ಬಿರುಗಾಳಿಯೂ ಇರಲಿದೆ ಎಂದು ಹವಾಮಾನ ಇಲಾಖೆಯು ಸೂಚನೆ ನೀಡಿದೆ.

ರಾಜ್ಯದ 14 ಜಿಲ್ಲೆಗಳಲ್ಲಿ ಮಳೆ ಅಬ್ಬರ ಹೆಚ್ಚಾಗಿರಲಿದೆ ಎಂದು ಇಲಾಖೆ ತಿಳಿಸಿದೆ. ದಕ್ಷಿಣ ಒಳನಾಡು ಜಿಲ್ಲೆಗಳಾದ ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ಬೆಂಗಳೂರು ದಕ್ಷಿಣ, ಮೈಸೂರು, ಹಾಸನ, ಕೊಡಗು ಹಾಗೂ ಚಿಕ್ಕಮಗಳೂರು ಜಿಲ್ಲೆಗಳಲ್ಲಿ ಉತ್ತಮ ಮಳೆಯಾಗಲಿದೆ.

## ಅರಸೀಕೆರೆಯಲ್ಲಿ ಭಗೀರಥ ಜಯಂತಿ | ಉಪ್ಪಾರ ಸಮುದಾಯದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ

# ಅವಕಾಶಗಳ ಸದ್ಬಳಕೆಗೆ ಶಿಕ್ಷಣ ಅತ್ಯಗತ್ಯ : ತಹಶೀಲ್ದಾರ್

• ಪ್ರಜೋದಯ ವರದಿ

**ಅರಸೀಕೆರೆ:** ವಿದ್ಯಾರ್ಥಿಗಳು ಓದಬೇಕು, ಪೋಷಕರು ದುಡಿಯಬೇಕು, ಆಗ ಮಾತ್ರ ಸಾಧನೆ ಸಾಧ್ಯವಾಗಲಿದ್ದು, ಸಿಕ್ಕಿದ ಅವಕಾಶಗಳನ್ನು ಸದ್ಬಳಕೆ ಮಾಡಿಕೊಳ್ಳುವ ಜಾಣ್ಮೆ ಬೆಳೆಸಿಕೊಳ್ಳಲು ಶಿಕ್ಷಣ ಅತ್ಯಗತ್ಯ ಎಂದು ತಹಶೀಲ್ದಾರ್ ಸಂತೋಷ್ ಕುಮಾರ್ ಅಭಿಪ್ರಾಯ ವ್ಯಕ್ತಪಡಿಸಿದರು.

ನಗರ ಹೊರವಲಯದ ಜಾಜೂರು ಗ್ರಾಮದ ತಾಲ್ಲೂಕು ಭಗೀರಥ ಸಮುದಾಯ ಭವನದಲ್ಲಿ ತಾಲ್ಲೂಕು ಆಡಳಿತ ಹಾಗೂ ರಾಷ್ಟ್ರೀಯ ಹಬ್ಬಗಳ ಆಚರಣಾ ಸಮಿತಿ ಮತ್ತು ತಾಲ್ಲೂಕು ಭಗೀರಥ ಉಪ್ಪಾರ ಟ್ರಸ್ಟ್ ಸಹಯೋಗದಲ್ಲಿ ಆಯೋಜಿಸಿದ್ದ ಭಗೀರಥ ಜಯಂತಿ ಹಾಗೂ 2025 - 26 ನೇ ಸಾಲಿನ ತಾಲ್ಲೂಕು ಉಪ್ಪಾರ ಸಮುದಾಯದ ಎಸ್ಸೆಸ್ಸೆಲ್ಸಿ ಮತ್ತು ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಹೆಚ್ಚು ಅಂಕ ಗಳಿಸಿದ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

ನಮ್ಮ ಪ್ರತಿಭೆ ಇತರರಿಗೆ ಮಾದರಿಯಾಗಿರಬೇಕೆಂದರೆ ನಮ್ಮ ಸಾಧನೆ ಉತ್ತಮ ಮಟ್ಟದ್ದಾಗಿರಬೇಕು, ಸಾಧನೆ ವಿದ್ಯಾರ್ಥಿಗಳನ್ನು ಮೇಲ್ಮಟ್ಟಕ್ಕೆ ಕೊಂಡೊಯ್ಯುತ್ತದೆ, ತನ್ನ ಸತತ ಪ್ರಯತ್ನದ ಫಲವಾಗಿ ಭಗೀರಥ ಮಹರ್ಷಿಗಳು ಧರೆಗೆ ಗಂಗೆಯನ್ನು (ನೀರು) ಕರೆತರುವ ಮೂಲಕ ಪ್ರಯತ್ನದ ಮಹತ್ವವನ್ನು ಜಗತ್ತಿಗೆ ಸಾರಿದ ಮಹಾನ್ ದೈವ ಪುರುಷರಾಗಿದ್ದಾರೆ. ಹಿಂದುಳಿದ ಹಾಗೂ ಶೋಷಿತ ವರ್ಗಗಳು ಸಕಲ ಕ್ಷೇತ್ರಗಳಲ್ಲಿ ಮುನ್ನೆಲೆಗೆ ಬರಬೇಕು. ಈ ಜಯಂತಿ ಕಾರ್ಯಕ್ರಮದಲ್ಲಿ ಅಪಾರ ಸಂಖ್ಯೆಯಲ್ಲಿ ಪಾಲ್ಗೊಂಡು ಕಾರ್ಯಕ್ರಮದ ಯಶಸ್ಸಿಗೆ ಕಾರಣರಾಗಿರುವುದು



ಸಂತಸದ ಸಂಗತಿಯಾಗಿದೆ, ಭೂಮಂಡಲಕ್ಕೆ ಭಗೀರಥ ಮಹರ್ಷಿಗಳ ಕೊಡುಗೆ ಅಪಾರ, ಅಂಥ ಮಹನೀಯರ ಆದರ್ಶಗಳನ್ನು ಜೀವನದಲ್ಲಿ ಅಳವಡಿಸಿಕೊಂಡು ಉತ್ತಮ ಭವಿಷ್ಯ ರೂಪಿಸಿಕೊಳ್ಳಬೇಕು ಎಂದರು.

ತಾಲ್ಲೂಕು ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯ ಅಧ್ಯಕ್ಷ ಗೀಜಿಹಳ್ಳಿ ಧರ್ಮಶೇಖರ್ ಮಾತನಾಡಿ, ತಾಲ್ಲೂಕಿನ ವಿವಿಧ ಕ್ಷೇತ್ರಗಳಲ್ಲಿ ಪ್ರಮುಖ ಪಾತ್ರ ನಿರ್ವಹಿಸುತ್ತಿರುವ ಉಪ್ಪಾರ ಸಮುದಾಯದವರು ಲೋಕ ಕಲ್ಯಾಣಕ್ಕಾಗಿ ಭಗವಂತ ಶಿವನನ್ನು ಮೆಚ್ಚಿಸಿ ಧರೆಗೆ ನೀರನ್ನು ತಂದು ಭೂಮಂಡಲವನ್ನು ರಕ್ಷಿಸುವಲ್ಲಿ ಪ್ರಮುಖ ಪಾತ್ರ ವಹಿಸಿದ ಭಗೀರಥ ಮಹರ್ಷಿಗಳ ಜಯಂತಿಯನ್ನು ಆಚರಿಸುತ್ತಿರುವುದು ಅರ್ಥಪೂರ್ಣವಾಗಿದೆ ಎಂದು ತಿಳಿಸಿದರು.

ತಾಲ್ಲೂಕಿನ ಉಪ್ಪಾರ ಸಮುದಾಯದ 2025 - 26 ನೇ ಸಾಲಿನ ಎಸ್ಸೆಸ್ಸೆಲ್ಸಿ ಹಾಗೂ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಹೆಚ್ಚು ಅಂಕ ಗಳಿಸಿದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಿ ಸನ್ಮಾನಿಸಲಾಯಿತು, ಜತೆಗೆ ಹಾಸನ ಜಿಲ್ಲೆಯ ಅರಕಲಗೂಡು ತಾಲ್ಲೂಕಿನ ಕಟ್ಟಾಯ ಹೋಬಳಿಯ ಅವೇರಹಳ್ಳಿ ಕೋಪ್ಪಲು ಗ್ರಾಮದ ಹಾಸನ ನಗರದ ಚಿರಂತನ ಪ್ರೌಢಶಾಲೆಯ ಎನ್. ಉನ್ನತಿ ಎಂಬ ವಿದ್ಯಾರ್ಥಿನಿಯು ರಾಷ್ಟ್ರೀಯ ಮಟ್ಟದ 6 ರಾಜ್ಯಗಳ ಕಬಡ್ಡಿ ಸೆಮಿಫೈನಲ್ ಪಂದ್ಯದಲ್ಲಿ ಕರ್ನಾಟಕ ತಂಡದ ನಾಯಕಿಯಾಗಿ ತಂಡವನ್ನು ಮುನ್ನಡೆಸಿದ್ದ ಕಾರಣಕ್ಕೆ ಸನ್ಮಾನಿಸಲಾಯಿತು.

ತಾಲ್ಲೂಕು ಭಗೀರಥ ಉಪ್ಪಾರ ಟ್ರಸ್ಟ್ ಅಧ್ಯಕ್ಷ ಕೆ.ಸಿ.ಡಿ. ಶಿವಕುಮಾರ್, ಹಾಸನ ವಿಶ್ವವಿದ್ಯಾನಿಲಯದ ಹೇಮಾಗಂಗೋತ್ರಿಯ ಮೌಲ್ಯಮಾಪನ ವಿಭಾಗದ ಕುಲಸಚಿವ ಡಾ. ಎನ್. ನಾಗರಾಜ್, ತಾಲ್ಲೂಕು ಸೆಸ್ಕ್ ಉಪ ವಿಭಾಗದ ಎಇಇ ಕೆ. ಜಯಪ್ಪ, ಭಗೀರಥ ಉಪ್ಪಾರ ಟ್ರಸ್ಟ್ ಖಜಾಂಚಿ ಗಂಗಾಧರಪ್ಪ ಜಾಜೂರು, ಮುಖಂಡರಾದ ಚನ್ನಬಸಪ್ಪ, ಮೈಲಾರಪ್ಪ, ಲಕ್ಷ್ಮೀಶ್ ಬಾಬು, ಹಾಸನ ಜಿಲ್ಲಾ ಭಗೀರಥ ಉಪ್ಪಾರ ಸಂಘದ ಅಧ್ಯಕ್ಷ ಮೋಹನ್‌ಕುಮಾರ್, ಬೇಲೂರು ತಾಲ್ಲೂಕು ಘಟಕದ ಅಧ್ಯಕ್ಷ ಸುರೇಶ್, ತಾಲ್ಲೂಕು ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯ ಸದಸ್ಯ ಸಿದ್ದೇಶ್ ಜಾಜೂರು, ನಿರಂಜನ್ ಮೂರ್ತಿ, ಹೊನ್ನಪ್ಪ, ಹೋಟೆಲ್ ಶಿವಣ್ಣ, ತಾಲ್ಲೂಕು ಉಪ್ಪಾರ ಸಮುದಾಯದ ಮುಖಂಡರುಗಳು ಉಪಸ್ಥಿತರಿದ್ದರು.

ಹಾಸನದ ಜಿಲ್ಲಾಧಿಕಾರಿಗಳ ತಾಂತ್ರಿಕ ಸಹಾಯಕರು ಹಾಗೂ ಭೂ ದಾಖಲೆಗಳ ಸಹಾಯಕ ನಿರ್ದೇಶಕ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ

ಅಪೀಲು ನಂ : 116/2026-27

ಅಪೀಲುದಾರರು : ಪಾರ್ವತಿ ಕೋಂ ಅಣ್ಣಯ್ಯ, ಸುಮಾರು 56 ವರ್ಷ ವಾರ್ಡ್ ನಂ.1, ವಿದ್ಯುತ್ ನಗರ, ಹೊಳೆನರಸೀಪುರ ಟೌನ್, ಹೊಳೆನರಸೀಪುರ.

ವಿರುದ್ಧ

ರೆಸ್ಪಾಂಡೆಂಟರು : ರಿಹಾನ ಫರ್ವಿನ್ ಕೋಂ ಎಸ್.ಎ.ರಹೀಂ ಮತ್ತು ಇತರರು

ಗೆ,

3) ಕೃಷ್ಣಕುಮಾರ್ ಬಿನ್ ಚನ್ನೇಗೌಡ, ಮುತ್ತಿಗೆ ಗ್ರಾಮ ಶಾಂತಿಗ್ರಾಮ ಹೋಬಳಿ ಹಾಸನ ತಾಲ್ಲೂಕು, ಹಾಸನ ಜಿಲ್ಲೆ.
7) ಕೃಷ್ಣೇಗೌಡ ಬಿನ್ ಜವರೇಗೌಡ, ಎಂ.ಹೊಸಕೊಪ್ಪಲು ಗ್ರಾಮ, ಕಸಬ ಹೋಬಳಿ, ಹೆಚ್.ಎನ್.ಪುರ ರಸ್ತೆ, ಹಾಸನ ಜಿಲ್ಲೆ.

: : ಪತ್ರಿಕಾ ಪ್ರಕಟಣೆ : :

ಈ ಮೇಲೆ ಹೆಸರಿಸಿದಂತಹ ಪಾರ್ವತಿ ಇವರು ನಿಮ್ಮ ವಿರುದ್ಧ ಮಾನ್ಯ ಘನ ನ್ಯಾಯಾಲಯದಲ್ಲಿ ಅಪೀಲನ್ನು ರೆಸ್ಪಾಂಡೆಂಟರ ವಿರುದ್ಧ ಹಾಸನ ತಾಲ್ಲೂಕು, ಕಸಬಾ ಹೋಬಳಿ, ನಾಗತವಳ್ಳಿ ಗ್ರಾಮದ ಸರ್ವೆ ನಂ. 47/60, 32ರ ಹಿಸ್ಸೆಯನ್ನು 47/47, 46 ರ ಮೇಲೆ ಅತಿ ವ್ಯಾಪ್ತಿ ಮಾಡಿ ದುರಸ್ತಿಪಡಿಸಲಾಗಿರುತ್ತದೆ. ಈ ರೀತಿಯಾಗಿ ತಪ್ಪಾಗಿ ಅತಿ ವ್ಯಾಪ್ತಿ ಮಾಡಿ ದುರಸ್ತಿ ಪಡಿಸಿರುವುದು ರದ್ದುಪಡಿಸುವಂತೆ, ಆದೇಶ ಕೋರಿ ಅರ್ಜಿ ಸಲ್ಲಿಸಿರುವುದರಿಂದ ನೀವು ದಿನಾಂಕ: 04ನೇ ಜೂನ್ ತಿಂಗಳಿನ 2026 ಇಸವಿಯ ಮಧ್ಯಾಹ್ನ 03 ಗಂಟೆಗೆ ಅರ್ಜಿಯ ವಿರುದ್ಧ ಏನಾದರೂ ತಕರಾರು ಇದ್ದಲ್ಲಿ ತಾವಾಗಲಿ/ ತಮ್ಮ ಪರ ವಕೀಲರ ಮೂಲಕವಾಗಲಿ, ಹಾಜರಾಗಿ ಮೇಲ್ಕಂಡ ಅರ್ಜಿಗೆ ಸಂಬಂಧಿಸಿದಂತೆ ತಮ್ಮ ಅಹವಾಲನ್ನು ಸಲ್ಲಿಸತಕ್ಕದ್ದು, ತಪ್ಪಿದ್ದಲ್ಲಿ ಸದರಿ ಅರ್ಜಿಗೆ ಯಾವುದೇ ತಕರಾರು ಇಲ್ಲ ಎಂಬುದಾಗಿ ತಿಳಿದು ಸದರಿ ಅರ್ಜಿಯಲ್ಲಿ ಏಕಪಕ್ಷೀಯವಾಗಿ ವಿಚಾರಣೆ ಮಾಡಲಾಗುವುದೆಂದು ಮತ್ತು ತೀರ್ಮಾನಿಸಲಾಗುವುದೆಂದು ಈ ಮೂಲಕ ತಿಳಿಯಪಡಿಸಲಾಗಿದೆ.

ದಿನಾಂಕ: 02ನೇ ಜೂನ್ ತಿಂಗಳಿನ 2026 ಇಸವಿಯಂದು ನನ್ನ ಸಹಿಯೊಡನೆ ಮತ್ತು ನ್ಯಾಯಾಲಯದ ಮೊಹರಿನೊಡನೆ ನೀಡಲಾಗಿದೆ.

| | |
|---|---|
| ಅರ್ಜಿದಾರರ ಪರ ವಕೀಲರು | ನ್ಯಾಯಾಲಯದ ಅಪ್ಪಣೆಯ ಮೇರೆಗೆ |
| (ಶ್ರೀ ಸಿ.ಎಂ.ಗುರುರಾಜ್) | ಶಿರಸೇದಾರರು, ಹಾಸನದ ಜಿಲ್ಲಾಧಿಕಾರಿಗಳ |
| ಹಾಸನ | ತಾಂತ್ರಿಕ ಸಹಾಯಕರು, ನ್ಯಾಯಾಧೀಶರು, ಹಾಸನ. |
| ದಿನಾಂಕ: 1-6-2026 | |

# ಕೃಷಿ ವೆಚ್ಚಕ್ಕೆ ಕಡಿವಾಣ ಹಾಕಲು ಜಾಗೃತಿ ಮೂಡಿಸಿ

## ರಸಗೊಬ್ಬರ ವಿತರಣಾ ಸಭೆಯಲ್ಲಿ ಜಿಲ್ಲಾಧಿಕಾರಿ ಕೆ.ಎಸ್.ಲತಾಕುಮಾರಿ




• ಪ್ರಜೋದಯ ವರದಿ

**ಹಾಸನ:** ರೈತರು ರಾಸಾಯನಿಕ ರಸಗೊಬ್ಬರಗಳ ಬಳಕೆ ಕಡಿಮೆ ಮಾಡುವುದರ ಮೂಲಕ ಕೃಷಿ ಚಟುವಟಿಕೆಗಳ ವೆಚ್ಚಕ್ಕೆ ಕಡಿವಾಣ ಹಾಕುವ ನಿಟ್ಟಿನಲ್ಲಿ ಪ್ರತಿ ರೈತ ಸಂಪರ್ಕ ಕೇಂದ್ರಗಳಲ್ಲಿ ಹಾಗೂ ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಜಾಗೃತಿ ಮೂಡಿಸಲು ಕ್ರಮ ಕೈಗೊಳ್ಳುವಂತೆ ಜಿಲ್ಲಾಧಿಕಾರಿ ಲತಾ ಕುಮಾರಿ ಅವರು ಅಧಿಕಾರಿಗಳಿಗೆ ನಿರ್ದೇಶನ ನೀಡಿದ್ದಾರೆ.

ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಸೋಮವಾರ 2026-27ನೇ ಸಾಲಿನ ಮುಂಗಾರು ಹಂಗಾಮಿಗೆ ಬಿತ್ತನೆ ಬೀಜ ಮತ್ತು ರಸಗೊಬ್ಬರ ವಿತರಣೆ ಕುರಿತು ಸಭೆ ನಡೆಸಿ ಮಾತನಾಡಿದ ಅವರು, ರಸಗೊಬ್ಬರಗಳಿಗೆ ಪರ್ಯಾಯವಾಗಿ ಸಾವಯವ ಗೊಬ್ಬರವನ್ನು ಯಾವುದನ್ನು ಎಷ್ಟು ಪ್ರಮಾಣದಲ್ಲಿ ಬಳಸಬೇಕೆಂಬುದರ ಬಗ್ಗೆ ರೈತರಿಗೆ ಮಾಹಿತಿ ನೀಡಿ ಉತ್ತೇಜನ ನೀಡುವಂತೆ ಅಧಿಕಾರಿ ಗಳಿಗೆ ಸೂಚಿಸಿದರು.

ಭೂಮಿ ಹಾಳಾಗುವುದನ್ನು ತಪ್ಪಿಸಲು ಹಾಗೂ ಮಣ್ಣಿನ ಫಲವತ್ತತೆ ಹೆಚ್ಚಿಸಿ ಗುಣಮಟ್ಟವನ್ನು ಸುಧಾರಿಸಲು ಕಾರ್ಯೋನ್ಮುಖರಾಗಬೇಕು ಈ ನಿಟ್ಟಿನಲ್ಲಿ ಅಧಿಕಾರಿಗಳು ನಿಗಾವಹಿಸಿ ರೈತರಿಗೆ ಸ್ಪಷ್ಟ ಮಾಹಿತಿ ನೀಡುವುದರ ಮೂಲಕ ಮನಃಪರಿವರ್ತನೆಯಾಗಿ ಸಾವಯವ ಕೃಷಿಗೆ ಬದಲಾಗುವಂತೆ ಉತ್ತೇಜನ ನೀಡಿ ಎಂದು ತಿಳಿಸಿದರು.

ಕೃಷಿ ಇಲಾಖೆ ಜೊತೆಗೆ ಇತರೆ ಇಲಾಖೆಗಳ ಸಮನ್ವಯತೆಯೊಂದಿಗೆ ಸಾವಯವಗೊಬ್ಬರವಾಗಿ ಕೋಳಿ, ಕುರಿ ಗೊಬ್ಬರ ಮತ್ತಿತರ ಬಳಸಬಹುದೆಂಬುದರ ಬಗ್ಗೆ ಪರಿಶೀಲನೆ ಮಾಡಿ ವರದಿ ಸಿದ್ದಪಡಿಸಿ ಎಂದು ತಿಳಿಸಿದರು.

ಧರ್ತಿ ಮಾತಾ ಬಚಾವೋ ನಿಗ್ರಾಣಿ ಸಮಿತಿಗಳ ಕಾರ್ಯವನ್ನು ಚುರುಕುಗೊಳಿಸಿ ರೈತರಲ್ಲಿ ಜಾಗೃತಿ ಮೂಡಿಸಿ ಮಣ್ಣಿನ ಆರೋಗ್ಯದಲ್ಲಿ ಸುಸ್ಥಿರ ಸುಧಾರಣೆಯನ್ನು ತರುವಲ್ಲಿ ಯಶಸ್ವಿ ಯಾಗಿ ಎಂದು ತಿಳಿಸಿದರು.

ಕಾಡು ಕೃಷಿಗೆ ಹೆಚ್ಚಿನ ಉತ್ತೇಜನ ನೀಡಿ ಸ್ವಯಂ ಸೇವಾ ಸಂಸ್ಥೆಗಳ ಸಹಯೋಗದೊಂದಿಗೆ ಅರಿವು ಮೂಡಿಸಿ ಎಂದರಲ್ಲದೆ, ಗುಣಮಟ್ಟದ ಬಿತ್ತನೆ ಬೀಜವನ್ನು ಸಮರ್ಪಕವಾಗಿ ವಿಸರಿಸಲು ಕ್ರಮ ವಹಿಸುವಂತೆ ಅಧಿಕಾರಿಗಳಿಗೆ ಸೂಚಿಸಿದರು.

ಜಂಟಿ ಕೃಷಿ ನಿರ್ದೇಶಕ ರಮೇಶ್, ಉಪ ನಿರ್ದೇಶಕರಾದ ಕೋಕಿಲಾ, ರಸಗೊಬ್ಬರ, ಬಿತ್ತನೆ ಬೀಜ ವಿತರಕರು ಸಭೆಯಲ್ಲಿ ಹಾಜರಿದ್ದರು.

# ಸಿಸಿಟಿವಿಯಲ್ಲಿ ಬಯಲಾಯ್ತು ವ್ಯಕ್ತಿ ಕೊಲೆಯ ಸತ್ಯಾಂಶ

» ಮೊದಲನೇ ಪುಟದಿಂದ

ಇನ್ನೂ ಹೆಚ್ಚು ಹಣ ತರುವಂತೆ ಪೀಡಿಸುತ್ತಿದ್ದರು ಎನ್ನಲಾಗಿದೆ.

ಮೇ 14 ರಂದು ಗುರುಮೂರ್ತಿ ಮೈಸೂರಿಗೆ ತೆರಳಿದ್ದರು. ಈ ವೇಳೆ ಹೊಟ್ಟೆಗೆ ಪೇಯ್ನ್ ಬ್ಯಾಂಡೇಜ್ ಕಟ್ಟಿಕೊಂಡಿರುವುದನ್ನು ಗಮನಿಸಿದ ತಾಯಿ ರೇಣುಕಮ್ಮ ಮಗನನ್ನು ವಿಚಾರಿಸಿದ್ದರು. ಪತ್ನಿ ಹಾಗು ಅಪ್ರಾಪ್ತ ಪುತ್ರ ಹಲ್ಲೆ ನಡೆಸಿರುವುದಾಗಿ ಗುರುಮೂರ್ತಿ ತಾಯಿ ಬಳಿ ಹೇಳಿದ್ದರು. ಮೇ 15 ರಂದು ಗುರುಮೂರ್ತಿ ನಗರಕ್ಕೆ ವಾಪಾಸ್ ಬಂದಿದ್ದು, ಮೇ 18 ರಂದು ಮನೆಯಲ್ಲಿಯೇ ಮಲಗಿದ್ದ ಜಾಗದಲ್ಲಿ ಸಾವನ್ನಪ್ಪಿದ್ದರು. ನಂತರ ಅವರ ತಾಯಿಗೆ ವಿಷಯ ತಿಳಿಸಲಾಗಿತ್ತು.

ಈ ವೇಳೆ ಪತಿ ಶವವನ್ನು ಸುಡಬೇಕೆಂದು ಸೊಸೆ ವೀಣಾ ಒತ್ತಾಯಿಸಿದ್ದರು. ಇದರಿಂದ ಅನುಮಾನಗೊಂಡ ರೇಣುಕಮ್ಮ ಹಾಗು ಸಂಬಂಧಿಕರು ಶವ ಸುಡಲು ವಿರೋಧಿಸಿ ಬಿಟ್ಟಗೌಡನಹಳ್ಳಿಯ ಮಸಣದಲ್ಲಿ ಅಂತ್ಯಕ್ರಿಯೆ ನೆರವೇರಿಸಿದ್ದರು. ಅಂತ್ಯಕ್ರಿಯೆ ಬಳಿಕ ಗುರುಮೂರ್ತಿ ಮಾವ ಸದಾಶಿವ ಮನೆಯಲ್ಲಿದ್ದ ಡಿವಿಆರ್‌ನ್ನು ಮೈಸೂರಿಗೆ ತೆಗೆದುಕೊಂಡು ಹೋಗಿ ಪರಿಶೀಲನೆ ನಡೆಸಿದ ವೇಳೆ ಗುರುಮೂರ್ತಿ ಸಾವಿನ ಸತ್ಯ ಬಯಲಾಗಿದೆ.



ಮೇ 17 ರಂದು ಪತಿ ಜೊತೆ ವೀಣಾ ಜಗಳ ತೆಗೆದಿದ್ದು, ಅಪ್ರಾಪ್ತ ಪುತ್ರ ಹಾಗು ವೀಣಾ ಪತಿಗೆ ಕಾಲಿನಿಂದ ಒದ್ದು ಹಲ್ಲೆ ನಡೆಸಿದ್ದರು. ತೀವ್ರ ಹಲ್ಲೆಗೊಳಗಾದ ಗುರುಮೂರ್ತಿ ಮನೆಯಲ್ಲಿಯೇ ಕುಸಿದು ಬಿದ್ದಿದ್ದರು. ಆನಂತರ ಅಪ್ರಾಪ್ತ ಪುತ್ರ ತಂದೆಯನ್ನು ಮಂಚದ ಮೇಲೆ ಮಲಗಿಸಿದ್ದು, ಮೇ 18 ರಂದು ಗುರುಮೂರ್ತಿ ಸಾವನ್ನಪ್ಪಿದ್ದರು.

ಪತ್ನಿ ವೀಣಾ ಹಾಗು ಅಪ್ರಾಪ್ತ ಪುತ್ರನ ಹಲ್ಲೆಯಿಂದಲೇ ಮಗ ಮೃತಪಟ್ಟಿದ್ದಾನೆ. ಇನ್ಶೂರೆನ್ಸ್ ಹಣಕ್ಕಾಗಿ ಮೃತದೇಹವನ್ನು ಸುಡಲು ತಯಾರು ನಡೆಸಿದ್ದರೆಂದು ರೇಣುಕಮ್ಮ ಹಾಗೂ ಸದಾಶಿವ ಆರೋಪಿಸಿದ್ದಾರೆ. ಪೊಲೀಸರು ವೀಣಾ ಹಾಗು ಅಪ್ರಾಪ್ತ ಬಾಲಕನ ವಿರುದ್ಧ ಪ್ರಕರಣ ದಾಖಲಿಸಿಕೊಂಡು ತನಿಖೆ ಮುಂದುವರೆಸಿದ್ದಾರೆ.

# ನಿತ್ಯ ಅನ್ನದಾಸೋಹ ಕಾರ್ಯಕ್ಕೆ ಶಂಭುನಾಥ ಶ್ರೀ ಮೆಚ್ಚುಗೆ

» ಮೊದಲನೇ ಪುಟದಿಂದ

ಮಾತನಾಡಿ, ಪ್ರತಿನಿತ್ಯ ನಡೆಯುವ ಅನ್ನದಾಸೋಹ ಯೋಜನೆಯಡಿ 30ಕ್ಕೂ ಹೆಚ್ಚು ಯುವಕರು ಸೌಲಭ್ಯ ಪಡೆಯುತ್ತಿದ್ದಾರೆ. ಪತ್ರಕರ್ತರ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ನೀಡುವ ಮೂಲಕ ಅವರಿಗೆ ಉತ್ತೇಜನ ನೀಡಲಾಗುತ್ತಿದೆ. ಕೆನರಾ ಬ್ಯಾಂಕ್‌ನ ಗಿಗ್ ಸ್ಟಾರ್ ಯೋಜನೆ ಕುರಿತು ಮಾಹಿತಿ ನೀಡಿದರು.

ಲೀಡ್ ಬ್ಯಾಂಕ್ ವ್ಯವಸ್ಥಾಪಕಿ ಲತಾ ಸರಸ್ವತಿ ಮಾತನಾಡಿ, 18 ವರ್ಷ ಮೇಲ್ಪಟ್ಟ ಅಸಂಘಟಿತ ಕಾರ್ಮಿಕರು ಗಿಗ್ ಸ್ಟಾರ್ ಖಾತೆ ತೆರೆಯಬಹುದಾಗಿದೆ. ಆದಾಯ ತೆರಿಗೆ ದಾಖಲೆ ಅಥವಾ ವೇತನ ಪ್ರಮಾಣ ಪತ್ರವಿಲ್ಲದೆ ವಾಹನ ಹಾಗೂ ಗೃಹಸಾಲ ಸೌಲಭ್ಯ, ಅಪಘಾತ ವಿಮೆ ಸೇರಿದಂತೆ ಹಲವು ಪ್ರಯೋಜನಗಳಿವೆ ಎಂದು ವಿವರಿಸಿದರು.




ಜಿಲ್ಲೆಯ ಪತ್ರಕರ್ತರ ಪ್ರತಿಭಾವಂತ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ನೀಡಿ ಅಭಿನಂದಿ ಸಲಾಯಿತು. ಪಿಯುಸಿ ವಿಭಾಗದಲ್ಲಿ ತನಿಷ್ಕ ಎನ್. ಕುಚ್ಚಳ್ಳಿ, ವಿ.ಸಮೃದ್ಧಿ, ಸಮನ್ವಿತಾ, ಕೆ.ಎನ್‌ಭುವನ್, ಎಸ್. ವಿ.ಆಕಾಂಕ್ಷ ಮತ್ತುಎಂ.ಎಸ್.ಚಿನ್ಮಯಿ ಹಾಗು ಎಸ್‌ಎಲ್‌ಎಲ್‌ಸಿ ವಿಭಾಗದಲ್ಲಿ ಎಸ್. ಎಸ್.ನವಮಿ,ಎನ್.ಎನ್.ವರ್ಷಿಣಿ ರಾಜ್ ಮತ್ತು ಯು.ಚೈತನ್ಯ ಅವರಿಗೆ ಸ್ವಾಮೀಜಿ ಹಾಗು ಇತರರು ಪ್ರತಿಭಾ ಪುರಸ್ಕಾರ ನೀಡಿ ಅಭಿನಂದಿಸಿದರು.

ಭಾರತ್ ಗ್ಯಾಸ್ ಏಜೆನ್ಸಿ ಮಾಲೀಕ ಕೃಷ್ಣ ಅವರನ್ನೂ ಅಭಿನಂದಿಸಲಾಯಿತು. ಸಂಘದ ಉಪಾಧ್ಯಕ್ಷರಾದ ಎನ್.ನಂಜುಂಡೇಗೌಡ, ಜಿ.ಪ್ರಕಾಶ್, ಕಾರ್ಯದರ್ಶಿಗಳಾದ ಬಿ.ಆರ್. ಬೊಮ್ಮೇಗೌಡ, ಕೆ.ಎಂ.ಹರೀಶ್, ಖುಷ್ವಂತ್, ಖಜಾಂಚಿ ಪ್ರಕಾಶ್ ಬೆಳವಾಡಿ, ಬಿಸಿಯೂಟ ಮೇಲ್ವಿಚಾರಕ ಪ್ರತಾಪ್ ಜಿ.ಹಿರೀಸಾವೆ ಇದ್ದರು.

# ಮಕ್ಕಳನ್ನು ಶಾಲೆಗೆ ಬರಮಾಡಿಕೊಂಡ ಶಾಸಕ, ಡಿಸಿ, ಸಿಇಓ

» ಮೊದಲನೇ ಪುಟದಿಂದ

ವಾಗಲು ಗುಣಮಟ್ಟದ ಶಿಕ್ಷಣ ನೀಡಲು ಶಿಕ್ಷಕರು ಹೆಚ್ಚಿನ ಕಾಳಜಿ ವಹಿಸುವಂತೆ ತಿಳಿಸಿದರು.

ಜಿಲ್ಲೆಯಲ್ಲಿ ಎಸ್‌ಎಸ್‌ಎಲ್‌ಸಿ ಪರೀಕ್ಷೆ ಬರೆದ ಎಲ್ಲಾ ಮಕ್ಕಳು ಉತ್ತೀರ್ಣರಾಗಿದ್ದು, ಶೇಕಡ ನೂರರಷ್ಟು ಫಲಿತಾಂಶ ಬಂದಿದೆ. ಜಿಲ್ಲೆಯನ್ನು ಹಸಿರು ಹಾಸನವಾಗಿ ನಿರ್ಮಾಣ ಮಾಡುವ ನಿಟ್ಟಿನಲ್ಲಿ 5 ಲಕ್ಷ ಸಸಿಗಳನ್ನು ನೆಟ್ಟು ಪೋಷಣೆ ಮಾಡಲು ಜಿಲ್ಲಾಡಳಿತ ನಿರ್ಧರಿಸಿದೆ. ಹರಳಹಳ್ಳಿ ಸರ್ಕಾರಿ ಪ್ರೌಢಶಾಲೆಯಲ್ಲಿ ಗಿಡಗಳನ್ನು ನೆಟ್ಟು ಪೋಷಣೆ ಮಾಡಿ ಹಚ್ಚಹಸುರಿನಿಂದ ಕಂಗೊಳಿಸುವ ರೀತಿಯಲ್ಲಿ ನಿರ್ವಹಣೆ ಮಾಡಿರು ವುದಕ್ಕಾಗಿ ಅಭಿನಂದನೆಗಳನ್ನು ತಿಳಿಸಿದರಲ್ಲದೆ, ಇದೇ ರೀತಿ ಎಲ್ಲಾ ಶಾಲಾ ಆವರಣದಲ್ಲಿ ಗಿಡಗಳನ್ನು ನೆಟ್ಟು ಪೋಷಣೆ ಮಾಡಲು ಮುಂದಾಗಬೇಕು ಎಂದರು.

ಉತ್ತಮ ಪರಿಸರಕ್ಕಾಗಿ ಸ್ವಚ್ಚತೆ ಕಾಪಾಡುವ ನಿಟ್ಟಿನಲ್ಲಿ ಮಕ್ಕಳಿಗೆ ಜಾಗೃತಿ ಮೂಡಿಸಿ ಹಸಿ ಕಸ ಮತ್ತು ಒಣ ಕಸವನ್ನು ಪ್ರತ್ಯೇಕವಾಗಿ ಬೇರ್ಪಡಿಸಿ ನೀಡುವುದು, ಪ್ಲಾಸ್ಟಿಕ್ ಬಳಕೆ ಮಾಡದಂತೆ ಹಾಗು ಕಸವನ್ನು ಎಲ್ಲೆಂದರಲ್ಲಿ ಹಾಕದಂತೆ ಮನವರಿಕೆ ಮಾಡಿಕೊಡುವಂತೆ ಶಿಕ್ಷಕರಿಗೆ ಸೂಚನೆ ನೀಡಿದರು. ಎಸ್.ಡಿ.ಎಂ.ಸಿ ಅಧ್ಯಕ್ಷರಾದ ಸುಮಿತ್ರ, ಡಯಟ್ ಪ್ರಾಂಶುಪಾಲ ರುದ್ರೇಶ್, ಮತ್ತಿತರರು ಉಪಸ್ಥಿತರಿದ್ದರು.

## ಪಿ.ಎಂ.ಶ್ರೀ. ಸರ್ಕಾರಿ ಶಾಲಾ ಮಕ್ಕಳಿಗೆ ಉಚಿತ ಪುಸ್ತಕ-ಸಮವಸ್ತ್ರ ವಿತರಣೆ

# ಒಂದೇ ಸೂರಿನಡಿ ಶಿಕ್ಷಣ ಸಿಗುವಂತಾಗಬೇಕು

• ಪ್ರಜೋದಯ ವರದಿ

**ಚನ್ನರಾಯಪಟ್ಟಣ:** ಮಕ್ಕಳ ಮನೆ ಸೇರಿ 1ನೇ ತರಗತಿಯಿಂದ 10ರ ವರೆಗೆ ಒಂದೇ ಸೂರಿನಡಿ ಶಿಕ್ಷಣ ಸಿಗುವಂತಾಗಬೇಕೆಂದು ಶಾಸಕ ಸಿ.ಎನ್.ಬಾಲಕೃಷ್ಣ ಅವರು ಹೇಳಿದರು.

ಪಟ್ಟಣದ ಪಿ.ಎಂ.ಶ್ರೀ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ವಿದ್ಯಾರ್ಥಿಗಳಿಗೆ ಉಚಿತ ಪುಸ್ತಕ ಹಾಗೂ ಸಮವಸ್ತ್ರಗಳನ್ನು ವಿತರಿಸಿ ಮಾತನಾಡಿ, ಉತ್ತಮ ಗುಣಮಟ್ಟ ಹಾಗೂ ಮೌಲ್ಯಯುತ ಶಿಕ್ಷಣ ಕಲ್ಪಿಸುವುದು ಸರ್ಕಾರದ ಮುಖ್ಯ ಜವಾಬ್ದಾರಿಯಾಗಿದೆ ಎಂದರು.




ಮಕ್ಕಳನ್ನು ಉತ್ಸಾಹದಿಂದ ಶಾಲೆಗೆ ಕರೆತಂದು ಉಚಿತ ಶಿಕ್ಷಣ ನೀಡುವ ನಿಟ್ಟಿನಲ್ಲಿ ಸರ್ಕಾರವು ಸಮವಸ್ತ್ರ, ಶೂ, ಪುಸ್ತಕ ಹಾಗೂ ಬಿಸಿಯೂಟ ಸೇರಿ ವಿವಿಧ ಯೋಜನೆಗಳನ್ನು ರೂಪಿಸಿದ್ದು ಸದ್ಬಳಕೆ ಮಾಡಿಕೊಳ್ಳಬೇಕೆಂದು ತಿಳಿಸಿದರು.

15 ಸಾವಿರ ಶಿಕ್ಷಕರನ್ನು ಭರ್ತಿ ಮಾಡಿಕೊಳ್ಳುವುದಾಗಿ ಸರ್ಕಾರವು ಆಶ್ವಾಸನೆ ನೀಡಿದೆ. ಸರ್ಕಾರಿ ಶಾಲೆಗಳನ್ನು ಉಳಿಸುವ ನಿಟ್ಟಿನಲ್ಲಿ ಜರೂರಾಗಿ ನೇಮಕಾತಿ ಮಾಡಿಕೊಳ್ಳುವುದು ಅಗತ್ಯವಿದೆ. ಸದ್ಯಕ್ಕೆ ತಾಲ್ಲೂಕು ವ್ಯಾಪ್ತಿಯ ಶಾಲೆಗಳಿಗೆ ಅತಿಥಿ ಶಿಕ್ಷಕರನ್ನು ನೇಮಕ ಮಾಡಿಕೊಳ್ಳುವಂತೆ ಕ್ಷೇತ್ರ ಶಿಕ್ಷಣಾಧಿಕಾರಿಗಳ ಗಮನಕ್ಕೆ ತರಲಾಗಿದೆ ಎಂದು ತಿಳಿಸಿದರು.

ನಮ್ಮ ಸ್ವಗ್ರಾಮದ ಸರ್ಕಾರಿ ಶಾಲೆಯನ್ನು ಉಳಿಸುವ ನಿಟ್ಟಿನಲ್ಲಿ ಅಕ್ಕಪಕ್ಕದ ಐದಾರು ಗ್ರಾಮ ಗಳಿಂದ ಶಾಲೆಗೆ ಮಕ್ಕಳನ್ನು ಕರೆತರಲು ಸ್ವಂತಿಕೆಯಾಗಿ 18 ಸಾವಿರ ರೂ. ನೀಡಿ ವ್ಯವಸ್ಥೆ ಮಾಡಲಾಗಿದೆ. ಸರ್ಕಾರಿ ಶಾಲೆಗಳು ಉಳಿದು ಬೆಳೆಯಬೇಕು ಎಂದರು.

ಪಿ.ಎಂ.ಶ್ರೀ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಮೈದಾನದಲ್ಲಿ ಮಳೆ ನೀರು ಸಂಗ್ರಹ ವಾಗುತ್ತಿದ್ದು ಅದನ್ನು ಸರಾಗವಾಗಿ ಹರಿದು ಹೋಗುವಂತೆ ಡ್ರೈನೇಜ್ ವ್ಯವಸ್ಥೆ ಮಾಡಲಾಗುವುದು. ಹೆಚ್ಚಿನ ಅನುದಾನದೊಂದಿಗೆ ಶಾಲೆಯ ಮತ್ತಷ್ಟು ಅಭಿವೃದ್ಧಿಗೆ ಆದ್ಯತೆ ನೀಡಲಾಗುವು ದೆಂದು ಭರವಸೆ ನೀಡಿದರು.

ಕ್ಷೇತ್ರ ಶಿಕ್ಷಣಾಧಿಕಾರಿ ಸತೀಶ್, ಶಿಕ್ಷಣ ಸಮನ್ವಯಾಧಿಕಾರಿ ಅನಿಲ್, ಇಸಿಓ ಲೋಕೇಶ್, ಅಕ್ಷರದಾಸೋಹ ಅಧಿಕಾರಿ ಉಮಾಶಂಕರ್, ಮುಖ್ಯಶಿಕ್ಷಕ ಸುರೇಶ್, ಬಾಲಕಿಯರ ಸರ್ಕಾರಿ ಪ್ರೌಢಶಾಲೆಯ ಮುಖ್ಯ ಶಿಕ್ಷಕರ ರಮೇಶ್, ಶಿಕ್ಷಕ ವರ್ಗ ಹಾಗೂ ಇತರರು ಇದ್ದರು.

# ಡಿ.ಟಿ.ಶ್ರೀನಿವಾಸ್‌ಗೆ ಸಚಿವ ಸ್ಥಾನಕ್ಕೆ ಒತ್ತಾಯ

» ಮೊದಲನೇ ಪುಟದಿಂದ

2024ರ ಕರ್ನಾಟಕ ಆಗ್ನೇಯ ಶಿಕ್ಷಕರ ಕ್ಷೇತ್ರದ ವಿಧಾನ ಪರಿಷತ್ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷದ ಅಭ್ಯರ್ಥಿಯಾಗಿ ಸ್ಪರ್ಧಿಸಿ ಜಯ ಸಾಧಿಸಿರುವ ಡಿ.ಟಿ.ಶ್ರೀನಿವಾಸ್, ಆ ಕ್ಷೇತ್ರದಲ್ಲಿ ಮೊದಲ ಬಾರಿಗೆ ಕಾಂಗ್ರೆಸ್‌ಗೆ ಗೆಲುವು ತಂದು ಕೊಟ್ಟ ನಾಯಕ ಎಂಬ ಹೆಗ್ಗಳಿ ಕೆಗೆ ಪಾತ್ರರಾಗಿದ್ದಾರೆ. ಶೈಕ್ಷಣಿಕ ಕ್ಷೇತ್ರದಲ್ಲಿಯೂ ವಿಶೇಷ ಸಾಧನೆ ಮಾಡಿರುವ ಡಿ.ಟಿ. ಶ್ರೀನಿವಾಸ್ ಅವರು ಹಲವು ಉನ್ನತ ಪದವಿ ಪಡೆದಿದ್ದಾರೆ. ಶಿಕ್ಷಣ ತಜ್ಞರಾಗಿ ಗುರುತಿಸಿ ಕೊಂಡಿರುವ ಅವರು ಸಮಾಜದ ಅಭಿವೃದ್ಧಿಗೆ ನಿರಂತರವಾಗಿ ಶ್ರಮಿಸುತ್ತಿದ್ದಾರೆ. ಕರ್ನಾಟಕ ರಾಜ್ಯ ಪ್ರವರ್ಗ-1ರ ಜಾತಿಗಳ ಒಕ್ಕೂಟದ ಅಧ್ಯಕ್ಷರಾಗಿ ಸುಮಾರು 95ಕ್ಕೂ ಹೆಚ್ಚು ಅತಿ ಹಿಂದುಳಿದ ಸಮುದಾಯಗಳನ್ನು ಸಂಘಟಿಸಿ ಅವರ ಹಕ್ಕುಗಳಿಗಾಗಿ ಹೋರಾಟ ನಡೆಸುತ್ತಿದ್ದಾರೆಂದು ಹೇಳಿದರು.

ರಾಜ್ಯದ ಹಿಂದುಳಿದ ವರ್ಗಗಳ ಆಶೋತ್ತರಗಳನ್ನು ಸಚಿವ ಸಂಪುಟದಲ್ಲಿ ಸಮರ್ಥವಾಗಿ ಪ್ರತಿನಿಧಿಸುವ ಸಾಮರ್ಥ್ಯ ಡಿ.ಟಿ.ಶ್ರೀನಿವಾಸ್ ಅವರಿಗಿದೆ. ಅವರಿಗೆ ಸಚಿವ ಸ್ಥಾನ ನೀಡಿಯಾದವ ಸಮುದಾಯ ಹಾಗು ಪ್ರವರ್ಗ-1ರ ಸಮುದಾಯಗಳಿಗೆ ನ್ಯಾಯ ಒದಗಿಸಬೇಕು. ಶ್ರೀನಿವಾಸ್ ಅವರ ಸಚಿವ ಸಂಪುಟ ಸೇರ್ಪಡೆಯಿಂದ ಹಿಂದುಳಿದ ವರ್ಗಗಳ ಧ್ವನಿ ಸರ್ಕಾರದಲ್ಲಿ ಮತ್ತಷ್ಟು ಬಲವಾಗಿ ಪ್ರತಿಧ್ವನಿಸಲಿದೆ ಎಂದು ಹೇಳಿದರು.

ಪತ್ರಿಕಾಗೋಷ್ಠಿಯಲ್ಲಿ ಸಂಚಾಲಕ ನಾಗೇಶ್, ಗೋವಿಂದರಾಜು, ಕೃಷ್ಣಪ್ಪ, ಹೊನ್ನೇಗೌಡ, ಕೇಶವೇಗೌಡ ಇದ್ದರು.

# ಕೆ.ಹೆಚ್.ಮುನಿಯಪ್ಪಗೆ ಡಿಸಿಎಂ ಸ್ಥಾನ ನೀಡಲು ಆಗ್ರಹ

» ಮೊದಲನೇ ಪುಟದಿಂದ

ನೀಡುವುದರಿಂದ ಸಮುದಾಯಕ್ಕೆ ನ್ಯಾಯ ದೊರೆಯುವುದರ ಜೊತೆಗೆ ಪಕ್ಷದ ಮೇಲಿನ ವಿಶ್ವಾಸವೂ ಮತ್ತಷ್ಟು ಬಲಗೊಳ್ಳಲಿದೆ ಎಂದರು.

ಎಐಸಿಸಿ ಅಧ್ಯಕ್ಷರು, ಕಾಂಗ್ರೆಸ್ ರಾಷ್ಟ್ರೀಯ ನಾಯಕರು ಹಾಗು ರಾಜ್ಯ ಕಾಂಗ್ರೆಸ್‌ನಾಯಕರಿಗೆ ಬಹಿರಂಗ ಪತ್ರ ಬರೆದಿದ್ದು, ಮುನಿಯಪ್ಪ ಅವರು ಹಲವು ದಶಕಗಳಿಂದ ಕಾಂಗ್ರೆಸ್ ಪಕ್ಷದ ಕಟ್ಟಾಳುವಾಗಿ ಸೇವೆ ಸಲ್ಲಿಸಿದ್ದಾರೆ. ಪಕ್ಷದ ಏಳಿಗೆಗಾಗಿ ಮಹತ್ವದ ಕೊಡುಗೆ ನೀಡಿದ್ದಾರೆ. ಅವರ ಹಿರಿತನ, ಅನುಭವ ಹಾಗೂ ರಾಜಕೀಯ ಸೇವೆ ಪರಿಗಣಿಸಿ ಡಿಸಿಎಂ ಸ್ಥಾನ ನೀಡಬೇಕೆಂದು ಒತ್ತಾಯಿಸಿದರು.

ಡಿಸಿಎಂ ಸ್ಥಾನದ ಜೊತೆಗೆ ಕಂದಾಯ, ಗೃಹ, ಲೋಕೋಪಯೋಗಿ, ಸಹಕಾರ ಅಥವಾ ಇಂಧನ ಇಲಾಖೆಗಳಂತಹ ಪ್ರಮುಖ ಖಾತೆ ನೀಡಬೇಕು. ಅದಕ್ಕಾಗಿ ರಾಹುಲ್ ಗಾಂಧಿ, ಮಲ್ಲಿಕಾರ್ಜುನ ಖರ್ಗೆ, ಸೋನಿಯಾ ಗಾಂಧಿ, ಕೆ.ಸಿ. ವೇಣು ಗೋಪಾಲ್ ಹಾಗೂ ರಾಜ್ಯ ಉಸ್ತುವಾರಿಗಳು ಗಂಭೀರವಾಗಿ ಪರಿಗಣಿಸಬೇಕೆಂದರು. ರಾಜ್ಯದಲ್ಲಿ 50 ಲಕ್ಷಕ್ಕೂ ಅಧಿಕ ಜನಸಂಖ್ಯೆ ಹೊಂದಿರುವ ನಮ್ಮ ಸಮುದಾಯದ ಆಶಯವನ್ನು ಕಾಂಗ್ರೆಸ್ ಈಡೇರಿಸಬೇಕೆಂದು ಆಗ್ರಹಿಸಿದರು.

ಮಹಾಸಭಾದ ಮುಖಂಡರಾದ ಸತೀಶ್ ಕಡಗ, ತಿರುಪತಿಹಳ್ಳಿ ಮುನಿಸ್ವಾಮಿ, ಶಿವಣ್ಣ, ನಾಗರಾಜು, ಭೈರೇಶ್ ಇದ್ದರು.



# 70 ಲ. ರೂ. ವೆಚ್ಚದ ಕಾಮಗಾರಿಗೆ ಚಾಲನೆ

• ಪ್ರಜೋದಯ ವರದಿ

**ಹಾಸನ:** ನಗರದ ಸತ್ಯಮಂಗಲ ವ್ಯಾಪ್ತಿಯಲ್ಲಿ 70 ಲಕ್ಷ ರೂ. ಅನುದಾನದಲ್ಲಿ ಕೈಗೊಳ್ಳಲಾಗುತ್ತಿರುವ ರಸ್ತೆ, ಚರಂಡಿ ಹಾಗು ತಡೆಗೋಡೆ ನಿರ್ಮಾಣ ಕಾಮಗಾರಿಗೆ ಶಾಸಕ ಹೆಚ್.ಪಿ.ಸ್ವರೂಪ್ ಅವರು ಸೋಮವಾರ ಭೂಮಿ ಪೂಜೆ ನೆರವೇರಿಸಿದರು.

ಈ ವೇಳೆ ಮಾತನಾಡಿದ ಅವರು, ಕಾಮಗಾರಿಗಳನ್ನು ಗುಣಮಟ್ಟದಿಂದ ಹಾಗು ನಿಗದಿತ ಅವಧಿಯೊಳಗೆ ಪೂರ್ಣಗೊಳಿಸಿ ಸಾರ್ವಜನಿಕರಿಗೆ ಅನುಕೂಲ ಕಲ್ಪಿಸುವಂತೆ ಸ್ಥಳದಲ್ಲಿದ್ದ ಗುತ್ತಿಗೆದಾರರು ಮತ್ತು ಅಧಿಕಾರಿಗಳಿಗೆ ಸೂಚನೆ ನೀಡಿದರು. ಸ್ಥಳೀಯ ಮುಖಂಡರು, ಕಾರ್ಯಕರ್ತರು, ಸಾರ್ವಜನಿಕರು ಉಪಸ್ಥಿತರಿದ್ದರು.

# ಮತ್ತೆ ವಾಣಿಜ್ಯ ಬಳಕೆ ಸಿಲಿಂಡರ್ ಬೆಲೆ ಏರಿಕೆ

• ಪ್ರಜೋದಯ ವರದಿ

**ನವದೆಹಲಿ:** ಜಾಗತಿಕ ಇಂಧನ ಬಿಕ್ಕಟ್ಟಿನ ನಡುವೆ ದೇಶದಲ್ಲಿ ಮತ್ತೆ ಜನರಿಗೆ ಬೆಲೆ ಏರಿಕೆಯ ಬಿಸಿ ತಟ್ಟಲಿದೆ. 19 ಕೆ.ಜಿ. ತೂಕದ ವಾಣಿಜ್ಯ ಬಳಕೆಯ ಎಲ್‌ಪಿಜಿ ಸಿಲಿಂಡರ್ ಬೆಲೆ 42 ರೂ. ಹೆಚ್ಚಳವಾಗಿದೆ. ಪರಿಷ್ಕೃತ ದರ ಸೋಮವಾರದಿಂದಲೇ ಅಸ್ತಿತ್ವಕ್ಕೆ ಬಂದಿದೆ.

ಬೆಂಗಳೂರಿನಲ್ಲಿ ವಾಣಿಜ್ಯ ಎಲ್‌ಪಿಜಿ ಸಿಲಿಂಡರ್ ದರ 46 ರೂ. ಏರಿಕೆಯಾಗಿ, 3,198 ರೂ.ಗೆ ತಲುಪಿದೆ. ಕಳೆದ ತಿಂಗಳು ಕಮರ್ಷಿಯಲ್ ಸಿಲಿಂಡರ್ ದರ 991 ರೂ. ಏರಿಕೆ ಆಗಿ 3,152 ರೂ. ಆಗಿತ್ತು. ಸದ್ಯ ಬೆಂಗಳೂರಿನಲ್ಲಿ ಗೃಹಬಳಕೆ ಸಿಲಿಂಡರ್ ಬೆಲೆ 915.50 ರೂಪಾಯಿ ಇದೆ. ದೆಹಲಿಯಲ್ಲಿ ವಾಣಿಜ್ಯ ಸಿಲಿಂಡರ್ ರಿಟೇಲ್ ದರ 3,113.50 ರೂ.ಗೆ ಏರಿಕೆಯಾಗಿದೆ. ಹೋಟೆಲ್, ರೆಸ್ಟೋರೆಂಟ್ ಮತ್ತು ಉದ್ಯಮಗಳಿಗೆ ಈ ದರ ಏರಿಕೆ ಇನ್ನಷ್ಟು ಆರ್ಥಿಕ ಹೊರೆಯಾಗಿ ಪರಿಣಮಿಸಲಿದೆ.

ಕೋಲ್ಕತ್ತಾದಲ್ಲಿ 19 ಕೆ.ಜಿ. ವಾಣಿಜ್ಯ ಸಿಲಿಂಡರ್ ಬೆಲೆ ಬರೋಬ್ಬರಿ 53.50 ರೂ. ಹೆಚ್ಚಳವಾ ಗಿದ್ದು, 3,255.50 ಕ್ಕೆ ತಲುಪಿದೆ. ಅದರೊಂದಿಗೆ, 5 ಕೆ.ಜಿ. ತೂಕದ ಫ್ರೀ ಟ್ರೇಡ್ ಎಲ್‌ಪಿಜಿ ಸಿಲಿಂಡರ್‌ಗಳ ಬೆಲೆಯನ್ನೂ ಸಹ 11 ರೂ. ನಷ್ಟು ಹೆಚ್ಚಿಸಲಾಗಿದ್ದು, ದೆಹಲಿಯಲ್ಲಿ ಇದರ ನೂತನ ದರ 821.50 ರೂ. ಆಗಿದೆ. ಸಾಮಾನ್ಯ ಜನರು ಬಳಸುವ ಗೃಹ ಬಳಕೆಯ ಸಿಲಿಂಡರ್ ದರದಲ್ಲಿ ಯಾವುದೇ ಬದಲಾವಣೆ ಮಾಡಲಾಗಿಲ್ಲ. ಮೇ 1 ರಂದು ಸಹ ತೈಲ ಮಾರುಕಟ್ಟೆ ಕಂಪನಿ ಗಳು ವಾಣಿಜ್ಯ ಸಿಲಿಂಡರ್ ಬೆಲೆಯನ್ನು ಬರೋ ಬ್ಬರಿ 993 ರೂ. ನಷ್ಟು ದರ ಹೆಚ್ಚಳ ಮಾಡಿದ್ದವು. ಆ ನಂತರ ಬೆಂಗಳೂರಿನಲ್ಲಿ ವಾಣಿಜ್ಯ ಸಿಲಿಂಡರ್ ಬೆಲೆ ಸಾರ್ವಕಾಲಿಕ ಗರಿಷ್ಠ ಮಟ್ಟವಾದ 3,152 ರೂ.ಗೆ ತಲುಪಿತ್ತು.



**ದಾಸ್ತಾನು ಕಾಯ್ದುಕೊಳ್ಳಲು ಸೂಚನೆ**

ದೇಶದ ಇಂಧನ ಭದ್ರತೆಯನ್ನು ಬಲಪಡಿಸಲು ಮತ್ತು ಅಗತ್ಯ ಪ್ರಮಾಣದ ಪೆಟ್ರೋಲಿಯಂ ಉತ್ಪನ್ನಗಳನ್ನು ಕಾಯ್ದುಕೊಳ್ಳಲು ಸರ್ಕಾರ ನಿರಂತರ ಶ್ರಮಿಸುತ್ತಿದೆ. ತೈಲ ಮಾರುಕಟ್ಟೆ ಕಂಪನಿ ಗಳಿಗೆ ಕನಿಷ್ಠ 30 ದಿನಗಳ ಕಾಲ ದೇಶದಲ್ಲಿ ಎಲ್‌ಪಿಜಿ ದಾಸ್ತಾನು ಕಾಯ್ದುಕೊಳ್ಳುವಂತೆ ಕಟ್ಟು ನಿಟ್ಟಿನ ನಿರ್ದೇಶನ ನೀಡಲಾಗಿದೆ ಎಂದು ಇಂಧನ ಸಚಿವಾಲಯದ ಜಂಟಿ ಕಾರ್ಯದರ್ಶಿ ಸುಜಾತಾ ಶರ್ಮಾ ತಿಳಿಸಿದ್ದಾರೆ.

# ನಿವೃತ್ತ ಕೃಷಿ ಅಧಿಕಾರಿ ಸೋಮಶೇಖರಯ್ಯಗೆ ಅಭಿನಂದನೆ

• ಪ್ರಜೋದಯ ವರದಿ

**ಅರಸೀಕೆರೆ:** ಕೃಷಿ ಇಲಾಖೆಯಲ್ಲಿ ಸುದೀರ್ಘ ಸೇವೆ ಸಲ್ಲಿಸಿ ವಯೋನಿವೃತ್ತರಾದ ಪಿ.ಸೋಮಶೇಖರಯ್ಯ ಅವರಿಗೆ ಪಕ್ಷಾತೀತವಾಗಿ ರಾಜಕಾರಣಿಗಳು ಹಾಗೂ ಅವರ ಹಿತೈಷಿ ಬಳಗ ನಿವೃತ್ತಿ ಜೀವನ ಸುಖಮಯವಾಗಿರಲಿ ಎಂದು ಶುಭ ಹಾರೈಸಿದ್ದಾರೆ.

ತಾಲ್ಲೂಕಿನವರೇಯಾದ ಸೋಮಶೇಖರಯ್ಯ ಅವರು ಅರಸೀಕೆರೆ ಸೇರಿ ರಾಜ್ಯದ ನಾನಾ ಭಾಗಗಳಲ್ಲಿ ಕೃಷಿ ಇಲಾಖೆ ಅಧಿಕಾರಿಯಾಗಿ ಸೇವೆ ಸಲ್ಲಿಸಿದ್ದರಲ್ಲದೆ ಅವರಿಗಿದ್ದ ಜನಪರ ಸೇವಾ ಮನೋಭಾವದಿಂದ ಇಲಾಖೆಯ ಸಿಬ್ಬಂದಿ, ಮೇಲಾಧಿಕಾರಿಗಳು ಹಾಗೂ ರೈತಾಪಿ ಜನಗಳ ಮೆಚ್ಚಿಗೆ ಪಾತ್ರರಾಗಿದ್ದರು. ಕೃಷಿ ಇಲಾಖೆಯಲ್ಲಿ ಸೇವೆ ಸಲ್ಲಿಸಿ ನಿವೃತ್ತಿಯಾಗಿ ಹಿಂದಿರುಗಿದ ಸೋಮಶೇಖರಯ್ಯ ಅವರನ್ನು ಅವರ ಹಿತೇಶಿ ವಕೀಲ ವಿವೇಕ್ ನೇತೃತ್ವದಲ್ಲಿ ಅಭಿನಂದಿಸಿ ಗೌರವಪೂರ್ವಕವಾಗಿ ಬರಮಾಡಿಕೊಂಡರು.

ವಕೀಲ ವಿವೇಕ್ ಅವರು ಮಾತನಾಡಿ, ಅಧಿಕಾರವಾಗಲಿ ಐಶ್ವರ್ಯವಾಗಲಿ ಒಬ್ಬರ ಬಳಿಯೇ ಶಾಶ್ವತವಾಗಿ ಉಳಿಯುವುದಿಲ್ಲ. ಅಧಿಕಾರ ಮತ್ತು ಐಶ್ವರ್ಯ ವಿದ್ದಾಗ ನಾವು ಮಾಡುವ ದಾನ ಧರ್ಮ ಜನಪರ ಕೆಲಸ ಕಾರ್ಯಗಳು ಶಾಶ್ವತವಾಗಿ ಉಳಿಯುತ್ತವೆ. ಅಂತಹ ಸಾರ್ಥಕ ಹಾಗೂ ಇತರರಿಗೆ ಆದರ್ಶವಾದ ವ್ಯಕ್ತಿತ್ವದ ಗುಣ ಸೋಮಶೇಖರ್ ಅವರದ್ದು ಎಂದು ಗುಣಗಾನ ಮಾಡಿದರು.




ನಗರಸಭೆ ಮಾಜಿ ಅಧ್ಯಕ್ಷ ಗಿರೀಶ್ ಅವರು ಮಾತನಾಡಿ, ಸೋಮಣ್ಣ ಕೃಷಿ ಅಧಿಕಾರಿಯಾಗಿ ಕಚೇರಿಯಲ್ಲಿ ಕೆಲಸ ಮಾಡುವುದಕ್ಕಿಂತ ಕೃಷಿ ಭೂಮಿಯಲ್ಲಿ ರೈತರ ಒಡಗೂಡಿ ಅವರ ನೋವು ನಲಿವನ್ನು ಹತ್ತಿರದಿಂದ ಅಧ್ಯಯನ ಮಾಡುತ್ತಿದ್ದ ಸಾರ್ಥಕ ಕೃಷಿ ಇಲಾಖೆ ಅಧಿಕಾರಿ ಎನಿಸಿ ಕೊಂಡವರು. ಇಂದು ನಿವೃತ್ತಿ ಹೊಂದಿದ್ದರು ತಾಲ್ಲೂಕಿನ ರೈತರಿಗೆ ಅವರ ಮಾರ್ಗದರ್ಶನ ನಿರಂತರವಾಗಿ ಸಿಗಲಿ ಎಂದು ಆಶಯ ವ್ಯಕ್ತಪಡಿಸಿದರು.

ಗಂಡಸಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಮೆಟ್ರೋ ಬಾಬು ಮಾತನಾಡಿ, ಬಯಲುಸೀಮೆ ತಾಲ್ಲೂಕಾಗಿರುವ ಅರಸೀಕೆರೆಯಲ್ಲಿ ಬರಡು ಭೂಮಿ ಅಭಿವೃದ್ಧಿ ಯೋಜನೆಗಳನ್ನು ತಾಲ್ಲೂಕಿನಲ್ಲಿ ಸಮರ್ಪಕವಾಗಿ ಅನುಷ್ಠಾನಕ್ಕೆ ತರಲು ಪ್ರಾಮಾಣಿಕವಾಗಿ ಪ್ರಯತ್ನ ಮಾಡಿದ್ದರಿಂದ ಸೋಮಶೇಖರಯ್ಯವರನ್ನು ತಾಲ್ಲೂಕಿನ ಜನತೆ ಡಿಎಲ್‌ಡಿಬಿ ಸೋಮಣ್ಣ ಎಂದು ಪ್ರೀತಿಯಿಂದ ಕರೆಯುತ್ತಾರೆಂದರು.

ಹಿತೈಷಿಗಳ ಅಭಿನಂದನೆಯನ್ನು ಸ್ವೀಕರಿಸಿ ಮಾತನಾಡಿದ ಸೋಮಶೇಖರಯ್ಯ ಕೃಷಿ ಇಲಾಖೆ ನೌಕರನಾಗಿ ರೈತರ ಸೇವೆ ಮಾಡಲು ಅವಕಾಶ ಮಾಡಿಕೊಟ್ಟಂತಹ ಭಗವಂತನಿಗೆ ನಾನು ಭಕ್ತಿಪೂರ್ವಕ ನಮನಗಳನ್ನು ಸಲ್ಲಿಸುತ್ತೇನೆ. ನನ್ನ ಈ ಸೇವಾ ಕಾರ್ಯಕ್ಕೆ ಸಹಕರಿಸಿದ ನನ್ನ ಕುಟುಂಬ, ಮಾರ್ಗ ದರ್ಶನ ನೀಡಿದ ಹಿರಿಯ ಅಧಿಕಾರಿಗಳು, ನನ್ನೊಟ್ಟಿಗೆ ಕೆಲಸ ಮಾಡಿದ ಎಲ್ಲಾ ಸಿಬ್ಬಂದಿಗಳಿಗೂ ನಾನು ಚಿರ ಋಣಿಯಾಗಿದ್ದೇನೆಂದು ತಮ್ಮ ಮನದಾಳದ ಮಾತನ್ನು ಹಂಚಿಕೊಂಡರು.

ಜಿಲ್ಲಾ ಜನತಾ ಬಜಾರ್ ಸಹಕಾರ ಸಂಘದ ಅಧ್ಯಕ್ಷ ಗಂಡಸಿ ಮಂಜಣ್ಣ, ಉದ್ಯಮಿಗಳಾದ ಜ್ಞಾನೇಶ್, ಸಿದ್ದೇಶ್ ಇತರರು ಉಪಸ್ಥಿತರಿದ್ದರು.

# ನೀಟ್ ಮರುಪರೀಕ್ಷೆಗೆ ಸಿಬಿಟಿ ಮಾದರಿ: ಸುಪ್ರೀಂ ನಕಾರ

**ನವದೆಹಲಿ:** ಜೂನ್ 21ಕ್ಕೆ ನಿಗದಿಯಾಗಿರುವ ನೀಟ್-ಯುಜಿ 2026ರ ಮರುಪರೀಕ್ಷೆಯನ್ನು ಕಂಪ್ಯೂಟರ್ ಮೂಲಕ (ಕಂಪ್ಯೂಟರ್ ಬೇಸ್ಡ್ ಟೆಸ್ಟ್ ಸಿಬಿಟಿ) ನಡೆಸಲು ನಿರ್ದೇಶನ ನೀಡಬೇಕೆಂದು ಕೋರಿ ಸಲ್ಲಿಸಲಾದ ಅರ್ಜಿಯನ್ನು ತಕ್ಷಣ ಪರಿಗಣಿಸಲು ಸುಪ್ರೀಂ ಕೋರ್ಟ್ ಸೋಮವಾರ ನಿರಾಕರಿಸಿದೆ.

ನ್ಯಾಯಮೂರ್ತಿಗಳಾದ ಪಿ.ಎಸ್.ನರಸಿಂಹ ಮತ್ತು ಅರವಿಂದ ಕುಮಾರ್ ಅವರ ಪೀಠವು, ಈ ವಿಷಯದ ತ್ವರಿತ ವಿಚಾರಣೆಗೆ ಒಲವು ತೋರುವುದಿಲ್ಲ ಎಂದು ಸ್ಪಷ್ಟಪಡಿಸಿತು. ಅರ್ಜಿದಾರರನ್ನು ಪ್ರತಿನಿಧಿಸಿದ ವಕೀಲ ಸತ್ಯಂ ಸಿಂಗ್ ಅವರು ಪರೀಕ್ಷೆಯನ್ನು ಸಿಬಿಟಿ ಮಾದರಿಯಲ್ಲಿ ನಡೆಸಬೇಕೆಂದು ಪೀಠವನ್ನು ಒತ್ತಾಯಿಸಿದರು.

ಇದೇ ರೀತಿಯ ಅರ್ಜಿಗಳನ್ನು ಈಗಾಗಲೇ ವಜಾಗೊಳಿಸಲಾಗಿದೆ ಎಂದು ಹೇಳಿದ ನ್ಯಾಯಮೂರ್ತಿ ನರಸಿಂಹ, ನೀಟ್-ಯುಜಿ ಮರುಪರೀಕ್ಷೆ ನಡೆಸಲು ಇರುವ ಸವಾಲುಗಳನ್ನು ಎತ್ತಿ ತೋರಿಸಿದರು. ರಾಷ್ಟ್ರೀಯ ಪರೀಕ್ಷಾ ಏಜೆನ್ಸಿಯಲ್ಲಿನ (ಎನ್‌ಟಿಎ) ಸುಧಾರಣೆಗಳು ಮತ್ತು ಪ್ರಶ್ನೆಪತ್ರಿಕೆ ಸೋರಿಕೆ ಪ್ರಕರಣಗಳಿಗೆ ಸಂಬಂಧಿಸಿದ ಅರ್ಜಿಗಳೊಂದಿಗೆ ಈ ಅರ್ಜಿಯನ್ನು ಜುಲೈನಲ್ಲಿ ವಿಚಾರಣೆಗೆ ಕೈಗೆತ್ತಿಕೊಳ್ಳಲಾಗುವುದೆಂದು ಪೀಠವು ಹೇಳಿತು.

ಮುಂದಿನ ವರ್ಷದಿಂದ (2027) ನೀಟ್-ಯುಜಿಗೆ ಕಂಪ್ಯೂಟರ್ ಮೂಲಕ ಪರೀಕ್ಷೆ ನಡೆಸಲು ಸಿದ್ಧವಾಗಿರುವುದಾಗಿ ಎನ್‌ಟಿಎ ಈಗಾಗಲೇ ಸುಪ್ರೀಂ ಕೋರ್ಟ್‌ಗೆ ತಿಳಿಸಿದೆ.

# ಪ್ರವೇಶಕ್ಕೆ ಅರ್ಜಿ ಆಹ್ವಾನ

• ಪ್ರಜೋದಯ ವರದಿ

**ಹಾಸನ:** ತಾಲ್ಲೂಕಿನ ಮೊಸಳೆ ಹೊಸಹಳ್ಳಿ ಸರ್ಕಾರಿ ಪಾಲಿಟೆಕ್ನಿಕ್ ಕಾಲೇಜಿನಲ್ಲಿ 2026-27ನೇ ಸಾಲಿನ ಪ್ರವೇಶಕ್ಕೆ ಪ್ರಥಮ ವರ್ಷದ ಸಿವಿಲ್, ಕಂಪ್ಯೂಟರ್ ಸೈನ್ಸ್ ವಿಭಾಗಗಳಲ್ಲಿ ಸೀಟುಗಳು ಲಭ್ಯವಿದ್ದು, ಎಸ್.ಎಸ್.ಎಲ್.ಸಿ./ತತ್ಸಮಾನ ಪರೀಕ್ಷೆಯಲ್ಲಿ ಉತ್ತೀರ್ಣರಾದ ಅಭ್ಯರ್ಥಿಗಳು ಮೊದಲನೇ ವರ್ಷಕ್ಕೆ ಆಫ್ ಲೈನ್ ಮೂಲಕ ಕಾಲೇಜಿನಲ್ಲಿ ಪ್ರವೇಶ ಪಡೆಯಬಹುದಾಗಿರುತ್ತದೆ ಹಾಗೂ ಹೆಚ್ಚಿನ ಮಾಹಿತಿಗಾಗಿ ದೂ: 90197 48969, 7259787711, 97382 81913ಗೆ ಸಂಪರ್ಕಿಸಬಹುದೆಂದು ಮೊಸಳೆಹೊಸಹಳ್ಳಿ ಸರ್ಕಾರಿ ಪಾಲಿಟೆಕ್ನಿಕ್ ಕಾಲೇಜಿನ ಪ್ರಾಂಶುಪಾಲರು ತಿಳಿಸಿದ್ದಾರೆ.

# ವಿದ್ಯುತ್ ವ್ಯತ್ಯಯ

**ಹಾಸನ:** ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ ಬೇಲೂರು, ಗೆಂಡೇಹಳ್ಳಿ ಮತ್ತು ಮೊಸಳೆಹೊಸಹಳ್ಳಿ ವಿ.ವಿ. ಕೇಂದ್ರದಲ್ಲಿ ತ್ರೈಮಾಸಿಕ ನಿರ್ವಹಣಾ ಕೆಲಸ ಹಮ್ಮಿಕೊಂಡಿರುವುದರಿಂದ ಜೂನ್ 3 ರಂದು ಬೆಳಿಗ್ಗೆ 10 ಗಂಟೆಯಿಂದ 6ರವರೆಗೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗುವುದಾಗಿ ತಿಳಿಸಿದ್ದಾರೆ.

# ವಿಜ್ಞಾನ ವಿಭಾಗಕ್ಕೆ ಉಚಿತ ಪ್ರವೇಶಾವಕಾಶ

• ಪ್ರಜೋದಯ ವರದಿ

**ಅರಕಲಗೂಡು:** ತಾಲ್ಲೂಕಿನ ಕೊಣನೂರು ಪಿ.ಎಂ.ಶ್ರೀ ಸರ್ಕಾರಿ ಸಂಯುಕ್ತ ಪದವಿ ಪೂರ್ವ ಕಾಲೇಜಿನಲ್ಲಿ ಪ್ರಥಮ ಪಿಯುಸಿಗೆ ಪ್ರವೇಶಾತಿ ಆರಂಭವಾಗಿದ್ದು ಇದುವರೆಗೂ ಪ್ರಥಮ ಪಿಯುಸಿ ಕಲಾ ವಿಭಾಗಕ್ಕೆ 25, ವಿಜ್ಞಾನ ವಿಭಾಗಕ್ಕೆ 22, ವಾಣಿಜ್ಯ ವಿಭಾಗಕ್ಕೆ 25 ಒಟ್ಟು 72 ವಿದ್ಯಾರ್ಥಿಗಳು ದಾಖಲಾತಿ ಪಡೆದಿದ್ದು ಇನ್ನೂ ಹೆಚ್ಚಿನ ವಿದ್ಯಾರ್ಥಿಗಳು ದಾಖಲಾತಿ ಪಡೆಯು ವಂತೆ ಹಾಗೂ ವಿಜ್ಞಾನ ವಿಭಾಗಕ್ಕೆ ಪ್ರವೇಶ ಪಡೆಯುವ ವಿದ್ಯಾರ್ಥಿಗಳಿಗೆ ಉಚಿತ ಪ್ರವೇಶಾವ ಕಾಶ ಕಲ್ಪಿಸಲಾಗಿದೆ ಎಂದು ಪ್ರಾಂಶುಪಾಲ ಹೆಚ್.ಆರ್. ಗಿರೀಶ್ ಅವರು ಕೋರಿದರು.



ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ದಾಖಲಾತಿ ಪಡೆಯಲು ಜೂನ್ 30 ಕಡೆಯ ದಿನವಾಗಿದೆ. ನಮ್ಮ ಕಾಲೇಜಿನಲ್ಲಿ ಉತ್ತಮ ಉಪನ್ಯಾಸಕರಿಂದ ಬೋಧನೆ, ಗ್ರಂಥಾಲಯ, ಪ್ರತ್ಯೇಕ ಕ್ರೀಡಾ ಕೊಠಡಿ, ವಿದ್ಯಾರ್ಥಿಗಳಿಗೆ ಸ್ಮಾರ್ಟ್ ಕ್ಲಾಸ್ ಮೂಲಕ ಬೋಧನೆ, ಉತ್ತಮ ವಿಜ್ಞಾನ ಪ್ರಯೋಗಾಲಯ, ವಿದ್ಯಾರ್ಥಿಗಳಿಗೆ ವಿದ್ಯಾಸಿರಿ ಯೋಜನೆ, ಸಾಂಸ್ಕೃತಿಕ ಚಟುವಟಿಕೆಗಳು, ವಿದ್ಯಾರ್ಥಿನಿಯರಿಗೆ ಹಾಸ್ಟೆಲ್ ವ್ಯವಸ್ಥೆ, ಹೆಣ್ಣು ಮಕ್ಕಳ ಬಗ್ಗೆ ವಿಶೇಷ ಕಾಳಜಿ, ವಿದ್ಯಾರ್ಥಿ ವೇತನ ವ್ಯವಸ್ಥೆ, ಬಸ್ ಪಾಸ್ ವ್ಯವಸ್ಥೆ, ರೋವರ್ಸ್ ಮತ್ತು ರೇಂಜರ್ಸ್ ಘಟಕ, ಸೇವಾದಳ, ಸಿಸಿ ಕ್ಯಾಮೆರಾ ಕಣ್ಗಾವಲು ಇರುವ ಸುಸಜ್ಜಿತ ಕಾಲೇಜು ಕಟ್ಟಡಗಳು, ಕುಡಿಯುವ ನೀರು ಹಾಗೂ ಶೌಚಾಲಯ ವ್ಯವಸ್ಥೆ, ಉದ್ಯೋಗ ಘಟಕ, ಕ್ರೀಡೆಗೆ ಹೆಚ್ಚು ಪ್ರೋತ್ಸಾಹ, ಪ್ರಥಮ ಪಿಯುಸಿಯಲ್ಲಿ ಅನುತ್ತೀರ್ಣಗೊಂಡ ವಿದ್ಯಾರ್ಥಿಗಳಿಗೂ ಪ್ರವೇಶ ಅವಕಾಶ, ವಿದ್ಯಾರ್ಥಿಗಳಿಗೆ ಅನುಭವಾತ್ಮಕ ಮತ್ತು ಪ್ರಯೋಗಾತ್ಮಕ ಕಲಿಕೆಗೆ ವಿಶೇಷ ಒತ್ತು, ಕಾಲೇಜಿಗೆ ಗೈರು ಆಗುವ ವಿದ್ಯಾರ್ಥಿಗಳ ಬಗ್ಗೆ ಪೋಷಕರಿಗೆ ಫೋನ್ ಕರೆ ಮೂಲಕ ಮಾಹಿತಿ ಮತ್ತು ವಿಶೇಷ ಗಮನ, ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಎದುರಿಸಲು ಮತ್ತು ಪರೀಕ್ಷೆಗಳಲ್ಲಿ ಉತ್ತೀರ್ಣರಾಗಿ ಉದ್ಯೋಗಗಳಿಸಿಕೊಳ್ಳಲು ತರಬೇತಿ ಮುಂತಾದ ಸೌಲಭ್ಯಗಳಿದ್ದು ಕಳೆದ ಸಾಲಿನಲ್ಲಿ ವಿಜ್ಞಾನ ವಿಭಾಗದಲ್ಲಿ ಶೇ.100, ವಾಣಿಜ್ಯ ವಿಭಾಗದಲ್ಲಿ ಶೇ.92 ಹಾಗೂ ಕಲಾ ವಿಭಾಗದಲ್ಲಿ ಶೇ.72 ಫಲಿತಾಂಶ ಬಂದಿರುತ್ತದೆ. ಗ್ರಾಮೀಣ ಭಾಗದ ವಿದ್ಯಾರ್ಥಿಗಳು ಕಾಲೇಜಿಗೆ ದಾಖಲಾಗುವ ಮೂಲಕ ಸರ್ಕಾರಿ ಕಾಲೇಜನ್ನು ಉಳಿಸಿ ಬೆಳೆಸಬೇಕೆಂದರು.


## ವಿಶ್ವ ಹಿಂದೂ ಪರಿಷತ್ ಮುಖಂಡರನ್ನು ನಿಂದಿಸಿ, ಬೆದರಿಕೆ ಹಾಕಿದ ಆರೋಪ

# ಡಿವೈಎಸ್‌ಪಿ ವಿರುದ್ಧ ಹಿಂದೂಪರ ಸಂಘಟನೆ ಪ್ರತಿಭಟನೆ

• ಪ್ರಜೋದಯ ವರದಿ

**ಸಕಲೇಶಪುರ:** ಡಿವೈಎಸ್‌ಪಿ ಮಾಲತೀಶ್ ಅವರು ಬಜರಂಗದಳ ಹಾಗು ವಿಶ್ವ ಹಿಂದೂ ಪರಿಷತ್ ಮುಖಂಡರನ್ನು ನಿಂದಿಸಿ, ಬೆದರಿಕೆ ಹಾಕಿದ್ದಾರೆಂದು ಆರೋಪಿಸಿ ಡಿವೈಎಸ್‌ಪಿ ವಿರುದ್ಧ ಬಜರಂಗದಳ ಮತ್ತು ವಿಶ್ವ ಹಿಂದೂ ಪರಿಷತ್ ಕಾರ್ಯಕರ್ತರು ಸೋಮವಾರ ಪ್ರತಿಭಟನೆ ನಡೆಸಿದರು.

ಎರಡು ದಿನಗಳ ಹಿಂದೆ ಪಟ್ಟಣದ ಕುಶಾಲನಗರ ಬಡಾವಣೆಯಲ್ಲಿ ಗೋವಿನ ತಲೆಯನ್ನು ರಸ್ತೆಯಲ್ಲಿ ಇರಿಸಲಾಗಿದ್ದ ಪ್ರಕರಣವನ್ನು ಖಂಡಿಸಿ ಹಾಗು ಆರೋಪಿಗಳ ಬಂಧನಕ್ಕೆ ಒತ್ತಾಯಿಸಿ ಹಿಂದೂಪರ ಸಂಘಟನೆಗಳು ಕುಶಾಲನಗರ ಚಲೋ ಕಾರ್ಯಕ್ರಮ ಹಮ್ಮಿಕೊಂಡಿದ್ದವು. ಈ ಸಂಬಂಧ ಸಾಮಾಜಿಕ ಜಾಲತಾಣದಲ್ಲಿ ಪೋಸ್ಟ್ ಮಾಡಿದ್ದ ಬಜರಂಗದಳದ ಜಿಲ್ಲಾ ಸಹ ಸಂಯೋಜಕ ವಿಷ್ಣು ಹಾಗು ತಾಲ್ಲೂಕು ಸಂಯೋಜಕ ಸೃಜನ್ ಅವರನ್ನು ಡಿವೈಎಸ್‌ಪಿ ಕಚೇರಿಗೆ ಕರೆಸಿ, ರೌಡಿ ಶೀಟರ್ ತೆರೆಯುವುದಾಗಿ ಬೆದರಿಕೆ ಹಾಕಲಾಗಿದೆಂದು ಆರೋಪಿಸಿದರು.



ವಿಶ್ವ ಹಿಂದೂ ಪರಿಷತ್ ವಿಭಾಗ ಕಾರ್ಯದರ್ಶಿ ಮಹಿಪಾಲ್ ಅವರು ಮಾತನಾಡಿ, ಗೋ ರಕ್ಷಣೆಗಾಗಿ ಕಾರ್ಯನಿರ್ವಹಿಸುತ್ತಿರುವ ಕಾರ್ಯಕರ್ತರನ್ನೇ ಡಿವೈಎಸ್ಪಿ ಅವಮಾನಿಸಿರುವುದು ಖಂಡನೀಯ. ಸಂಘಟನೆಯ ಪ್ರಮುಖರಾದ ವಿಷ್ಣು ಹಾಗು ಸೃಜನ್ ಅವರನ್ನು ಠಾಣೆಗೆ ಕರೆಸಿಕೊಂಡು ಡಿವೈಎಸ್ಪಿ ಮತ್ತು ಪೊಲೀಸರು ಅವಾಚ್ಯ ಶಬ್ದಗಳಿಂದ ನಿಂದಿಸಿದ್ದಾರೆ. ಸಂಘ ಪರಿವಾರವು ಪೊಲೀಸರಿಗೆ ಗೌರವ ನೀಡುತ್ತದೆ. ಗೋ ರಕ್ಷಕರನ್ನು ಕರೆಸಿ ರೌಡಿಶೀಟರ್ ಹಾಕುವು ದಾಗಿ ಬೆದರಿಕೆ ಹಾಕುವುದು ಸರಿಯಲ್ಲ. ತಾಲ್ಲೂಕಿನಲ್ಲಿ ಮತಾಂತರ ಹಾಗು ಅಕ್ರಮವಾಗಿ ನೆಲೆಸಿರುವ ಬಾಂಗ್ಲಾದೇಶಿಯರ ವಿರುದ್ಧ ಕ್ರಮ ಕೈಗೊಳ್ಳದ ಅಧಿಕಾರಿಗಳು, ಗೋ ರಕ್ಷಕರ ವಿರುದ್ಧ ಕ್ರಮದ ಎಚ್ಚರಿಕೆ ನೀಡುತ್ತಿದ್ದಾರೆಂದು ಆಕ್ರೋಶ ವ್ಯಕ್ತಪಡಿಸಿದರು.

ಬಿಜೆಪಿ ತಾಲ್ಲೂಕು ಅಧ್ಯಕ್ಷ ವಳಲಹಳ್ಳಿ ಅಶ್ವತ್ಥ್ ಅವರು ಮಾತನಾಡಿ, ಗೋ ಹತ್ಯೆ ಆರೋಪಿಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವ ಬದಲು ಪ್ರತಿಭಟನೆ ನಡೆಸಲು ಮುಂದಾದ ಕಾರ್ಯ ಕರ್ತರನ್ನು ಬೆದರಿಸುವುದು ಸರಿಯಲ್ಲ. ಕಾರ್ಯಕರ್ತರನ್ನು ಅವಮಾನಿಸಿದ ಡಿವೈಎಸ್ಪಿ ಕ್ಷಮೆ ಕೇಳುವವರೆಗೂ ಹೋರಾಟ ಮುಂದುವರಿಯಲಿದೆ ಎಂದು ಹೇಳಿದರು.

ವಿಶ್ವ ಹಿಂದೂ ಪರಿಷತ್ ಜಿಲ್ಲಾ ಕಾರ್ಯದರ್ಶಿ ಕರಡಿಗಾಲ ಹರೀಶ್, ಮುಖಂಡರಾದ ಬಿರಡಹಳ್ಳಿ ಬಾಲಕೃಷ್ಣ, ನಂದನ್, ವಿಷ್ಣು, ಸೃಜನ್, ರಘು, ಮಹೇಂದ್ರ, ಬಿಜೆಪಿ ಮುಖಂಡರಾದ ಲೋಹಿತ್ ಜಂಬರಡಿ, ಅಗ್ನಿ ಸೋಮಶೇಖರ್, ಲೋಹಿತ್ ಕೌಡಳ್ಳಿ, ನಿಖಿಲ್, ಪುನೀತ್, ನವೀನ್ ಶೆಟ್ಟಿ, ಜೈಶಂಕರ್, ದೀಪಕ್, ದಯಾನಂದ್ ಇದ್ದರು.

ಪ್ರಜೋದಯ ದಿನಪತ್ರಿಕೆ, ಸಂಪಾದಕ, ಪ್ರಕಾಶಕ ಮತ್ತು ಮುದ್ರಕರು, ಜೆ.ಆರ್.ಕೆಂಚೇಗೌಡ, ಗಂಧದ ಕೋಠಿ ಹಿಂಭಾಗ, ಕೆ.ಆರ್.ಪುರಂ.ಹಾಸನ. ದೂರವಾಣಿ : 08172-231188, ಮೊ: 9449203019

C M Y K
C M Y K
C M Y K
C M Y K